ಶಿಶುನಾಳ ಶರೀಫ

ಡಾ: ಶಿವಾನಂದ ಗುಬ್ಬಣ್ಣವರ



ಕರ್ನಾಟಕ ಸಾಹಿತ್ಯ ಅಕಾಡೆಮಿ

ಸಾಮಾಜಿಕ ಚಿಂತನಮಾಲೆ

ಶಿಶುನಾಳ ಶರೀಫ್

ಶಿವಾನಂದ ಗುಬ್ಬಣ್ಣವರ

ಕರ್ನಾಟಕ ಸಾಹಿತ್ಯ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು - ೫೬೦ ೦೦೨

SHISHUNALA SHARIF - Written by Shivananda Gubbannavara and Published by Karnataka Sahitya Akademy, Nrupatunga Road, Bangalore-560 002.

First Publication - 1994 Pages : viii+86

ಹಕ್ಕುಗಳು : ಲೇಖಕರವು

ಮೊದಲನೇ ಮುದ್ರಣ : ೧೯೯೪

ವಿಶೇಷ ನೆರವು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಪ್ರಧಾನ ಸಂಪಾದಕರು:

ಬರಗೂರು ರಾಮಚಂದ್ರಪ್ಪ

ಅಧ್ಯಕ್ಷರು

ಕರ್ನಾಟಕ ಸಾಹಿತ್ಯ ಅಕಾಡೆಮಿ

ಪ್ರಕಾಶಕರು:

ರಿಜಸ್ಟ್ರಾರ್

ಕರ್ನಾಟಕ ಸಾಹಿತ್ಯ ಅಕಾಡೆಮಿ

ರಕ್ಷಾಪುಟ ವಿನ್ಯಾಸ:

ಪಿ.ಚಂದ್ರಶೇಖರ್

ಬೆಲೆ : ಮೂರು ರೂಪಾಯಿಗಳು

ಮುದ್ರಕರು :

ಲಾವಣ್ಯ ಮುದ್ರಣ

೧೯, ವಿದ್ಯಾಪೀಠ ಸರ್ಕಲ್,

ಬೆಂಗಳೂರು - ೫೬೦ ೦೫೦

ಅಧ್ಯಕ್ಷರ ಮಾತು

ಸಮಾಜದಲ್ಲಿ ಸಮಾನತೆ, ಸಾಮರಸ್ಯಗಳು ನೆಲೆಯೂರಬೇಕೆಂಬ ಆಶಯಕ್ಕೆ ಒಂದು ಇತಿಹಾಸವಿದೆ. ವಿವಿಧ ಕಾಲಘಟ್ಟಗಳಲ್ಲಿ ಬದುಕನ್ನು ಅಂತಃಕರಣಪೂರ್ವಕವಾಗಿ ಪ್ರೀತಿಸಿದ ಚೇತನಗಳು, ಆರೋಗ್ಯಕರ ಚಲನಶೀಲತೆಗೆ ಒತ್ತಾಸೆಯಾಗಿವೆ. ಇದು ಹೊಸ ಬೆಳಕನ್ನು ಹುಡುಕುವ ಒಂದು ಹೋರಾಟ; ಅಂತೆಯೇ ಇರುವ ಬೆಳಕನ್ನು ಕಾಯ್ದುಕೊಳ್ಳುವ ವಿಶಿಷ್ಟ ಕಾಳಜಿ. ಅದೇ ಸಂದರ್ಭದಲ್ಲಿ ಹಗಲಲ್ಲೇ ಕತ್ತಲು ಮೂಡಿಸುವ ಕರಾಳ ಪ್ರಯತ್ನಗಳಿಗೇನೂ ಕಡಿಮೆಯಿಲ್ಲ. ಬೆಳಕಿನ ಕಿರಣಗಳನ್ನು ಕತ್ತಲ ಕೋಣೆಯಲ್ಲಿ ಕೂಡಿ ಹಾಕುವ ಇಂಥ ಸ್ವಾರ್ಥ ಶಕ್ತಿಗಳಿಗೂ ಚಲನಶೀಲ ಪರವಾದ ಚೇತನಗಳಿಗೂ ಮುಖಾಮುಖಿ ಅನಿವಾರ್ಯ. ವ್ಯಕ್ತಿ ಮತ್ತು ಸಂದರ್ಭಗಳಿಗನುಗುಣವಾಗಿ ಮುಖಾಮುಖಿಯ ಸ್ವರೂಪದಲ್ಲಿ ವ್ಯತ್ಯಾಸಗಳಿರಬಹುದು; ಕಾರ್ಯಕ್ಷೇತ್ರಗಳಲ್ಲಿ ವಿಭಿನ್ನತೆಯಿರಬಹುದು. ಆದರೆ ಆಯಾ ನೆಲೆಯಲ್ಲಿ ಜಡತೆಯನ್ನು ಮೀರುವ ಮನೋಧರ್ಮ ಮುಖ್ಯವಾಗುವ ಮುಖಾಮುಖಿಯು ಮಹತ್ವದ್ದೇ ಆಗಿರುತ್ತದೆ.

ಸಾಮಾಜಿಕ ಸನ್ನಿವೇಶವೊಂದು ಉಂಟುಮಾಡುವ ಸೈದ್ಧಾಂತಿಕ ಮುಖಾಮುಖಿ ಮತ್ತು ಅದರ ಫಲಿತಗಳು ಇದ್ದಕ್ಕಿದ್ದಂತೆ ಸಂಭವಿಸುವುದಿಲ್ಲ. ಇದಕ್ಕೂ ಒಂದು ಚರಿತ್ರೆಯಿರುತ್ತದೆ. ಆದ್ದರಿಂದ ಚಾರಿತ್ರಿಕತೆಯನ್ನು ಪರಿಗಣಿಸಿಯೇ ನಾವು ಸಾಮಾಜಿಕ ಚಿಂತನೆಯನ್ನು ಪರಿಶೀಲಿಸುವುದು ಆರೋಗ್ಯಕರವಾದುದು. ನಿರ್ದಿಷ್ಟ ಕಾಲದ ಚಲನಶೀಲ ಚಿಂತನೆ ಸಮಕಾಲೀನ ಸಂದರ್ಭದಲ್ಲಿ ಹಳೆಯದಾಗಬಹುದಾದರೂ, ಹೊಸ ಚಿಂತನೆಗಳಿಗೆ ಚಾರಿತ್ರಿಕ ಒತ್ತಾಸೆಯನ್ನೂ ಪ್ರಗತಿಪರ ಪರಂಪರೆಯನ್ನೂ ಅದು ಒದಗಿಸಿರುತ್ತದೆಯೆಂಬುದನ್ನು ನಾವು ಮರೆಯಲಾಗದು. ಆಯಾ ಚಾರಿತ್ರಿಕ ಸಂದರ್ಭವನ್ನು ಪರಿಗಣಿಸಿಯೇ ಸಮಕಾಲೀನ ವಿವೇಕದ ಮೂಲಕ ಎಲ್ಲ ಕಾಲದ ಚಿಂತನೆಗಳನ್ನು ತೂಗಿ ನೋಡುವ ಮೂಲಕ

ಆತುರದ, ಅತಿರೇಕದ ತೀರ್ಪುಗಳಿಂದ ನಾವು ಪಾರಾಗುತ್ತೇವೆ. ಸರಿದಾರಿಯಲ್ಲಿ ಹೆಜ್ಜೆಯಿಡುತ್ತೇವೆ. ಆಯಾ ಕಾಲದ ಸಾಮಾಜಿಕ ಚಿಂತನೆಗಳ ಚಲನಶೀಲತೆಯನ್ನು ಮೆಚ್ಚುತ್ತ, ಮಿತಿಗಳನ್ನು ಗುರುತಿಸಿ ಮೀರುತ್ತಾ, ಹೊಸ ಮನೋಧರ್ಮವನ್ನು ರೂಪಿಸಿಕೊಳ್ಳುವುದು, ಚಿಂತನೆಗೆ ಹೊಸ ಆಯಾಮಗಳನ್ನು ಕಂಡುಕೊಳ್ಳುವುದು ಸಮಕಾಲೀನತೆಯ ಸತ್ವವಾಗಬಲ್ಲದು.

ಒಟ್ಟು ವಿಶ್ವದಲ್ಲಿ ಭಕ್ತರು, ಸಂತರು, ಸಮಾಜ ಸೇವಕರು, ರಾಜಕಾರಣಿಗಳು ವಿಜ್ಞಾನಿಗಳು, ಕವಿ - ಕಲಾವಿದರು, ಕ್ರಾಂತಿಕಾರಿಗಳು - ಹೀಗೆ ವಿವಿಧ ನೆಲೆಗಳಲ್ಲಿ ಬದುಕನ್ನು ಕಂಡು ಕೊಳ್ಳುವ ಮತ್ತು ಕಟ್ಟುವ ಕ್ರಿಯಾಶೀಲತೆ ತೋರಿದವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಸಾಮಾಜಿಕ ಚಿಂತಕರೇ ಆಗಿದ್ದಾರೆ. ಇವರ ನಂಬಿಕೆ, ನಿಲುವು ಮತ್ತು ಮಾರ್ಗಗಳು ಬೇರೆ ಬೇರೆಯಿರಬಹುದು. ಆದರೆ ತಂತಮ್ಮ ಕಾರ್ಯಕ್ಷೇತ್ರದ ಚೌಕಟ್ಟಿನಲ್ಲಿ ಯಥಾಸ್ಥಿತಿಯನ್ನು ಮೀರುತ್ತ, ಮುಂದೆ ಜಡ ಚೌಕಟ್ಟುಗಳನ್ನು ಛಿದ್ರ ಮಾಡಿ ಹೊಸ ಹಾದಿ ಹುಡುಕುವುದಕ್ಕೆ, ಹೊಸ ಚಿತ್ರ ಬರೆದು ಹೊಸ ಚೌಕಟ್ಟು ನಿರ್ಮಿಸುವುದಕ್ಕೆ ಪ್ರೇರಣೆಯಾಗಿರುವುದಂತೂ ನಿಜ. ಪರಸ್ಪರ ವಿರುದ್ಧ ನೆಲೆಗಳಿಗೆ ಸೇರಿದ ಇವರು ತಮ್ಮೆಲ್ಲ ಮಿತಿ ಮತ್ತು ವ್ಯಾಪ್ತಿಯೊಂದಿಗೆ ಚಾರಿತ್ರಿಕ ಮಹತ್ವ ಪಡೆಯುತ್ತಾರೆ. ಯಾಕೆಂದರೆ ಸಾಮಾಜಿಕ ಚಿಂತಕರು ಯಾವುದೇ ಕ್ಷೇತ್ರಕ್ಕೆ ಸಂಬಂಧಿಸಿರಲಿ, ಯಾವುದೇ ಸೈದ್ಧಾಂತಿಕ ಸ್ವರೂಪವನ್ನು ಹೊಂದಿರಲಿ, ಅವರವರ ಸಂದರ್ಭದಲ್ಲಿ ಮೂಲಭೂತವಾದಿ ಮನೋಧರ್ಮವನ್ನು ಪಡೆದಿರುವುದಿಲ್ಲ; ಜಡಜೈಲುಗಳನ್ನು ನಿರ್ಮಿಸುವುದಿಲ್ಲ; ಅಸಮಾನತೆಯನ್ನು ಒಪ್ಪುವುದಿಲ್ಲ; ಅಮಾನವೀಯತೆಯನ್ನು ಪೋಷಿಸುವುದಿಲ್ಲ. ಆದರೆ ಆದ್ಯತೆಗಳಲ್ಲಿ ಅಂತರವಿರಬಹುದು; ಚಿಂತನೆಯಲ್ಲಿ ವೈರುಧ್ಯಗಳಿರಬಹುದು. ಒಟ್ಟಾರೆ ಒಂದಷ್ಟು ಮರು ಚಿಂತನೆಗೆ ಒತ್ತಾಸೆಯಾಗಿ ತಾವು ಬದುಕಿದ ಪರಿಸರಕ್ಕೆ ಮಾನವೀಯ ಮಿಡಿತ ತರುವ ಪ್ರಾಮಾಣಿಕ ಪ್ರಯತ್ನದಲ್ಲಿ ತೊಡಗಿರುತ್ತಾರೆ.

ಮೇಲೆ ವಿವರಿಸಿದ ವಿಶಾಲ ವ್ಯಾಪ್ತಿಯ ಹಿನ್ನೆಲೆಯಲ್ಲಿ 'ಸಾಮಾಜಿಕ ಚಿಂತನ ಮಾಲೆ'ಯನ್ನು ರೂಪಿಸಲಾಗಿದೆ. ಕನ್ನಡದ ಸಾಮಾನ್ಯ ಓದುಗರನ್ನು ಗಮನದಲ್ಲಿಟ್ಟು ಕೊಂಡು ರೂಪುಗೊಂಡಿರುವ ಈ ಮಾಲೆಯ ಪುಸ್ತಕಗಳು ಏಕಕಾಲಕ್ಕೆ

ಪರಿಚಯಾತ್ಮಕವೂ, ಚಿಂತನಾತ್ಮಕವೂ ಆಗಿರಬೇಕೆಂದು ಅಪೇಕ್ಷಿಸಲಾಗಿದೆ. ಒಟ್ಟಿನಲ್ಲಿ ಇದು, ಸಾಮಾನ್ಯ ಓದುಗರು ಸಾಮಾಜಿಕ ಚಿಂತನೆಯ ವಿವಿಧ ವಿನ್ಯಾಸಗಳನ್ನು ಅರಿವಿಗೆ ತಂದು ಕೊಂಡು ಹೆಚ್ಚಿನ ಓದಿಗೆ ಆಸಕ್ತರಾಗುವಂತೆ ಮಾಡುವ ಒಂದು ವಿನಯಪೂರ್ವಕ ಪ್ರಯತ್ನವಾಗಿದೆ.

ಈ ಸಂದರ್ಭದಲ್ಲಿ ಒಂದು ಮುಖ್ಯ ಸಂಗತಿಯನ್ನು ಹೇಳಲೇಬೇಕು. ಸಾಮಾಜಿಕ ಚಿಂತನ ಮಾಲೆಯು ಈ ರೂಪವನ್ನು ಪಡೆಯುವುದಕ್ಕೆ ಮೊದಲು ಪ್ರೇರಣೆ ಒದಗಿಸಿದವರು ಅಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದ ಶ್ರೀ ಎಚ್.ವಿಶ್ವನಾಥ್ ಅವರು; ಶ್ರೀ ವಿಶ್ವನಾಥ್ ಅವರಿಗೆ ಕೆಲವು ಸಮಾಜ ಸುಧಾರಕರ ಬಗ್ಗೆ ಕಿರುಪುಸ್ತಕಗಳನ್ನು ಅಚ್ಚು ಮಾಡಿಸಿ ಕಡಿಮೆ ಬೆಲೆಗೆ ಒದಗಿಸಬೇಕೆಂಬ ಮಹದಾಕಾಂಕ್ಷೆಯಿತ್ತು. ಈ ಕೆಲಸವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿ ಯೋಜನೆಯೊಂದನ್ನು ಸಿದ್ಧಪಡಿಸುವ ಸಂಪೂರ್ಣ ಹೊಣೆಗಾರಿಕೆಯನ್ನು ನೀಡಿದ್ದಲ್ಲದೆ, ಈ ಯೋಜನೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ವಿಶೇಷ ಅನುದಾನವನ್ನು ಮಂಜೂರು ಮಾಡಿದರು. ಶ್ರೀ ವಿಶ್ವನಾಥ್ ಅವರ ಸಹಕಾರವನ್ನು ಕೃತಜ್ಞತೆಯಿಂದ ನೆನೆಯುವುದು ನನ್ನ ಕರ್ತವ್ಯವಾಗಿದೆ.

ಇದೇ ಸಂದರ್ಭದಲ್ಲಿ ಸಹಕಾರವನ್ನು ಮುಂದುವರೆಸಿದ ಇಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ಆರ್.ಎನ್.ನಾಯಕ್ ಅವರಿಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ವ.ರಾ.ಕುಲಕರ್ಣಿಯವರಿಗ... ಕಾರ್ಯದರ್ಶಿಗಳಾದ ಡಾ: ಪಿ.ಎಸ್.ರಾಮಾನುಜಂ ಅವರಿಗೂ ಧನ್ಯವಾದಗಳು.

ಸಾಮಾಜಿಕ ಚಿಂತನ ಮಾಲೆಯ ಪುಸ್ತಕಗಳನ್ನು ಬರೆದುಕೊಟ್ಟ ಎಲ್ಲ ಲೇಖಕರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತ ಕನ್ನಡ ಓದುಗರು ಈ ಪುಸ್ತಕಗಳನ್ನು ಓದಿ ಅಕಾಡೆಮಿಯ ಆಶಯವನ್ನು ಸಾರ್ಥಕಗೊಳಿಸಬೇಕೆಂದು ವಿನಂತಿಸುತ್ತೇನೆ.

ಅಕ್ಟೋಬರ್ ೧೯೯೪
ಬೆಂಗಳೂರು

ಬರಗೂರು ರಾಮಚಂದ್ರಪ್ಪ
ಅಧ್ಯಕ್ಷರು.

ಲೇಖಕರ ಮಾತು

ಈ ಪುಸ್ತಕ ರಚನೆಯ ಅವಕಾಶ ಒದಗಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಮತ್ತು ಈ ಕೆಲಸದಲ್ಲಿ ಸಹಕಾರ ನೀಡಿದ ಸ್ನೇಹಿತರಿಗೆ, ಹಿತೈಷಿಗಳಿಗೆ ಕೃತಜ್ಞತೆಗಳು.

ನವೆಂಬರ್ ೧೯೯೪ — ಶಿವಾನಂದ ಗುಬ್ಬಣ್ಣವರ

ಅರಿಕೆ

ಕರ್ನಾಟಕ ಸರಕಾರ ಹೊರತರಬೇಕೆಂದಿದ್ದ ಸಮಾಜ ಸುಧಾರಕರ ಕಿರು-ಹೊತ್ತಿಗೆಯ ಪ್ರಕಟನೆಯ ಹೊಣೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಹೊತ್ತಿದ್ದು ಈ ದಿಸೆಯಲ್ಲಿ ಜಗತ್ತಿನ ಪ್ರಮುಖ ಸಾಮಾಜಿಕ ಸುಧಾರಕ ಚಿಂತಕರ ಬಗೆಗಿನ 'ಸಾಮಾಜಿಕ ಚಿಂತನ ಮಾಲೆ'ಗಾಗಿ 'ಶಿಶುನಾಳ ಶರೀಫ್‌ಸಾಹೇಬರು' ಕುರಿತು ಕಿರುಪುಸ್ತಕ ರಚಿಸಿಕೊಡಬೇಕೆಂದು ಅಕಾಡಮಿ ಅಧ್ಯಕ್ಷರು ಬರೆದ ಪತ್ರ ಕೈಸೇರಿದಾಗ ಸಂತೋಷವಾಯಿತು. ಈ ಮೊದಲು 'ಬರಕೋ ಪದಾ ಬರಕೋ' (೧೯೮೧) ಶೀರ್ಷಿಕೆಯಲ್ಲಿ ಶಿಶುನಾಳ ಶರೀಫ್ ಗೀತೆಗಳ ಬೃಹತ್ ಸಂಕಲನ ಹೊರತರುವ ಮೂಲಕ ಶರೀಫ್ ಸಾಹಿತ್ಯದೆಡೆಗೆ ಕನ್ನಡ ಸಾರಸ್ವತ ಲೋಕದ ಗಮನ ಸೆಳೆದ ಪ್ರಯುಕ್ತವಾಗಿಯೋ, ಇಲ್ಲವೇ ನನ್ನ ಮೇಲಿನ ಪ್ರೀತಿ ವಿಶ್ವಾಸಗಳಿಗಾಗಿಯೋ ಶಿಶುನಾಳ ಶರೀಫ್ ಸಾಹೇಬರ ಕುರಿತು ಕೃತಿ ರಚಿಸಲು ಅಕಾಡೆಮಿ ಅಧ್ಯಕರು ಕೇಳಿಕೊಂಡಿರಬಹುದೆಂದು ಭಾವಿಸಿರುವೆ. ಅದೇನೇ ಇರಲಿ, ಸಾಮಾಜಿಕ ಚಿಂತನ ಮಾಲೆ' ಯಲ್ಲಿ ಶರೀಫ್ ಸಾಹೇಬರ ಕುರಿತು ಪುಸ್ತಕ ಪ್ರಕಟಗೊಳ್ಳಲು ಕಾರಣವಾದ ಕರ್ನಾಟಕ ಸಾಹಿತ್ಯ ಅಕಾಡೆಮಿ, ಅದರಲ್ಲಿಯೂ ಅದರ ಅಧ್ಯಕ್ಷರಾದ ಡಾ. ಬರಗೂರು ರಾಮಚಂದ್ರಪ್ಪ ಅವರನ್ನು ಕೃತಜ್ಞತೆಯಿಂದ ನೆನೆಯದಿರಲಾರೆ.

ಮುಸ್ಲಿಮ್ ಮನೆತನದಲ್ಲಿ ಜನಿಸಿ, ಸನಾತನಿಯ ಮಾರ್ಗದರ್ಶನದಲ್ಲಿ ಯೋಗಾಭ್ಯಾಸಮಾಡಿ, ವೀರಶೈವ ಸಾಹಿತ್ಯದ ಪ್ರಭಾವಕ್ಕೊಳಗಾಗಿ ಪ್ರಚಾರಕರಾಗುವ ಶರೀಫ್ ಜೀವನ ಕುತೂಹಲಕಾರಿಯಾಗಿದೆ. ಹಿಂದೂ-ಮುಸ್ಲಿಮ್-ವೀರಶೈವ ಮತ

ತತ್ವಗಳನ್ನು ಆಳವಾಗಿ ಅಧ್ಯಯನಿಸಿ ಅವುಗಳ ಸಾರವನ್ನು ಹೀರಿಕೊಂಡು 'ಬೋಧ ಒಂದೇ, ಬ್ರಹ್ಮನಾದ ಒಂದೇ, ಶಿಶುನಾಳಧೀಶನ ಭಾಷೆ ಒಂದೇ' ಎಂದು ಸಾರುವ ಮೂಲಕ ಶರೀಫ್ ಹಿಂದೂ-ಮುಸ್ಲಿಮ್ ಮತೀಯ ಸಾಮರಸ್ಯದ ಜ್ವಲಂತ ನಿದರ್ಶನವಾಗಿದ್ದಾರೆ. ಪ್ರಮುಖವಾಗಿ ಹಿಂದೂ-ಮುಸ್ಲಿಮ್ ಮತಗಳ ನೆಲೆವೀಡಾದ ಭರತಖಂಡದಲ್ಲಿ ಹಿಂದೂ-ಮುಸ್ಲಿಮ್‌ರು ಪರಸ್ಪರ ಪ್ರೀತಿ-ವಿಶ್ವಾಸಗಳಿಂದ ಬಾಳಿ ಬದುಕಿ ಇಹ-ಪರ ಸುಖ ಹೊಂದುವ ದಿಸೆಯಲ್ಲಿ ಶರೀಫ್ ಜೀವನ ಹಾಗೂ ಸಾಹಿತ್ಯ ಮಾರ್ಗದರ್ಶಿಯಾಗಬಹುದು.

ಪ್ರಸ್ತುತ ಕಿರುಹೊತ್ತಿಗೆಯಲ್ಲಿ ಬಳಸಿದ ಶರೀಫ್ ಗೀತೆಗಳ ತುಣುಕುಗಳನ್ನು ಕರ್ನಾಟಕ ಸರಕಾರ 1985ರಲ್ಲಿ ವಿಶ್ವಕನ್ನಡ ಸಮ್ಮೇಳನ ಅಂಗವಾಗಿ ಪ್ರಕಟಿಸಿದ ಈ ಲೇಖಕನ 'ಶಿಶುನಾಳ ಶರೀಫ್‌ರ ಗೀತೆಗಳು' ಸಂಕಲನದಿಂದ ಆಯ್ದುಕೊಳ್ಳಲಾಗಿದೆ. ಕೌಂಸಿನಲ್ಲಿ ಕೊಟ್ಟಿರುವ ಪ್ರಥಮ ಸಂಖ್ಯೆ ಪದ್ಯ ಸಂಖ್ಯೆಯನ್ನು, ದ್ವಿತೀಯ ಸಂಖ್ಯೆ ಪುಟಸಂಖ್ಯೆಯನ್ನು ಸೂಚಿಸುತ್ತದೆ:

ಧಾರವಾಡ — ಶಿವಾನಂದ ಗುಬ್ಬಣ್ಣವರ

೧.೯.೧೯೯೩

ಶಿಶುನಾಳ ಷರೀಫ್

ಅಧ್ಯಾಯ ೧

ಜೀವನ

ಶಿಶುನಾಳ ಪರಿಸರ:

ಹೆಸರೇ ಸೂಚಿಸುವಂತೆ ಶಿಶುನಾಳ ಶರೀಫ್ ಸಾಹೇಬರು ಧಾರವಾಡ ಜಿಲ್ಲೆ (ಕರ್ನಾಟಕ)ಯ ಶಿಗ್ಗಾಂವಿ ತಾಲೂಕಿನ ಶಿಶುನಾಳ ಗ್ರಾಮದವರು. ಇದು ಪುಣೆ - ಬೆಂಗಳೂರು ರೈಲು ಮಾರ್ಗದ ಮೇಲಿರುವ ಗುಡಗೇರಿ ನಿಲ್ದಾಣದ ಪಶ್ಚಿಮಕ್ಕೆ ನಾಲ್ಕು ಮೈಲುಗಳ ಅಂತರದಲ್ಲಿದೆ. ಚಾರಿತ್ರಿಕವಾಗಿ ಅಷ್ಟೊಂದು ಮಹತ್ವ ಪಡೆಯದ ಈ ಗ್ರಾಮ ಪತ್ತೊಂಬತ್ತನೆಯ ಶತಮಾನದಲ್ಲಿ ಆಗಿಹೋದ ಶರೀಫ್‌ರಿಂದಾಗಿ ಹೆಚ್ಚು ಪ್ರಚಾರದಲ್ಲಿದೆ.

ಸುಮಾರು ಮೂರು ಸಾವಿರ ಜನಸಂಖ್ಯೆ ಹೊಂದಿರುವ ಈ ಗ್ರಾಮದ ಜನರು ಕೃಷಿಯಿಂದಲೇ ಉಪಜೀವಿಸುತ್ತಿದ್ದಾರೆ. ಊರ ಉತ್ತ ತುದಿಗಿರುವ ಬಯಲು ಗುಡಿಯ ಸ್ತಂಭಮೂರ್ತಿ ಬಸವಣ್ಣನನ ಜಾತಿ-ಮತಬೇಧವಿಲ್ಲದೆ ಆರಾಧಿಸುವುದೊಂದು ವಿಶೇಷ.

ಲಿಂಗಾಯತರು ಹಾಗೂ ಮುಸಲ್ಮಾನರು ಇಲ್ಲಿನ ಪ್ರಮುಖ ಜನಾಂಗವಾದರೂ ಸ್ವಧರ್ಮದಲ್ಲಿ ನಿಷ್ಠೆ, ಪರಧರ್ಮದಲ್ಲಿ ಸಹಿಷ್ಣುತೆ ಹೆಸರಾದವರು. ಮತೀಯ ಸಾಮರಸ್ಯಕ್ಕೆ ಹೆಸರಾದ ಈ ಗ್ರಾಮದಲ್ಲಿ ಮುಸ್ಲಿಮ್ ಜನಾಂಗಕ್ಕೆ ಸೇರಿದ ದೇವಕಾರ ಮನೆತನ ಇಮಾಮಸಾಹೇಬ ಹಾಗೂ ಹಜ್ಜೂಮಾ ದಂಪತಿಗಳು ಪರೋಪಕಾ ಹಾಗೂ ಸನ್ನಡೆತೆಯಿಂದ ಸರ್ವರ ಆದರಾಭಿಮಾನಗಳಿ ಪಾತ್ರರಾದವರು. ದೇವರು ಹಾಗೂ ಧರ್ಮದಲ್ಲಿ ಅಚಲ ವಿಶ್ವಾ ಹೊಂದಿದ ದಂಪತಿಗಳಿಗೆ ಸಂತಾನ ಕೊರತೆ ಸದಾ ಭಾದಿಸುತ್ತ ಮಕ್ಕಳನ್ನು ಪಡೆಯುವದಕ್ಕಾಗಿ.ಇಮಾಮ್ ದಂಪತಿಗಳು ಅನುಸರಿಸ ವಿಧಿ ವಿಧಾನಗಳಿಲ್ಲ; ನಡೆದುಕೊಳ್ಳದ ದೇವರು - ದಿಂಡರುಗಳಿಲ್ಲ ಎಲ್ಲವೂ ನಿಷ್ಪ್ರಯೋಜಕವಾದಾಗ ದಂಪತಿಗಳ ದುಃಖ ಹೇಳತೀರದು ಹಿತೈಷಿಗಳ ಸಲಹೆಯಂತೆ ದಂಪತಿಗಳು ನೆರೆಯ ಹೂಲಗೂರ ಸಂ ಹಜರೇಶಾಖಾದರಿ ಸಮಾಧಿಗೆ ಭಕ್ತಿಭಾವದಿಂದ ನಡೆದುಕೊಂಡು ಇಷ್ಟಾರ್ಥ ಪೂರೈಸಿಕೊಳ್ಳುವಲ್ಲಿ ಯಶಸ್ವಿಯಾದರು. ದಿ.೭.೩.೧೮೧೯ ರಂದು ಜನಿಸಿದ ಮಗುವಿಗೆ ತಂದೆತಾಯಿಗಳು 'ಮಹಮ್ಮದ್ ಶರೀಫ್' ಎಂದು ನಾಮಕರಣ ಮಾಡಿದರು.

'ಶರೀಫ್' ಫಾರ್ಸಿ ಶಬ್ದ. ಉದಾತ್ತ, ಧ್ಯೇಯಗಳ ಅಥವಾ ಉತ್ತಮ ಶೀಲ - ಸ್ವಭಾವಹೊಂದಿ ಇತರರಿಂದ ಗೌರವಿಸಲ್ಪಡುವ ವ್ಯ ಎಂದದರರ್ಥ. ಹೆಸರಿಗೆ ತಕ್ಕಂತೆ ಶರೀಫ್ ರೂಪುಗೊಂಡುದ ಕಾಕತಾಳೀಯ.

ಬಾಲ್ಯ, ಶಿಕ್ಷಣ, ಶಿಕ್ಷಕ:

ತಂದೆ - ತಾಯಿಗಳ ಲಾಲನೆ ಪಾಲನೆಯಲ್ಲಿ ಬೆಳೆದ ಶರೀಫ್ ತನ್ನ ಬಾಲಲೀಲೆಗಳಿಂದ ಅವರ ಸಂತೋಷಗಳಿಗೆ ಕಾರಣನಾದ. ಬಾಲ್ಯಾವಸ್ಥೆ ತಲುಪಿದೊಡನೆ ಸ್ಥಳೀಯ ಕೂಲಿಮಠದ ಸಿದ್ಧರಾಮಯ್ಯನವರಲ್ಲಿ ವಿದ್ಯಾಭ್ಯಾಸ ಆರಂಭವಾಯಿತು. ಓದು ಬರಹ ಕಲಿಯುವದರ ಜೊತೆಗೆ ಶರಣ ಸಾಹಿತ್ಯದ ವಿಚಾರಗಳನ್ನು ಅರಿತುಕೊಂಡು ಪ್ರಭಾವಿತನಾದ. ಅನಂತರ ಕಳಸದ ಗೋವಿಂದಭಟ್ಟರಲ್ಲಿ ವೇದೋಪನಿಷತ್ತುಗಳ ಬಗ್ಗೆ ತಿಳಿದುಕೊಂಡ. ಈ ಮೊದಲೇ ತಂದೆಯಿಂದ ಇಸ್ಲಾಮ್ ಮತದ ಬಗ್ಗೆ ಮಾಹಿತಿಮಾಡಿಕೊಂಡಿದ್ದ. ಹೀಗೆ ಇಸ್ಲಾಮ್, ವೀರಶೈವ ಹಾಗೂ ವೈದಿಕ ಧರ್ಮದ ತತ್ವಗಳನ್ನು ಅರಿತು ಅರವಿನ ಹರವು ಹೆಚ್ಚಿಸಿಕೊಳ್ಳುವದಲ್ಲದೆ ಧಾರ್ಮಿಕ ವಿಶಾಲ ಮನೋಭಾವ ಬೆಳಸಿಕೊಂಡ.

ಶಿಕ್ಷಣ ಪೂರೈಸಿದ ಮೇಲೆ ಶರೀಫ್ ಸ್ಥಳೀಯ ಚಂದ್ರೇಶ್ವರ ದೇವಾಲಯದಲ್ಲಿ ಶಾಲೆ ತೆರೆದು ಮಕ್ಕಳಿಗೆ ವಿದ್ಯಾಭ್ಯಾಸ ನೀಡಲು ಪ್ರಾರಂಭಿಸಿದ. ಆನಂತರ ನೆರೆಯ ಬಸನಾಳ, ಮಂಡಿಗನಾಳ, ಕ್ಯಾಲಕೊಂಡ, ಎರಿಬೂದಿಹಾಳ ಮೊದಲಾದ ಗ್ರಾಮಗಳಲ್ಲಿ ಶಾಲೆ ತೆರೆದು ಫಲಾಪೇಕ್ಷೆಯಿಲ್ಲದೆ ಮಕ್ಕಳಿಗೆ ವಿದ್ಯೆ ಬುದ್ಧಿ ನೀಡಿ ಅವರ ಗೌರವಾದರಗಳಿಗೆ ಪಾತ್ರನಾದ. ಶಿಶುನಾಳ ಪ್ರದೇಶದಲ್ಲಿ ಜರುಗುವ ಜಾತ್ರೆ ಉತ್ಸವ ಸಂದರ್ಭಗಳಲ್ಲಿ ಪ್ರದರ್ಶಿಸಲ್ಪಡುತ್ತಿದ್ದ ಬಯಲಾಟಗಳ ಭಾಗವತಕಾರನಾಗಿಯೋ ಇಲ್ಲವೆ ಅವುಗಳಲ್ಲಿ ವೇಷಧಾರಿಯಾಗಿಯೋ ಹಾಗೂ ಮೊಹರಮ್ ಸಂದರ್ಭದಲ್ಲಿ ತಲೆಯೆತ್ತುತ್ತಿದ್ದ ಹೆಜ್ಜೆಮೇಳದಲ್ಲಿ ಜನ್ನೆಲೆ ಹಾಡುಗಾರನಾಗಿಯೋ ಜನಪದ ಕಲೆಯಲ್ಲಿ ತನಗಿರುವ ಪರಿಣತಿ ಪ್ರಕಟಿಸಿ ಸಮಾಜದ ಸರ್ವರ ಪ್ರೀತಿ-ವಿಶ್ವಾಸಗಳಿಗೆ ಪಾತ್ರನಾದ.

ಪರಮಾರ್ಥ ಪಥ:

ಶರೀಫ್ ತಾರುಣ್ಯ ತಲುಪಿದೊಡನೆ ತಂದೆ-ತಾಯಿಗಳ ಅಪೇಕ್ಷೆಯಂತೆ ಮದುವೆಗೆ ಮನಸ್ಸು ಮಾಡಿದ. ನೆರೆಯ ಕುಂದಗೋಳದ ನಾಯಕ ಮನೆತನದ ಫಾತೀಮಾಳ ಕೈಹಿಡಿದು ಸಂಸಾರ ಬಂಧನದಲ್ಲಿ ಸಿಲುಕಿದ. ಆನಂತರ ವರ್ಷಾರು ತಿಂಗಳಲ್ಲಿ ಶರೀಫ್ ಮಗಳ ತಂದೆಯಾದ. ಮಕ್ಕಾ-ಮದೀನ ಸ್ವರೂಪರಾದ ತಂದೆ-ತಾಯಿಗಳ ಆಶ್ರಯ, ಮೋಹದ ಮಡದಿಯ ಪ್ರೀತಿ-ವಿಶ್ವಾಸ, ಮಮತೆಯ ಮಗಳ ಸವಿಮಾತುಗಳಿಂದಾಗಿ ಶರೀಫ್ ಸಂಸಾರ ಸುಖ ನೆರೆನಂಬಿ ನಲಿದಾಡಿದ. ಆದರೆ ಅದು ನೀರಮೇಲಿನ 'ಗುರುಳೆ' ಯಂತೆ 'ಕ್ಷಣಬಂಗೂರ'ವಾದುದೆಂಬ ನಿತ್ಯ ಸತ್ಯ ಆತನಿಗೆ ಆಗ ಹೊಳೆಯಲಿಲ್ಲ.

ವೃದ್ಧಾಪ್ಯದಿಂದ ತಂದೆ-ತಾಯಿಗಳು ಮರಣಿಸಿದ ಅಲ್ಪಕಾಲದಲ್ಲಿಯೇ ಮುದ್ದುಮಗಳು ಕಾಲರಾಕ್ಕೆ ಬಲಿಯಾದಳು. ಮುದ್ದುಮಗಳ ಮರಣದಿಂದ ಫಾತೀಮಾ ಧೃತಿಗೆಟ್ಟು ದುಃಖಿಸ ಹತ್ತಿದಳು. ಸ್ಥಳ ಬದಲಾವಣೆಯಿಂದ ಫಾತೀಮಾ ಸರಿಹೋಗಬಹುದೆಂಬ ಗುರು-ಹಿರಿಯರ ಹಿತವಚನದಂತೆ ಶರೀಫ್ ಹೆಂಡತಿಯನ್ನು ಅವಳ ತವರೂರಾದ ಕುಂದಗೋಳಕ್ಕೆ ಕಳಿಸಿಬಂದ. ಮಗಳ ಮರಣ ಹಾಗೂ ಗಂಡನ ಅನುಪಸ್ಥಿತಿಯಿಂದ ಮತ್ತಷ್ಟು ಬಳಲಿದ ಫಾತೀಮಾ ಅಲ್ಪ ಕಾಲದಲ್ಲಿಯೇ ಮಗಳ ಹಾದಿ ಹಿಡಿದುಬಿಟ್ಟಳು. ಸುದ್ದಿ ತಿಳಿದ ಶರೀಫ್ ದಿಙ್ಮೂಢನಾದ. ತಂದೆ - ತಾಯಿ, ಮಗಳು-ಮಡದಿ ತನ್ನವರೆಂದು ನಂಬಿ ಅವರ ಸಹವಾಸದಲ್ಲಿ ಸಂತೋಷದಿಂದ ಕಾಲ ಕಳೆಯುತ್ತಿದ್ದ ಶರೀಫ್ ಆಯುಷ್ಯ ತೀರಿದಂತೆ ಅವರಲ್ಲಿ ಒಬ್ಬೊಬ್ಬರಾಗಿ ಹೊರಟು ಹೋದಾಗ ಕ್ಷಣಮಾತ್ರದವರೆಂದು ತಿಳಿದ. ಇಂಥ ಕ್ಷಣಿಕ ಜನರನ್ನು ನಂಬಿ ಜೀವನ ಸಾಗಿಸುವದು ದುಃಖಕ್ಕೆ ಮೂಲವೆಂಬ ಸಾರ್ವಕಾಲಿಕ ಸತ್ಯವನ್ನು

ಪ್ರಥಮವಾಗಿ ಕಂಡುಕೊಂಡ. ಬಾಲ್ಯದಲ್ಲಿ ತಂದೆ ಇಮಾಮ್ ಸಾಹೇಬ, ಹಿರೇಮಠದ ಸಿದ್ಧರಾಮಯ್ಯ ಹಾಗೂ ಗೋವಿಂದಭಟ್ಟರಿಂದ ಧರ್ಮ ಹಾಗೂ ದೇವರ ಕುರಿತು ತಿಳಿದುಕೊಂಡ ವಿಚಾರಗಳು ಶರೀಫ್‌ನನ್ನು ಪಾರಮಾರ್ಥಿಕದೆಡೆಗೆ ಸೆಳೆದವು. ಅಶಾಶ್ವತವಾದ ಈ ದೇಹವನ್ನು ಇಂದ್ರಿಯ ಸುಖಕ್ಕಾಗಿ ಸವೆಸದೆ ಪರಮಾತ್ಮ ಸಾಕ್ಷಾತ್ಕಾರ ಹಾಗೂ ಆತನಲ್ಲಿ ಸಮರಸಗೊಳ್ಳುವದಕ್ಕೆ ಸದುಪಯೋಗಪಡಿಸಿಕೊಳ್ಳಬೇಕೆಂದು ನಿರ್ಧರಿಸಿ ಗುರುಗೋವಿಂದಭಟ್ಟರ ಮೊರೆ ಹೋದ!

ಗುರುಬೋಧೆ: ಶರೀಫ್ ಕೌಟುಂಬಿಕ ಆಗು-ಹೋಗುಗಳನ್ನು ಕೇಳಿ ತಿಳಿದಿದ್ದ ಗೋವಿಂದಭಟ್ಟರು ಶಿಷ್ಯನ ಬಗ್ಗೆ ಮರುಕಪಟ್ಟರು. ಬಾಲ್ಯದಲ್ಲಿ ತಮ್ಮ ವಿಶೇಷ ಪ್ರೀತಿ - ವಿಶ್ವಾಸಗಳಿಗೆ ಪಾತ್ರನಾದ ಶಿಷ್ಯ ಸಂಸಾರ ಬಂಧನದಿಂದ ಮುಕ್ತನಾಗಿ ನಿತ್ಯ ಸುಖ ಹೊಂದಲು ಕಾರಣಭೂತನಾಗುವ ಬ್ರಹ್ಮೋಪದೇಶ ಪಡೆಯಲು ಬಂದುದು ಅವರಿಗೆ ಅಂತರಂಗದಲ್ಲಿ ಅಪರಿಮಿತ ಆನಂದವನ್ನುಂಟು ಮಾಡಿತ್ತು. ಈ ದಿಸೆಯಲ್ಲಿ ಅವರು ಮೊದಲು ಶಿಷ್ಯನಲ್ಲಿ ಸಂಸಾರದ ಬಗ್ಗೆ ಅಳಿದುಳಿದ ವ್ಯಾಮೋಹ ಕಡಿದು ಹಾಕಿದರು. ಒಂದು ಶುಭದಿನದಂದು ಶಿಷ್ಯನಿಗೆ ಬ್ರಹ್ಮೋಪದೇಶ ಮಾಡಿದರು. ಆನಂತರ ಪರಮಾತ್ಮ ಸ್ವರೂಪ, ನಾಮಸ್ಮರಣೆಯ ಮಹತ್ವ ವಿವರಿಸಿ ಯೋಗಮಾರ್ಗದಿಂದ ಪರಮಾತ್ಮನನ್ನು ಕಾಣುವ ವಿಧಿ-ವಿಧಾನ ತಿಳಿಸಿಕೊಡಲುದ್ಯುಕ್ತರಾದರು. ಪೂರ್ವಭಾವಿಯಾಗಿ ಶಿಷ್ಯನಲ್ಲಿ ಚಿತ್ತಶುದ್ಧಿ, ಏಕಾಗ್ರತೆ ನೆಲೆಗೊಳಿಸಿದರು. ನಂತರ ಜಿವ- ಶಿವನಲ್ಲಿ ಏಕತೆ ಸ್ಥಾಪಿಸುವ ದಿಸೆಯಲ್ಲಿ ಕುಂಡಲಿನಿ, ಜಾಗ್ರತಗೊಳಿಸಿದರು. ಅಧೋಮುಖಿಯಾಗಿದ್ದ ಕುಂಡಲಿಯನ್ನು ಊರ್ಧ್ವಮುಖದೆಡೆಗೆ ತಿರಿಗಿಸುವ ಮೂಲಕ ವಿಷಯಸುಖದಿಂದ ಶಿಷ್ಯನನ್ನು ಮುಕ್ತಮಾಡಿದರು. ಜಾಗ್ರತ ಗೊಂಡ ಕುಂಡಲಿ, ಆಧಾರ,

ಸ್ವಾದಿಷ್ಟ, ಮಣಿಪುರ, ಅನಾಹತ, ವಿಶುದ್ಧ, ಅಗ್ನಿ, ಶಿಶು, ಪಶ್ಚಿಮ ಹಾಗೂ ಬ್ರಹ್ಮವೆಂಬ ಒಂಬತ್ತು ಚಕ್ರದೊಳಗೆ ಹಾಯ್ದು ಕೊನೆಗೆ ಮೆದುಳಿನ ಹಿಂಭಾಗದಲ್ಲಿರುವ ಕುಹರವನ್ನು ಪ್ರವೇಶಿಸುವ ಮೂಲಕ ಶಿಷ್ಯನಿಗೆ ಭಗವಂತನ ದರ್ಶನ ಲಭಿಸಿ ಬ್ರಹ್ಮಾನಂದವಾಯಿತು. ಭಗವಂತನ ದರ್ಶನ ಮಾಡಿಸಲು ಕಾರಣೀಭೂತರಾದ ಗೋವಿಂದಭಟ್ಟರಿಗೆ ಶರೀಫ್ ಕೃತಜ್ಞತಾಭಾವದಿಂದ ಬಾಗಿ ನಮಿಸಿದ.

ಪರಮಾತ್ಮ ಸಾಕ್ಷಾತ್ಕಾರವಾದ ಮೇಲೆ ಗೋವಿಂದಭಟ್ಟರು ಶರೀಫ್‌ರನ್ನು ತಮ್ಮ ಸಮಾನರೆಂದು ಪರಿಗಣಿಸಿದರು. ತಾವು ಹೋದಡೆಯೆಲ್ಲ ಶರೀಫರನ್ನು ಕೊಂಡೊಯ್ದು ಸಮಾಜ ದರ್ಶನ ಮಾಡಿಸಿದರು. ಹಾಗೆಯೇ ಶಿಷ್ಯರಿಗೆ ನೀಡುವ ಬ್ರಹ್ಮೋಪದೇಶ ಹಾಗೂ ಪರಮಾತ್ಮ ಸಾಕ್ಷಾತ್ಕಾರ ದಿಸೆಯಲ್ಲಿ ಕೈಕೊಳ್ಳುವ ಯೋಗದ ವಿಧಿ ವಿಧಾನಗಳನ್ನು ಶರೀಫ್‌ರಿಂದ ಮಾಡಿಸ ಹತ್ತಿದರು. ಹೀಗೆ ಗುರು-ಶಿಷ್ಯ ಅವಿನಾಭಾವ ಸಂಬಂಧ ಗೋವಿಂದಭಟ್ಟರು ತೀರಿಕೊಳ್ಳುವವರೆಗೂ ಮುಂದುವರಿಯಿತು.

ಅಂತ್ಯದರ್ಶನ:

ವೃದ್ಧಾಪ್ಯದಿಂದ ಗೋವಿಂದಭಟ್ಟರು ತೀರಿಕೊಂಡರೂ ಈ ಹಿಂದೆ ಕುಟುಂಬದ ಸದಸ್ಯರು ತೀರಿದಾಗ ಪರಿತಪಿಸಿದಂತೆ ಶರೀಫ್ ಮಾಡಲಿಲ್ಲ. ಪರಮಾತ್ಮ ಸಾಕ್ಷಾತ್ಕಾರ ಹಾಗೂ ದೀರ್ಘಕಾಲ ಗುರುವಿನೊಡನೆ ಅಧ್ಯಾತ್ಮಿಕ ಚಿಂತನ - ಮಂಥನ ನಡೆಸಿದ ಫಲವಾಗಿ ಶರೀಫ್‌ರಲ್ಲಿ ಸಾವಿನ ಬಗ್ಗೆ ನಿರ್ಲಿಪ್ತಭಾವ ಮೂಡಿತ್ತು. ಅಂತೆಯೇ ಗುರುವಿನ ಅವಸಾನದ ಬಗ್ಗೆ ಶೋಕಿಸದೆ ಅವರ ಮಣಿಹವನ್ನು ಮುಂದುವರೆಸಿಕೊಂಡು ಹೋಗುವ ಮೂಲಕ ಗುರುವಿನ ಆತ್ಮಕ್ಕೆ ಶಾಂತಿ ಕೋರಲು ಸಂಕಲ್ಪಿಸಿ ಏಕಾಂಗಿಯಾಗಿ ಪರಿಶ್ರಮಿಸಿದರು. ಕೊನೆಗೊಮ್ಮೆ ಶರೀಫ್ ಬಾಳಿನಲ್ಲಿ

ಸಂಜೆ ಮೂಡಿತು! ಪರಮಾತ್ಮನಲ್ಲಿ ತಮ್ಮ ಆತ್ಮ ಸಮರಸದ ಐಕ್ಯದಿನದ ಮುಹೂರ್ತವನ್ನು ಅನುಭಾವಸಿದ್ಧಿಯಿಂದ ದೊರೆತ ದಿವ್ಯಜ್ಞಾನ ಮುಖೇನ ಮುಂದಾಗಿಯೇ ಮನಗಂಡ ಶರೀಫ್ ಅದನ್ನು ತಮ್ಮ ಅನುಯಾಯಿಗಳಿಗೆ ವಿವರಿಸಿ ಭೌತಿಕ ದೇಹ ತ್ಯಜಿಸಲು ಸಜ್ಜಾದರು. ಅದಕ್ಕೆ ಮೊದಲು, ಶರಣ ಮಾರ್ಗಾವಲಂಬಿಯಾದ ಶರೀಫ್ 'ವಿಭೂತಿ ವೀಳ್ಯ' ಮಾಡಿಸಿಕೊಳ್ಳಲು ತವಕಿಸಿದರು. ಈ ವಿಧಿ ಅನುಸರಿಸುವದಕ್ಕೆ ಜಂಗಮ ಪಾದಪೂಜೆ ಹಾಗೂ ಜಂಗಮನ ಪಾದ ವಿಧಿಕ್ರಿಯೆಗೊಳಗಾಗುವ ವ್ಯಕ್ತಿಯ ಮಸ್ತಕದ ಮೇಲೆ ಇಟ್ಟು ಶಿವಸಾಯುಜ್ಯ ಮಂತ್ರ ಪಠಣ ಮಾಡಬೇಕಾಗಿತ್ತು. ಮಹಾಮಹಿಮರಾದ ಶರೀಫ್‌ರ ಮಸ್ತಕದ ಮೇಲೆ ಪಾದವಿಡಲು ಆದಾವ ಜಂಗಮನು ಮುಂದೆ ಬರಲಿಲ್ಲ. ಕೊನೆಗೆ, ಹಿರೇಮಠದ ಕರಿಬಸಯ್ಯ ಶರೀಫರ ಅಂತಿಮ ಇಚ್ಛೆ ನೆರವೇರಿಸಿದ! ಆ ಕ್ಷಣವೇ ಅನಿಮಿಷ ದೃಷ್ಟಿಯಿಂದ ಶರೀಫ್ ಶಿವಯೋಗದ ನಿಲುವುಟ್ಟು ಓಂಕಾರ ಪ್ರಭೆಯಲ್ಲಿ ಬಯಲಾದರು. ಈ ಘಟನೆ ನಡೆದುದು ೧೮೮೯ನೆಯ ಇಸ್ವಿ ಜುಲೈ, ೩ನೆಯ ತಾರೀಖು.

ಶರೀಫ್ ತೀರಿದೊಡನೆ ಅವರ ಅಂತ್ಯಕ್ರಿಯೆ ಹಿಂದೂ ವಿಧಿಗನುಗುಣವಾಗಿ ಅನುಸರಿಸಬೇಕೋ ಇಲ್ಲವೇ ಮುಸ್ಲಿಮ್ ವಿಧಿಗನುಗುಣವಾಗಿ ಅನುಸರಿಸಬೇಕೋ ಎಂದು ಅವರ ಶಿಷ್ಯರಲ್ಲಿ ಜಿಜ್ಞಾಸೆಯುಂಟಾಯಿತು. ಕೊನೆಗೆ ಎರಡು ಮತಕ್ಕೆ ಸೇರಿದ ಶರೀಫ್ ಶಿಷ್ಯರಲ್ಲಿ ಒಡಂಬಡಿಕೆಯಾಗಿ ಅಪೂರ್ವರೀತಿಯ ಶವಸಂಸ್ಕಾರಕ್ಕಾಗಿ ಸಿದ್ಧತೆಗಳು ನಡೆದವು. ಶವದ ಒಂದು ಕಡೆಗೆ ಕುರಾನ ಪಠಣವಾದರೆ, ಮತ್ತೊಂದೆಡೆಗೆ ವೇದಘೋಷಗಳು ಕೇಳಿಬರುತ್ತಿದ್ದವು. 'ಇವ ನಮ್ಮವ, ಇವ ನಮ್ಮವ' ಎನ್ನುವ ಅಭಿಮಾನದಿಂದ ಸಾವಿರಾರು ಜನರು ಅಂತಿಮ ಯಾತ್ರೆಯಲ್ಲಿ ಪಾಲ್ಗೊಂಡರು. ಮಹಮ್ಮದೀಯ ಬಂಧುಗಳು ಹೃದಯ

ತುಂಬಿ 'ಶರೀಫ್ ನಾನಾಕಿ ದೊಸ್ತರಹ ಧೀನ್' ಎಂದರೆ, ಹಿಂದುಗಳು 'ಶರೀಫ್ ಶಿವಯೋಗಿ ಮಹಾರಾಜಕಿ ಜೈ' ಎಂದು ಜಯಘೋಷ ಮಾಡುವುದು ಕೇಳಬರುತ್ತಿತ್ತು. ಮುಸಲ್ಮಾನರಿಂದ 'ಅಲ್ಲ ಹೋ ಅಕ್ಬರ್' ಹಾಗೂ ಹಿಂದೂಗಳಿಂದ 'ಹರಹರಮಹದೇವ' ಎಂಬ ಜಯ ಘೋಷ ಕೇಳಿ ಬರುತ್ತಿತ್ತು ಶರೀಫ್ ಅಂತಿಮ ಇಚ್ಛೆಯಂತೆ ಶಿಶುನಾಳ ದಕ್ಷಿಣ ತುದಿಗಿರುವ ಅವರ ತಂದೆ-ತಾಯಿಗಳ ಸಮಾಧಿಯ ಮಧ್ಯ ಶರೀಫ್ ಅಂತ್ಯಕ್ರಿಯೆ ನೆರವೇರಿತು. ಕಾಲಾಂತರ ಶರೀಫ್‌ರ ಅನುಯಾಯಿ ಬಸನಾಳದ ಮಂಟಗಾಣಿ ದಾನಪ್ಪನ ಸಹಾಯ ಸಹಕಾರಗಳಿಂದ ಶರೀಫ್ ಗದ್ದಿಗೆ ನಿರ್ಮಾಣವಾಯಿತು. 'ಹತ್ತು ವರ್ಷಗಳಾದ ಮೇಲೆ ಸತ್ಯ ಮೆರೆದರು ಮಹಾತ್ಮರಲ್ಲೆ' ಎನ್ನುವ ಶರೀಫ್ ಕವಿವಾಣಿಯಂತೆ ಅವರು ತೀರಿದ ಹತ್ತು ವರ್ಷಗಳ ತರುವಾಯ ಶರೀಫ್ ಗದ್ದಿಗೆಯ ಲೀಲೆ ಪ್ರಾರಂಭವಾಗಿ ಇಂದು ಅಪಾರ ಭಾವುಕರನ್ನು ಆಕರ್ಷಿಸಿದೆ. ಪ್ರತಿ ಅಮಾವಾಸ್ಯೆ, ಶ್ರಾವಣ ಸೋಮವಾರ ಹಾಗೂ ಅವರ ಸ್ಮಾರಕವಾಗಿ ನೆರವೇರುವ ಜಾತ್ರೆಗಳ★ ಸಂದರ್ಭದಲ್ಲಿ ಅಪಾರ ಭಕ್ತರು ನೆರೆದು ಇಡೀ ರಾತ್ರಿ ಶರೀಫ್ ಕೃತಿಗಳನ್ನು ರಾಗಬದ್ಧವಾಗಿ ಹಾಡಿ ಕೇಳಿ ಅವರ ತತ್ವಬೋಧೆಯಲ್ಲಿ ಮಿಂದು ಪುನೀತರಾಗುವದನ್ನು ಈಗಲೂ ಗದ್ದಿಗೆಯ ಆವರಣದಲ್ಲಿ ಕಾಣಬಹುದಾಗಿದೆ.

ಶರೀಫ್ ಗದ್ದಿಗೆ ಯಾವದೊಂದು ಧರ್ಮದ ಮಾದರಿಯಲಿಲ್ಲ. ಅದೊಂದು ವಿಶಾಲವಾದ ಚಚ್ಚೌಕಾದ ಕಟ್ಟೆ. ಅದರ ಬದಿಗೆ ಒಂದಾಗಿ ಬೆಳೆದ ಎರಡು ಬೇವಿನ ಮರಗಳಿಗೆ ಮಲ್ಲಿಗೆ ಬಳ್ಳಿ ಹಬ್ಬಿಕೊಂಡಿವೆ. ಬೇವಿನ ಮರಗಳು ಗದ್ದಿಗೆಯ ಮೇಲೆ ನೆರಳು ಹರಡಿದರೆ, ಮಲ್ಲಿಗೆಯ

★ ಕಡೆಯ ಶ್ರಾವಣ ಸೋಮವಾರ ಹಾಗೂ ಫಾಲ್ಗುಣ ಶುದ್ಧ ದಶಮಿಯ ದಿನ ನೆರವೇರುವ ಜಾತ್ರೆಯಂಗವಾಗಿ, ಕ್ರಮವಾಗಿ, ತೆಪ್ಪದ ತೇರು, ರಥೋತ್ಸವ ಜರುಗುತ್ತದೆ.

ಕಂಟಿ ಹೂ ಉದುರಿಸುವ ನಯನ ಮನೋಹರ ದೃಶ್ಯ ಮನಕ್ಕೆ ನೆಮ್ಮದಿ ನೀಡುವಂತಿದೆ. ಶರೀಫ್ ಗದ್ದಿಗೆಗೆ ಬೆಳಗು ಸಂಜೆ ಪೂಜೆ ಸಲ್ಲಿಸಲಾಗುತ್ತದೆ. ಗದ್ದಿಗೆಯ ಎಡಭಾಗದಲ್ಲಿ ಮುಸ್ಲಿಮ್‌ರು ತಮ್ಮ ಸಂಪ್ರದಾಯದಂತೆ ನಮಾಜು ಮಾಡಿ ಸಕ್ಕರೆ ಓದಿಸಿದರೆ, ಬಲಭಾಗದಲ್ಲಿ ಹಿಂದುಗಳು ಪ್ರಾರ್ಥನೆ ಮಾಡಿ ಹಣ್ಣು-ಕಾಯಿ-ಕರ್ಪೂರ ಅರ್ಪಿಸುವದು ಕಂಡುಬರುತ್ತದೆ. ನಡುವೆ ಒಂದು ದೀಪ ಉರಿಯುತ್ತದೆ. ಇಲ್ಲಿ ಎರಡೆಂಬುದೇ ಇಲ್ಲ, ಎರಡೂ ಒಂದೇ! ಇದು ಜೀವಾತ್ಮ-ಪರಮಾತ್ಮ, ಹಿಂದು-ಮುಸ್ಲಿಮ್‌ರು ಒಂದುಗೂಡಿದ ಸಂಕೇತವೆನಿಸುವಂತಿದೆ. ಬೇವು ಕಹಿ, ಮಲ್ಲಿಗೆ ಮಧುರ-ಅವರೆಡು ಮಾನವ ಜೀವನದಲ್ಲಿ ಸೇರಿಕೊಂಡಿವೆ ಎಂಬುದನ್ನು ಸೂಚಿಸುವಂತಿದೆ. ಗದ್ದಿಗೆಯ ಅವರಣದಲ್ಲಿ ಮತೀಯ ಭಾವನೆಗೆ ಅವಕಾಶವಿಲ್ಲ. ಆ ತಂಪಿನ ವಾತಾವರಣದಲ್ಲಿ ಎಲ್ಲರೂ ಅಜ್ಜನ ಮಮತೆಯ ಮಕ್ಕಳೆಂಬ ಐಕ್ಯತಾಭಾವ ಇಂದಿಗೂ ಅಲ್ಲಿ ಕಾಣಸಿಗುತ್ತದೆ.

ಅಧ್ಯಾಯ ೨

ಸಮಾಜ

ಶರೀಫ್ ಸಂಸಾರ ಸುಖ ಕ್ಷಣಭಂಗುರವಾದುದೆಂದು ಭಾವಿಸಿದರೂ ಸಮಾಜ ತೊರೆದು ಕಾಡು ಸೇರಿ ತಪಸ್ಸು ಮಾಡಲೆಳಸಲಿಲ್ಲ. ಬದಲಾಗಿ ಸಮಾಜದಲ್ಲಿದ್ದುಕೊಂಡೇ ತಾವು ಗಳಿಸಿದ ಜ್ಞಾನ ಮತ್ತು ಗುರು ಮಾರ್ಗದರ್ಶನದಲ್ಲಿ ಸಾಧಿಸಿದ ಸಿದ್ಧಿಯಿಂದ ಸಮಾಜದ ಜನತೆಯನ್ನು ತಿದ್ದಿ ಅವರು ಸನ್ಮಾರ್ಗದಲ್ಲಿ ಸಾಗುವಂತೆ ಪರಿಶ್ರಮಿಸಿದರು. ಈ ದಿಸೆಯಲ್ಲಿ ಮತ, ಸಮಾಜ ಹಾಗೂ ವ್ಯಕ್ತಿ ವಿಷಯವಾಗಿ ಅವರು ಮಾಡಿದ ಟೀಕೆ - ಟಿಪ್ಪಣಿಗಳು ಹಾಗೂ ನೀಡಿದ ಸಲಹೆ-ಸೂಚನೆಗಳು ಸುಖೀ ಸಮಾಜ ನಿರ್ಮಾಣಕ್ಕೆ ನೆರವಾಗುವ ಬಗೆಯನ್ನು ಇಲ್ಲಿ ಸಮೀಕ್ಷಿಸಲಾಗಿದೆ.

ಮತ ವಿಚಾರ:

ಈ ಮೊದಲೇ ಹೇಳಿದಂತೆ ಶರೀಫ್ ಬಾಲ್ಯದಲ್ಲಿಯೇ ಮುಸ್ಲಿಮ್, ವೀರಶೈವ ಹಾಗೂ ವೈದಿಕ ಮತ ಸಂಬಂಧಿ ಗ್ರಂಥಗಳನ್ನು ತೆರೆದ ಮನಸ್ಸಿನಿಂದ ಅಧ್ಯಯನ ಮಾಡಿ ಧಾರ್ಮಿಕ ವಿಶಾಲ ಮನೋಭಾವ ಬೆಳಸಿಕೊಂಡರು. ದೊಡ್ಡವರಾದ ಮೇಲೆ ಈ ಮತಗಳಲ್ಲಿಯ ಸರ್ವಸಾಮಾನ್ಯತತ್ವಗಳನ್ನು ಕಂಡುಹಿಡಿದು ತಮ್ಮ ಕಾವ್ಯದಲ್ಲಿ ಅವುಗಳಿಗೆ ಹೆಚ್ಚು ಒತ್ತು ಕೊಡುವ ಮೂಲಕ ಹಿಂದೂ - ಮುಸ್ಲಿಮ್ ಮತೀಯ ಸಾಮರಸ್ಯಕ್ಕೆಳಸಿದರು.

ಇಸ್ಲಾಮ್ ಮತ:

ಮುಸ್ಲಿಮ್ ಮೂಲದವರಾದ ಶರೀಫ್ ಇಸ್ಲಾಮದಿಂದ ಪ್ರಭಾವಿತರಾದುದು ಸಹಜ. ತಂದೆ ಇಮಾಮ್‌ಸಾಹೇಬನಿಂದ ಇಸ್ಲಾಮ್ ಮತದ ಏಕೈಕ ಒಡೆಯನಾದ ಅಲ್ಲಾಹ (ದೇವರು)ನಿಗೆ ತಲೆಬಾಗುವುದು ಹಾಗೂ ಶಾಂತಿಯುತ ಸಹಬಾಳ್ವೆ ತತ್ವಗಳನ್ನು ತಿಳಿದುಕೊಳ್ಳುವುದಲ್ಲದೆ ದೊಡ್ಡವರಾದ ಮೇಲೆ ಇಸ್ಲಾಮ್ ಮತದ ಆಧಾರವಾದ ಕುರಾನ ಶರೀಫ್ ಸ್ವತಃ ಅಧ್ಯಯನಿಸುವ ಮೂಲಕ ಇಸ್ಲಾಮ್ ಹಾಗೂ ಅದರ ಪ್ರವರ್ತಕರಾದ ಮಹಮ್ಮದ್ ಪೈಗಂಬರರ ಬಗ್ಗೆ ಆದರಭಾವ ಬೆಳಸಿಕೊಂಡರು.

"ಹಮ್ ತೋ ದೇಖಾ ಮಹಮ್ಮದ್
ನೂರೆಗಂವ್ದರ್
ರಮ್ತೆ ಜಾಕರ್ ಆತ ಕೆ ತವಾಫ್‌ಕರ್-" (ಶಿ.ಶಿ)

ಈದಮಿಲಾದ ಸಂದರ್ಭದಲ್ಲಿ ಲಕ್ಷ್ಮೇಶ್ವರ ಅಸಾರಖುಹಲಿನಲ್ಲಿ ಪ್ರದರ್ಶಿತಗೊಳ್ಳುವ ಫೈಗಂಬರ್‌ರ ಕೇಶರಾಶಿಯನ್ನು ನೋಡಹೋದ ಶರೀಫರಿಗೆ ಸಾಕ್ಷಾತ್ ಪೈಗಂಬರ್‌ರ ದರ್ಶನಭಾಗ್ಯ ಲಭಿಸಿತೆಂದು ಹೇಳುವರು. ಪೈಗಂಬರ್‌ರ ಬಗ್ಗೆ ಅವರಿಗಿರುವ ಭಕ್ತಿಭಾವ

ಸೂಚಿಸುತ್ತದೆ. ಇಸ್ಲಾಮ್ ಮತ, ಪ್ರವರ್ತಕರ ಬಗ್ಗೆ ಗೌರವಭಾವ ಹೊಂದಿದ್ದ ಶರೀಫ್ ಅದರ ತತ್ವಗಳಿಗೆ ವ್ಯತಿರಿಕ್ತವಾಗಿ ಅನುಸರಿಸುವ ಆಚರಣೆಗಳನ್ನು ಟೀಕಿಸಲು ಹಿಂಜರಿಯಲಿಲ್ಲ. ಉದಾಹರಣೆಗೆ.-

''ಅಶುರಾ ಛೇ ಇದು ಏನು ಮೊಹರಮದ್ದ್ ಬ್ಬ
ಮಾಡಿ ಧೀನ್ ಅಂಬುವರು
ಕೈಲಿ ಕೈವಾಲಿ ಕಟ್ಟಿ
ತುಗಡಿನ್ವಸ್ತ್ರವನಿಟ್ಟ
ಶಾಸ್ತ್ರ ಧರ್ಮವ ಬಿಟ್ಟ....''(೩೩೩:೪೫೯)

ಇಸ್ಲಾಮ್ ಮೂರ್ತಿಪೂಜೆ ನಿಷೇಧಿಸಿದರೂ ಮೊಹರಮ್ ಸಂದರ್ಭದಲ್ಲಿ ಪಂಜಾ - ತಾಬೂತ ಪ್ರತಿಷ್ಠಾಪಿಸಿ ಮುಸಲ್ಮಾನರು ನೈವೇದ್ಯ ಹಿಡಿಯುವದು ಹಾಗೂ ಆ ಸಂದರ್ಭದಲ್ಲಿ ಮದ್ಯ-ಮಾಂಸ ಸೇವಿಸಿ ಕುಣಿದಾಡುವದು ಶಾಸ್ತ್ರ (ಕುರಾನ) ಸಮ್ಮತವಲ್ಲವೆಂದು ಶರೀಫ್ ತಿಳಿಸಿಕೊಡಲು ಪ್ರಯತ್ನಿಸುತ್ತಾರೆ.

''ದುಃಖದಲಾವಿ ಅಶುರಾ ಪೇಳುವೆ ಸುದ್ದಿ
ಮಕ್ಕಾಮದೀನ ವಿಸ್ತಾರ.....''(೩೨೪:೩೫೧)

ಪೈಗಂಬರ ಸ್ಥಾಪಿಸಿದ 'ಖಿಲಾಫತ್'' ಕಲ್ಪನೆ ಶಾಂತಿಪ್ರಿಯ ವಿಶ್ವಕ್ಕೆ ನಿತ್ಯನೂತನ ಕಾಣಿಕೆ. ಅವರ ತರುವಾಯ ಹಜರತ್ಉಸ್ಮಾನ್, ಹಜರತ್ ಆಬೂಬಕರ್ ಸಿದ್ದಿಕಿ, ಹಜರತ್ ಉಮರ್ ಫಾರೂಕ್ ಮತ್ತು ಪೈಗಂಬರ ಅಳಿಯ ಹಜರತ್ ಅಲಿ ಆಯ್ಕೆಗೊಂಡು ಖಿಲಾಪತ್ ಮಹತ್ವ ಹೆಚ್ಚಿಸಿದರು. ಹಜರತ್ ಅಲಿ ತರುವಾಯ ಅವರ ಹಿರಿಯ ಮಗ ಇಮಾಮ್ ಹುಸೇನ ಆಯ್ಕೆಗೊಂಡಾಗ ಸಿರಿಯಾ ಪ್ರಾಂತಾಧಿಕಾರಿ ಮೂವಾಯಿಯಾ ಆ ಪೀಠವನ್ನು ಕಬಳಿಸಿ ತನ್ನ ತರುವಾಯ ತನ್ನ ಮಗ ಎಜೀದನನ್ನು ಉತ್ತರಾಧಿಕಾರಿಯೆಂದು ಸಾರಿದ. ತಂದೆಯ ತರುವಾಯ ಖಲೀಫನೆಂದು ಸ್ವಯಂ ಘೋಷಿಸಿಕೊಂಡ ಎಜೀದ್ ಜನತೆಯ ಮೇಲೆ

ವ್ಯಕ್ತಿತ್ವದಿಂದ ಅವರು ಎಷ್ಟೊಂದು ಪ್ರಭಾವಿತರಾಗಿದ್ದರೆಂದರೆ......'ಚಾರುತರದ ವೃಷಭನ ಮಂತ್ರವಿರಲು ನರರ ಹಂಗಿನ್ನೇನಲೆ ಮನಸೆ.....' (೧೯೮:೧೭೭) ಎಂದು ಹಾಡಿದ್ದುಂಟು.

ಬಸವಣ್ಣನಂತೆ ಪ್ರಭುದೇವರ ಬಗೆಗೆ ಅವರಲ್ಲಿ ಆದರಾಭಿಮಾನಗಳುಂಟು. 'ಆರು ಶಾಸ್ತ್ರ ಹದಿನೆಂಟು ಪುರಾಣ ನನ ಬಗಲಾಗ, ಪ್ರಭುದೇವರ ಪುರಾಣ (ಚಾಮರಸ ವಿರಚಿತ ಪ್ರಭುಲಿಂಗಲೀಲೆ) ನನ ತಲೆ ಮೇಲೆ' ಎಂದು ಸಾರಿ ಅದನ್ನು 'ಓದುವವ ಎಚ್ಚರವಿರಬೇಕು' (೧೩೮:೧೨೫) ಎಂದು ಹಾಡಿದ್ದು ಗಮನಾರ್ಹವಾಗಿದೆ.

ಬಸವಾದಿ ಪ್ರಥಮರಂತೆ ಅವರ ತತ್ವ ಪ್ರಚಾರ ಮಾಡಲು ಕಂಕಣಬದ್ಧರಾದ ವೀರಶೈವ ಮಠಾಧ್ಯಕ್ಷರ ಕುರಿತು ಗೌರವಾದರಗಳನ್ನು ಪ್ರಕಟಿಸಿದ್ದಾರೆ. ಉದಾಹರಣೆಗೆ, 'ಅಪ್ಪಯ್ಯನವರ ಪಾದ ಕಂಡೆ' (೧೦:೮)-ಗುಡಗೇರಿಯ ಸಂಗಮೇಶ್ವರ ಸ್ವಾಮಿ, 'ಹೋಗೋಣ ನಡಿಯೋ ಬೇಗನೆ ಎದ್ದು' (೩೫:೩೦)-ಅಂಕಲಗಿಯ ಅಡವಿಸ್ವಾಮಿ, 'ಯೋಗಿಯ ಕಂಡೆನು ಹುದ್ಧೇಂದ್ರ ಯೋಗಿಯ' (೯೧:೮೬) ಹಾಗೂ 'ಮುತ್ತು ರತ್ನದ ಕಿಡಿಯು ಉದರಿತ' (೧೪೩:೧೨೦)-ಹುಬ್ಬಳ್ಳಿಯ ಮೂರು ಸಾವಿರಮಠದ ಜಗದ್ಗುರುಗಳನ್ನು ಹಾಡಿ ಹೊಗಳಿದ್ದಾರೆ.

ವೀರಶೈವ ಶಕ್ತಿ ವಿಶಿಷ್ಟಾದ್ವೈತ ತತ್ವದಿಂದಲೂ ಪ್ರಭಾವಿತರಾದ ಶರೀಫ್ 'ಜಗನ್ಮಾತೆ ಜಯತು ಜಗದಂಬಾ' (೨೧:೨೯), 'ಅಂಬಗಾರರಿಯನ್ನು ರಂಭೆಯರು ಬೆಳಗಿರೆ' (೨೭೬:೩೩೧) ಮುಂತಾದ ಗೀತೆಗಳನ್ನು ರಚಿಸುವದಲ್ಲದೆ ಸುದೀರ್ಘ 'ದೇವಿ ದಂಡಕ' ರಚಿಸಿ ಆದಿಶಕ್ತಿ ಬಗ್ಗೆ ತಮಗಿರುವ ಭಕ್ತಿಭಾವ ಪ್ರಕಟಿಸಿದ್ದಾರೆ.

ಯೋಗಸಿದ್ಧಿಯ ಅಂತಿಮ ಗುರಿಯಾದ ಪರಮಾತ್ಮ

ದರ್ಪದೌರ್ಜನ್ಯವೆಸಗಲು ಪ್ರಾರಂಭಿಸಿದ. ಖಿಲಾಫತ್‌ದಿಂದ ನಿರ್ಗಮಿಸಿದ ಇಮಾಮ್ ಹುಸೇನ ಸಹಿಸಿಕೊಳ್ಳದಿದ್ದುದು ಕರ್ಬಲಾ ಕಾಳಗಕ್ಕೆ ಕಾರಣವಾಯಿತು. ಇದು 'ದೀನ್ ಕಾ ಜಂಗ್' (ಧರ್ಮಯುದ್ಧ) . ಇದರಲ್ಲಿ ಇಮಾಮ್ ಹುಸೇನ್ ಹಾಗೂ ಅವರ ಅನುಯಾಯಿಗಳು ಅಸುನೀಗಿದರು. ಸತ್ಯ, ಶಾಂತಿ, ನ್ಯಾಯ ಹಾಗೂ ಧರ್ಮಕ್ಕಾಗಿ ತಮ್ಮ ಜೀವ ಬಲಿದಾನ ಮಾಡಿದ ಅವರು 'ಶಹೀದ' (ಹುತಾತ್ಮ)ರಾದರು. ಅವರ ಮಾರಣಹೋಮ ಹಿಜರೀ ಶಕ ೬೧ರ ಮೊಹರಮ್ ಮಾಸದ ಮೊದಲ ಹತ್ತು ದಿನಗಳ ವರೆಗೆ ನಡೆದ ಪ್ರಯುಕ್ತ ಈ ಅವಧಿಯಲ್ಲಿ ಮುಸಲ್ಮಾನರು 'ಆಶುರಾ' (ಶೋಕ) ಆಚರಿಸುವ ಮೂಲಕ ಕರ್ಬಲಾ ಮೈದಾನದಲ್ಲಿ ಹುತಾತ್ಮರಾದವರ ಆತ್ಮಕ್ಕೆ ಶಾಂತಿ ಕೋರಬೇಕೆಂದು ಶರೀಫ್ ತಿಳಿಸಿಕೊಟ್ಟದ್ದಾರೆ.

ಹೀಗೆ, ಶರೀಫ್ ಇಸ್ಲಾಮ್ ಮತ ತತ್ವ ಹಾಗೂ ಅದರ ಪ್ರವರ್ತಕ ಮೊಹಮ್ಮದ್ ಪೈಗಂಬರ ಬಗ್ಗೆ ಗೌರವಾದರ ಪ್ರಕಟಿಸುವುದು, ಸ್ವಧರ್ಮದಲ್ಲಿ ನಿಷ್ಠೆಯನ್ನೂ ಹಾಗೂ ಮೊಹರಮ್ ಸಂದರ್ಭದಲ್ಲಿ ಮತೀಯ ಹೆಸರಿನಲ್ಲಿ ಮತೀಯವಲ್ಲದ ಪಂಜಾ-ತಾಬೂತ ಪ್ರತಿಷ್ಠಾಪನೆ ಹಾಗೂ ಮೆರವಣಿಗೆ ಕೃತ್ಯಗಳನ್ನು ಟೀಕಿಸುವುದು, ಇಸ್ಲಾಮ್ ಧರ್ಮದ ನಿಜವಾದ ತಿರುಳು ಮುಸಲ್ಮಾನರು ತಿಳಿಯಬೇಕೆಂಬ ಕಳಕಳಿಯನ್ನೂ ಸೂಚಿಸುತ್ತದೆ.

ವೀರಶೈವ ಮತ: ಶರೀಫ್ ಚಿಕ್ಕಂದಿನಲ್ಲಿಯೇ ಸ್ಥಳೀಯ ಹಿರೇಮಠ ಸಿದ್ಧರಾಮಯ್ಯನವರಿಂದ ಶರಣ ಸಾಹಿತ್ಯದ ತಿರುಳು ತಿಳಿದುಕೊಂಡು ಪ್ರಭಾವಿತರಾದರು. ಶಿವಶರಣರಲ್ಲಿ ಶರೀಫ್‌ಗೆ ವಿಶೇಷ ಆದರಾಭಿಮಾನಗಳಿಗೆ ಪಾತ್ರರಾದವರು ಬಸವಣ್ಣ ಹಾಗೂ ಪ್ರಭುದೇವ. 'ಬಸವಣ್ಣನಂಥ ಭಕ್ತನಿಲ್ಲ; ಪ್ರಭುದೇವರಂಥ ಪರಮಾತ್ಮನಿಲ್ಲ'ವೆಂದು ಉದ್ಗಾರ ತೆಗೆದದ್ದುಂಟು. ಬಸವಣ್ಣನ

ಸಾಕ್ಷಾತ್ಕಾರಕ್ಕೆ ಪೂರಕವಾದ ಶಿವನಾಮಸ್ಮರಣೆ ಹಾಗೂ ಮುಕ್ತಿಗೆ ಮೂಲವಾದ ಪಂಚಾಕ್ಷರಿ ಷಡಕ್ಷರಿ ಮಂತ್ರದ ಮಹಿಮೆಯನ್ನು 'ದಿನಮಾನ ಬಹು ಕೆಟ್ಟವು ಸದ್ಗುರು ಪುತ್ರ' (೨೩೨:೨೦೦) ಹಾಡಿನಲ್ಲಿ ಶರೀಫ್ ವಿವರಿಸಿರುವರು. ವೀರಶೈವರ ಪಂಚಾಕ್ಷರಿ ಷಡಕ್ಷರಿ ಮಂತ್ರದಲ್ಲಿ ಅವರಿಗಿರುವ ದೃಢವಿಶ್ವಾಸ ಪ್ರಕಟಿಸುತ್ತದೆ.

ವೀರಶೈವ ಮತ ತತ್ವಗಳಿಂದ ಪ್ರಭಾವಿತರಾದಂತೆ ಅವುಗಳಿಗೆ ವ್ಯತಿರಿಕ್ತವಾಗಿ ನಡೆದುಕೊಳ್ಳುವವರನ್ನು ಶರೀಫ್ ಟೀಕಿಸಿದ್ದಾರೆ. ಉದಾಹರಣೆಗೆ, ವೀರಶೈವ ಮತ ತತ್ವಗಳ ಪ್ರಚಾರಕ್ಕಾಗಿರುವ ಜಂಗಮರು ತಮ್ಮ ಕಾರ್ಯ ಮರೆತು ಭಿಕ್ಷಾಟಣೆ ಮಾಡುತ್ತ ಅಲೆಯುವದನ್ನು ಖಂಡಿಸಿದ್ದಾರೆ.

"ಲಿಂಗದೊಳಗೆ ಮನವಿಡದಿನ್ನಷ್ಟಾವರಣ
ಇಂಗಿತ ತಿಳಿಯದಲೇನು ಫಲ?
ಜಂಗಮ ಜಂಗುಕಟ್ಟಿ ಹಿಂಗದೆ ತಿರುಗಲು
ಸಂಗನ ಶರಣರಿಗೇನು ಫಲ?

ಚಾರುತರದ ಪಂಚಾಕ್ಷರಿ ಜಪವನು
ಬಾರಿ ಬಾರಿಗೆ ಮಾಡದಲೇನು ಫಲ?
ಭಂಡ ಭವಿಗಳನ್ನು ಖಂಡಿಸದೇ ಸುಳ್ಳೇ
ಹಿಂಡುಗಟ್ಟಿ ತಿರುಗೇನು ಫಲ?

ಕಡುತರದಾಸೆಯ ಸುಡದೆ ವಿರಕ್ತಿಯ
ಪಡೆದು ಮಠದೊಳಿರಲೇನು ಫಲ....(೯೫:೯೧)

ಅಷ್ಟಾವರಣ★ ಇಂಗಿತ ತಿಳಿಯದ, ಭಕ್ತರೊಡನೆ ವೀರಶೈವ ಮತ ಜಿಜ್ಞಾಳೆ ಮಾಡಲೆಳಸದ, ತ್ರಿಕಾಲದಲ್ಲಿ ಪಂಚಾಕ್ಷರಿ ಮಂತ್ರ ಜಪ ಮಾಡದ, ಭಂಡ ಭಕ್ತರನ್ನು ಖಂಡಿಸದ ಹಾಗೂ ಕಡುತರದಾಸೆ

★ ಗುರುಲಿಂಗ ಜಂಗಮ, ಪಾದೋದಕ ಪ್ರಸಾದ ವಿಭೂತಿ (ಭಸ್ಮ) ರುದ್ರಾಕ್ಷಿ ಮಂತ್ರ

ಸುಡದ ಜಂಗಮ ಜಂಗುಕಟ್ಟಿ ಭಿಕ್ಷೆ ಬೇಡುತ್ತ ತಿರುಗುವದರಿಂದ ವೀರಶೈವ ಮತ ಪ್ರಚಾರವಾಗಲಿ ಇಲ್ಲವೆ ಅದನ್ನು ಅನುಸರಿಸುವ ಅನುಯಾಯಿಗಳಿಗಾಗಲಿ ಪ್ರಯೋಜನವಿಲ್ಲವೆಂದು ಶರೀಫ್ ಹೇಳುವುದು 'ಜಂಗಮ' ಪರಿಕಲ್ಪ ವಿಕೃತಗೊಂಡಿರುವುದನ್ನು ಸೂಚಿಸುತ್ತದೆ.

ಜಂಗಮರ ಕರ್ತವ್ಯಲೋಪ ಟೀಕಿಸಿದಂತೆ ಡಂಬಾಚಾರದ ಲಿಂಗಪೂಜೆಯನ್ನು ಕೂಡ ಶರೀಫ್ ಅಣಕವಾಡಿದ್ದಾರೆ.

''ಅಂಗ ಲಿಂಗದ ಸುಖ ಸಮರಸವನರಿಯದೆ
ಮಂಗನ ತೆರದಲ್ಲಿ ಲಿಂಗಪೂಜಿಸುವರು'' (೨೨೬:೧೯೭)

'ಲಿಂಗಾಂಗ ಸಾಮರಸ್ಯ'ದ ಇಂಗಿತವನ್ನರಿಯದೇ ಮಾಡಿದ ಲಿಂಗಪೂಜೆ ಡಂಬಾಚಾರವಾಗುವದೆಂದು ಶರೀಫ್ ಹೇಳುವಲ್ಲಿ ಇಷ್ಟಲಿಂಗ ಪೂಜೆಯ ನಿಜವಾದ ಹಿನ್ನೆಲೆ ಹಾಗೂ ಅದರ ತಿರುಳು ತಿಳಿದು ಪೂಜೆ ಮಾಡಿ ವೀರಶೈವರು ಉದ್ಧಾರವಾಗಬೇಕೆಂಬ ಕಳಕಳಿಯಿದೆ.

ಹೀಗೆ ಮುಸ್ಲಿಮ್ ಮೂಲದವರಾದ ಶರೀಫ್ ವೀರಶೈವ ಮತತತ್ವಗಳಲ್ಲಿ ಗೌರವಾದರಗಳನ್ನು ಪ್ರಕಟಿಸುವದು ಪರಧರ್ಮಸಹಿಷ್ಣುತೆಯನ್ನು ಹಾಗೂ ವೀರಶೈವ ಮತತತ್ವಗಳಿಗೆ ವ್ಯತಿರಿಕ್ತವಾಗಿ ನಡೆಯುವ ವೀರಶೈವರನ್ನು ಟೀಕಿಸುವದು ವೀರಶೈವ ಧರ್ಮ ಉಳಿದು ಅದು ಅದರ ಅನುಯಾಯಿಗಳನ್ನು ಉದ್ಧಾರಮಾಡಬೇಕೆಂಬುದನ್ನು ಸೂಚಿಸುತ್ತದೆ.

ವೈದಿಕ ಮತ: ಮುಸ್ಲಿಮ್ ಮೂಲದವರಾದರೂ ಶರೀಫ್ ಬಾಲ್ಯದಲ್ಲಿ ಗೋವಿಂದಭಟ್ಟರಿಂದ ವೇದೋಪನಿಷತ್ತು, ಭಗವದ್ಗೀತೆ ಮುಂತಾದ ವೈದಿಕ ಮತಸಂಬಂಧಿ ಗ್ರಂಥಗಳ ವಿಚಾರ ತಿಳಿದು ಕೊಂಡರು. ಮಡದಿಯ ಮರಣದಿಂದಾಗಿ ಪಾರಮಾರ್ಥಿಕದೆಡೆಗೆ ತಿರುಗಿದ ಶರೀಫ್ ಗೋವಿಂದಭಟ್ಟರಿಂದ ಬ್ರಹ್ಮೋಪದೇಶ ಪಡೆದುಕೊಂಡರು.

''ಹಾಕಿದ ಜನಿವಾರವ ಸದ್ಗುರುನಾಥ
ಹಾಕಿದ ಜನಿವಾರ ನೂಕಿದ ಭವಭಾರ
ಬೇಕೆನುತಲಿ ಬ್ರಹ್ಮಜ್ಞಾನ ಉಚ್ಚರಿಸೆಂದು...'' (೪೧:೪೦)

ಶರೀಫ್ ಜನಿವಾರವನ್ನು ಸಾಂಕೇತಿಕವಾಗಿ ಬಳಸಿದ್ದಾರೆ. 'ಜ' ಎಂದರೆ ಹುಟ್ಟು ಸಾವು; 'ನಿವಾರ' ಎಂದರೆ ನಿವಾರಿಸುವದು. ಈ ಮೊದಲೇ ಹೇಳಿದಂತೆ ಸಂಸಾರದಿಂದ ನಿರಾಶರಾಗಿ ಪಾರಮಾರ್ಥಿಕ ಪಥದತ್ತ ತಿರುಗಿದ ಶರೀಫ್‌ರಿಗೆ ಗೋವಿಂದಭಟ್ಟರು ಬ್ರಹ್ಮೋಪದೇಶ ಮಾಡಿ ಪರಮಾತ್ಮ ಸಾಕ್ಷಾತ್ಕಾರಕ್ಕೆ ಕಾರಣರಾದರು. ಅವರನ್ನು ಶರೀಫ್ ಕೃತಜ್ಞತೆಯಿಂದ ನೆನೆಯುವುದು ಸಹಜ.

ವೈದಿಕ 'ಜನಿವಾರ' ತತ್ವದಂತೆ ''ಏಕಾದಶಿ ವ್ರತ' ದಿಂದಲೂ ಶರೀಫ್ ಪ್ರಭಾವಿತರಾಗಿದ್ದಾರೆ.

''ಇಂದು ಏಕಾದಶಿ ವ್ರತವ ತೀರಿಸಿದೆ ಗೋ-
ವಿಂದ ಶ್ರೀ ಗುರುನಾಥನುಪದೇಶ ಬಲದಿಂದ
ಹೊಂದಿದೆ ಅದ್ವೈತವ ಸಂಧ್ಯಾವಂದನೆಯ ಕಾಲದಿ
ಬಂಧುರ ಬಯಲು ಬ್ರಹ್ಮಾನಂದದಿ ...'' (೨೦೩ - ೧೮೦)

ಸಂಧ್ಯಾವಂದನೆ ಸಮಯದಲ್ಲಿ ಜೀವಾತ್ಮ - ಪರಮಾತ್ಮ ಸಮ್ಮಿಲನಗೊಂಡು ಬ್ರಹ್ಮಾನಂದ ಅನುಭವಿಸಲು ಸಾಧ್ಯವಾಗುವುದೆಂದು ಶರೀಫ್ ವಿವರಿಸುತ್ತಾರೆ.

ಧರ್ಮಗ್ಲಾನಿಯಾಗುವಾಗ ಭಗವಂತ ಭೂಲೋಕದಲ್ಲಿ ಅವತರಿಸಿ ಧರ್ಮ ಭದ್ರವಾಗಿ ನೆಲೆಗೊಳ್ಳುವುದಕ್ಕೆ ಕಾರಣಕರ್ತನಾಗುವನೆನ್ನುವ ಭಗವದ್ಗೀತೆಯ ವಿಚಾರ 'ದಶಾವತಾರ ಕಾ ಕೃಷ್ಣ' (೮ : ೭) ಶರೀಫ್ ಗೀತೆಯಲ್ಲಿ ಕಾಣಬಹುದಾಗಿದೆ.

ಶ್ರೀಧರನಾಮದ ಮಹಿಮೆ ಅರಿಯದುದೇ ವೈದಿಕ
ವಿಷ್ಣುವಿನಿಂದ ದೂರವಾಗಲು ಕಾರಣವೆಂಬ ನಿತ್ಯಸತ್ಯವನ್ನು ಹೇಳು
ಮೂಲಕ ಮೋಕ್ಷಸಿದ್ಧಿಯಲ್ಲಿ ಶ್ರೀಧರನಾಮದ ಮಹಿಮೆಯನ
ವಿವರಿಸಿದ್ದಾರೆ.

"..... ಶ್ರೀಧರನಾಮವನರಿಯದ ವೈಷ್ಣವ
ಈ ಧರೆಯೊಳು ಮ್ಯಾದರ ನಾಯಿ . . . . ." (೨೭೮ - ೨೬೭)

ವೈದಿಕರನ್ನು ಶರೀಫ್ ಮಾದಿಗರ ನಾಯಿ, ಮ್ಯಾದಾರ ನಾಯಿ
ಆರೋಪಿಸಿರುವುದು ಕ್ರಮವಾಗಿ ಅಧಮ, ಡೋಂಗಿ ಹೀನಗುಣಗಳನ
ಸಂಕೇತಿಸಿದ್ದು ಇವುಗಳಿಂದ ಮುಕ್ತರಾಗದಿದ್ದಲ್ಲಿ ಅವರಿಗೆ ಮು
ಇಲ್ಲವೆಂದು ಶರೀಫ್ ಸಾರಿದ್ದಾರೆ.

ಹೀಗೆ ಮುಸ್ಲಿಮ್ ಮೂಲದವರಾದ ಶರೀಫ್ ವೈದಿಕ ಮ
ತತ್ವಗಳನ್ನು ಮುಕ್ತಕಂಠದಿಂದ ಸ್ತುತಿಸಿದ್ದು ಹಾಗೂ ಅವುಗಳಿ
ವ್ಯತಿರಿಕ್ತವಾಗಿ ನಡೆದುಕೊಳ್ಳುವವರ ಬಗ್ಗೆ ತಮ್ಮ ಅಸಹ
ವ್ಯಕ್ತಪಡಿಸಿದ್ದು ವೈದಿಕ ಮತ ತತ್ವಗಳ ಬಗ್ಗೆ ಅವರಿಗಿರು
ಆದರಾಭಿಮಾನ ಸೂಚಿಸುತ್ತದೆ.

ರಾಮಾಯಣ - ಮಹಾಭಾರತ

ವೈದಿಕಮತ ಸೂಚಿ ಗ್ರಂಥಗಳಾದ ರಾಮಾಯಣ -
ಮಹಾಭಾರತಗಳಿಂದ ಶರೀಫ್ ಪ್ರಭಾವಿತರಾದುದಲ್ಲದೆ ಅವು ಅವ
ಕಾವ್ಯಕ್ಕೆ ವಸ್ತುವಾದುದೊಂದು ವಿಶೇಷ. ಉದಾಹರಣೆಗೆ, ರಾಮ -
ಲಕ್ಷ್ಮಣರು ವನವಾಸದಲ್ಲಿದ್ದಾಗ ಸೀತೆಯನ್ನು ಮೋಸದಿಂದ ಕದ್ದೊಯ್ದ
ರಾವಣನಿಂದ ಅವಳನ್ನು ಬಿಡಿಸಿಕೊಂಡು ಬಂದು ರಾಮನಿಗೊಪ್ಪಿಸುವಲ್ಲಿ
ತೋರಿದ ಆಂಜನೇಯನ ಅಪ್ರತಿಮ ಸಾಹಸ ಹಾಗೂ ಸ್ವಾಮಿಭಕ್ತಿಯನ್ನು
'ಶ್ರೀ ಹನುಮಂತದೇವರ ದಂಡಕ' (೨೬೯ :- ೨೩೭) ದಲ್ಲಿ

ವಿವರಿಸಿದರೆ, ಬಾಲ್ಯ ದಲ್ಲಿ ದುಷ್ಟ ಕಂಸನ ಸಂಹಾರ, ಗೊಲ್ಲತಿಯರಿಗೆ ಕೀಟಲೆ ಹಾಗೂ ವಯಸ್ಕನಾದ ಮೇಲೆ 'ಮಹಾಭಾರತದಲ್ಲಿ ನಿರ್ಣಯಾತ್ಮಕ ಪಾತ್ರ ವಹಿಸಿದ ಕೃಷ್ಣನ ವ್ಯಕ್ತಿತ್ವವನ್ನು 'ಶ್ರೀ ಕೃಷ್ಣದಂಡಕ' (೨೭೧ : ೨೪೧)ದಲ್ಲಿ ಶರೀಫ್ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ.

ರಾಮಾಯಣ - ಮಹಾಭಾರತ ಕುರಿತು ಶರೀಫ್ ಕೃತಿಗಳಲ್ಲಿ ಆಂಜನೇಯ ಹಾಗೂ ಶ್ರೀ ಕೃಷ್ಣ ಕೇಂದ್ರ ವ್ಯಕ್ತಿಗಳಾಗಿ ಚಿತ್ರಿತಗೊಂಡಿದ್ದು ಶರೀಫ್ ಕಾವ್ಯದ ಒಂದು ವಿಶೇಷವಾದರೆ, ಮೊಹರಮ್ ಘಟನೆಗಳನ್ನು ಕಾಣುವುದು ಮತ್ತೊಂದು ವಿಶೇಷ''. ಉದಾಹರಣೆಗೆ, ರಾಮಾಯಣದಲ್ಲಿ ಮೊಹರಮ್ ಘಟನೆ ಕಾಣುವ ಶರೀಫ್ ರಿವಾಯತ್ ಪದ ಗಮನಿಸಿ.

''ಅಶುರಾ ಮೊಹರಮ್ ಎರಡರ ಮಧ್ಯದಿ
ನಾಶವಾಯಿತು ಲಂಕಾದ್ವಿಪುರ
ಭಾಸುರ ಕಿರಣವ ನುಂಗಿದ ಹನುಮನು
ಈಸಿ ಅಸುರ ಕುಲ ಸಂಹಾರ
ಒಂದು ದಿವಸ ಆನಂದ ಕಾಲದಲಿ
ಸುಂದರ ಶ್ರೀಮುಖ್ಯ ಪ್ರಾಣ
ಚಂದದಿ ರಾಮನ ಕೇಳಿ ನಡೆದನು
ನೋಡಬೇಕೆನುತಲಿ ಮದೀನ
ಬಂದು ಹೊಕ್ಕ ಹಜರತ್ ಅಲಿ ಗರಡಿಯ
ಹೊಂದಿ ಸಾಮ - ಭೇದ - ದಂಡೋಪಾಯತನ
ಬಂಧುರ ಭುಜಕರ ಅಪ್ಪಿ ತಾನು
ಚಪ್ಪರಿಸಿ ನಿಂದು ಚಲ್ವರಿದು ಘನ
ಭಂಗಪಡಿಸಿ ಆ ಮಂಗನ ಮಾತಿಗೆ
ಕಂಗಾಲಾಗದೆ ಕಾಲ್ಮಲಿಕಿಕ್ಕಿ
ರಂಗಿನಿಂದ ರಾಜೀವಲೋಚನ

ಜಂಗವರಿದು ಜಗ್ಗುತ ನೂಕಿ
ಸಂಗಬಲಿದು ಸಾರಂಗನ ವ್ಯಗ್ರದಿ
ಲಂಗಿಸಿ ಹೊಡೆದನು ತಪರಾಕಿ
ತುಂಗ ಶಿಶುನಾಳಧೀಶನ ಕರುಣದಿ
ಸಾರುವೆ ರಾಮಾಯಣದಂಕಿ'' (೨೧೧ : ೪೦೩ : ೪೯೪)

ಮಹಾಭಾರತದಲ್ಲಿ ಕರ್ಣ - ಅರ್ಜುನರ ಮಧ್ಯ ನಡೆದ ಕಾಳಗವನ್ನು ಕರ್ಬಲಾ ಕಾಳಗಕ್ಕೆ ಹೋಲಿಸಿದ ಇನ್ನೊಂದು ರಿವಾಯತ್ ಪದ ನೋಡಿ -

''ಕರ್ಣ ಬಂದು ಕರ್ಬಲದಲಿ ಪಾಥ
ವರ್ನ ಕಂಡು ಕದನಕ ನಿಂತು ಸು-
ವರ್ಣ ಪೀಠ ಮದೀನ ಶಾರದಿ
ಪರ್ವ ಅಶ್ವನೇರಿದನೆಂತು ..... '' (೪೧೪ : ೪೦೭)

ಹೀಗೆ ರಾಮಾಯಣ - ಮಹಾಭಾರತ ಪ್ರಸಂಗಗಳನ್ನು ಮೊಹರಮ್‌ನಲ್ಲಿಯೂ, ಮೊಹರಮ್ ಘಟನೆಯನ್ನು ರಾಮಾಯಣ - ಮಹಾಭಾರತಗಳಲ್ಲಿಯೂ ಗುರುತಿಸುವ ಮೂಲಕ ಶರೀಫ್ ಹಿಂದು ಮುಸ್ಲಿಮ್ ಮತ ತತ್ವಗಳನ್ನು ಸಮೀಕರಿಸಲು ಪ್ರಯತ್ನಿಸಿರುವುದು ಅವರ ಧಾರ್ಮಿಕ ವಿಶಾಲ ಮನೋಭಾವದ ಕುರುಹಾಗಿರುವುದಲ್ಲದೆ ಅದೊಂದು ಹೊಚ್ಚ ಹೊಸ ಪ್ರಯತ್ನವೆಂದು ಹೇಳದಿರಲಾಗದು.

ಇಸ್ಲಾಮ್, ವೀರಶೈವ ಹಾಗೂ ವೈದಿಕ ಮತ ತತ್ವಗಳ ಕುರಿತು ಶರೀಫ್ ಪ್ರತಿಕ್ರಿಯೆ ಪರಿಶೀಲಿಸಿದ ಮೇಲೆ ನಮಗೆ ನಾಲ್ಕು ಸಂಗತಿಗಳು ಗೋಚರಿಸುತ್ತವೆ. ಮೊದಲನೆಯದಾಗಿ, ಶರೀಫ್ ಪೂರ್ವಾಗ್ರಹ ಪೀಡಿತವಿಲ್ಲದೆ ತೆರೆದ ಮನಸ್ಸಿನಿಂದ ಮೇಲೆ ವಿವರಿಸಿದ ಮೂರು ಮತಗಳಿಗೆ ಸಂಬಂಧಿಸಿದ ಧಾರ್ಮಿಕ ಗ್ರಂಥಗಳನ್ನು ಆಳವಾಗಿ ಅಧ್ಯಯನಿಸಿ ಧಾರ್ಮಿಕ ವಿಶಾಲ ಮನೋಭಾವ ಬೆಳೆಸಿಕೊಂಡ ಪ್ರಯುಕ್ತ ಅವರು ಈ ಎಲ್ಲ ಮತದವರಿಗೆ 'ಇವ ನಮ್ಮವ'ನೆನ್ನುವಷ್ಟರ ಮಟ್ಟಿಗೆ

ಆದರಣೀಯರಾಗಿದ್ದಾರೆ. ಎರಡನೆಯದಾಗಿ, ಮೇಲೆ ನಿವೇದಿಸಿದ ಮೂರು ಮತಗಳಿಗೆ ಸಂಬಂಧಿಸಿದ ಅನುಯಾಯಿಗಳು ತಮ್ಮ ಮತತತ್ವಗಳಿಗೆ ವ್ಯತಿರಿಕ್ತವಾಗಿ ನಡೆದುಕೊಂಡಾಗ ಶರೀಫ್ ಖಂಡಿಸುವುದು ಆಯಾ ಮತ ತತ್ವಗಳ ಬಗೆಗಿನ ಆದರಭಾವ ಹಾಗೂ ಅವುಗಳಿಗನುಗುಣವಾಗಿ ಆಯಾ ಮತಾನುಯಾಯಿಗಳು ನಡೆಯಬೇಕೆಂಬ ಕಾಳಜಿ ವ್ಯಂಜಿಸುತ್ತದೆ. ಮೂರನೆಯದಾಗಿ, ಇಸ್ಲಾಮ್ - ಏಕೇಶ್ವರ, ವೈದಿಕ - ಅದ್ವೈತ, ವೀರಶೈವ ಷಟ್‌ಸ್ಥಲ - ಹಾಗೂ ಶಕ್ತಿವಿಶಿಷ್ಟಾದ್ವೈತ ತತ್ವಗಳನ್ನು 'ಭೋಧ ಒಂದೇ ಬ್ರಹ್ಮನಾದ ಒಂದೇ.... ಶಿಶುನಾಳಧೀಶನ ಭಾಷೆಯೊಂದೇ' (೫೨ - ೪೭) ಗೀತೆಯಲ್ಲಿ ಸಮೀಕರಣ ಮಾಡಲೆಳಸಿದ್ದಾರೆ. ನಾಲ್ಕನೆಯದಾಗಿ ಇಸ್ಲಾಮ್ - ಜೀವಹಿಂಸೆ, ವೈದಿಕ ವರ್ಣಾಶ್ರಮಧರ್ಮ ತತ್ವಗಳಿಂದ ಬೇಸತ್ತ ಶರೀಫ್ ವೀರಶೈವ ಮತದೆಡೆಗೆ ವಾಲಿದಂತೆ ತೋರುತ್ತದೆ. ಇಸ್ಲಾಮ್ - ಏಕೇಶ್ವರ, ವೈದಿಕ ಅದ್ವೈತ ತತ್ವಗಳನ್ನು ಸಮನ್ವಯಿಸಿಕೊಂಡ ವೀರಶೈವ ಮತ, ಜಾತಿ, ಲಿಂಗ ಬೇಧವಿಲ್ಲದೆ ಪ್ರತಿಯೊಬ್ಬರೂ ಕರಣಂಗಳೊಳು ಗುರುಬೋಧಿಸಿದ ಪಂಚಾಕ್ಷರಿ - ಷಡಕ್ಷರಿ ಮಂತ್ರ ಮನದಲ್ಲಿ ಪಠಿಸುತ್ತ ಇಷ್ಟಲಿಂಗ ಪೂಜಿಸಿ ಮುಕ್ತಿ ಹೊಂದಬಹುದೆಂಬ ಸಿದ್ಧಾಂತ ಶರೀಫರಿಗೆ ಹಿಡಿಸಿದಂತೆ ತೋರುತ್ತದೆ. ಶಿಶುನಾಳ ಪರಿಸರ, ವೀರಶೈವ ಮತದಿಂದ ಪ್ರಭಾವಿತರಾದ ತಂದೆ, ಕುಟುಂಬದ ಸದಸ್ಯರೆಲ್ಲ ತೀರಿದ ಮೇಲೆ ಏಕಾಂಗಿಯಾಗಿ ವೀರಶೈವರ ಕೃಪಾಪೋಷಣೆಗೊಳಪಟ್ಟದ್ದು; ಅಂತ್ಯಗಾಲದಲ್ಲಿ ವೀರಶೈವ ಸಂಪ್ರದಾಯದಂತೆ 'ವಿಭೂತಿ ವೀಳ್ಯ' ಮಾಡಿಸಿಕೊಂಡು ಪ್ರಾಣಬಿಡಬೇಕೆಂಬ ಸಂಕಲ್ಪ ಇವೇ ಮೊದಲಾದ ಸಂಗತಿಗಳು ವೀರಶೈವ ಮತದೆಡೆಗೆ ಅವರು ವಾಲಿದುದನ್ನು ಸೂಚಿಸುವುದಲ್ಲದೆ ಅದನ್ನು ಅನುಸರಿಸುವುದರಿಂದಲೇ ತಮಗೆ ಸದ್ಗತಿ ಸಿಗುವುದೆಂದು ಶರೀಫ್ ಭಾವಿಸಿದಂತೆ ಭಾಸವಾಗುತ್ತದೆ.

ರಾಜಕೀಯ ವಿಚಾರ:

ಶರೀಫ್ ಜೀವಿಸಿದ ಕಾಲ ೧೮೮೯ರಿಂದ ೧೮೮೯ ಈ ಅವಧಿಯಲ್ಲಿ ಕರ್ನಾಟಕ ಮೊದಲು ಈಸ್ಟ್ - ಇಂಡಿಯಾ ಕಂಪನಿ ಆಳಿಕೆಗೂ, ೧೮೫೭ ರ ಸಿಪಾಯಿ ದಂಗೆಯ ನಂತರ ಬ್ರಿಟಿಶ್ ರಾಣಿ ಸರಕಾರದ ನೇರ ಆಳಿಕೆಗೂ ಒಳಪಟ್ಟಿತು. ಕಂಪನಿ ಹಾಗೂ ರಾಣಿ ಸರಕಾರದ ನೀತಿ ನಿರೂಪಣೆಗಳನ್ನು ಕಾರ್ಯ ವೈಖರಿಗಳನ್ನು ತೆರೆದ ಕಣ್ಣಿನಿಂದ ನೋಡುವ ಶರೀಫ್ ೧೮೫೭ರ ಸಿಪಾಯಿ ದಂಗೆ ಕುರಿತು ಮುನ್ಸೂಚನೆನೀಡಿರುವುದೊಂದು ವಿಶೇಷ.

ಈಸ್ಟ್ ಇಂಡಿಯಾ ಕಂಪನಿ :

ಕೆಲವು ಆಂಗ್ಲ ಮುತ್ಸದ್ದಿಗಳು ಕೂಡಿ೧೬೦೦ರಲ್ಲಿ ಹುಟ್ಟುಹಾಕಿದ ಈಸ್ಟ್ ಇಂಡಿಯಾ ಕಂಪನಿ ಹಿಂದುಸ್ಥಾನದೊಡನೆ ವ್ಯಾಪಾರಮಾಡಬಯಸಿತು. ಔರಂಗಜೇಬನ ನಿಧನಾನಂತರ ದೇಶೀಯ ಆಳರಸರ ಅನೈಕ್ಯತೆಯ ದುರ್ಲಾಭ ಪಡೆದ ಕಂಪನಿಯವರು ರಾಜ್ಯಾಡಳಿತಕ್ಕೆಳಸಿದುದು ಶರೀಫ್ ಗಮನ ಸೆಳೆಯದಿರಲಿಲ್ಲ.

"..... ಕುಶಲಗಾರ ಕಂಪನಿಯವರಮ್ಮ
ವಾಸುದೇವನ ಅವತಾರ ಎನಿಸಿಹರಮ್ಮ
ಹುಶಾರಿಕಿರಲಿ ಮನದೊಳು ತಾಯ
ಒಳಹೊರದಾರಿ ಸುಳಿವ ಸೂಕ್ಷ್ಮದಾರಿ
ಪರಿಮಾಣದಲಿ ಮಾಡುವರಮ್ಮ
ದೊರೆಗಳನೆಲ್ಲ ಮುರಿವರು ತಂಗಿ
ಪರಮ ಪುರುಷ ಪರಂಗಿಯವರು .... (೭೬ : ೭೮)

ಆಂಗ್ಲರ ಒಡೆದು ಆಳುವ ನೀತಿಯಿಂದ ದೇಶೀಯ ಆಳರಸರು ಕಬ್ಬಾಡಿ ಹಾಳಾದಂತೆ ಅವರ ವಸಾಹಾತು ನೀತಿಯಿಂದ ದೇಶೀಯ ಕುಶಲ ಕೈಗಾರಿಕೆ ಅದರಲ್ಲಿಯೂ ಗುಡಿಕೈಗಾರಿಕೆ ಹಾಳಾದುದಕ್ಕೆ ಶರೀಫ್ ಹಳಹಳಿಸಿದ್ದಾರೆ.

ಸೂಜಿಯೇ ನೀನು ಸೂಜಿಯೇ
ರಾಜ್ಯದೊಳಗೆಲ್ಲ ತೇಜ ಕಾಣಿಸುವಂಥ
....
ತಂಪುಳ್ಳ ಉಕ್ಕಿನೊಳು ಹುಟ್ಟಿದ ಸೂಜಿಯೇ
ಶಿಂಪಿಗರಣ್ಣನ ಬಲವಾದ ಸೂಜಿಯೇ
ಇಂಪುಳ್ಳ ದಾರಕ್ಕೆ ಸೊಂಪುಗೂಡಿಸುವಂಥ
ಕಂಪನಿ ಸರಕಾರದ ವಶವಾದ ಸೂಜಿಯೇ ....''

(೧೯೧ : ೧೭೨)

ಆಂಗ್ಲರ ಉಡುಪುಗಳ ಹಿಂದುಸ್ಥಾನದಲ್ಲಿ ಮಾರಾಟವಾಗಿ ಹೆಚ್ಚು ಲಾಭಗಳಿಸಬೇಕೆಂದು ದುರುದ್ದೇಶದಿಂದ ಆಂಗ್ಲ ಸರಕಾರ ಸ್ವದೇಶ ಉಡುಪುಗಳ ಬೆಲೆ ಇಳಿಸುವ ಮೂಲಕ ಉಡುಪು ಸಿದ್ಧಪಡಿಸುವ ಉದ್ಯೋಗ ಆಂಗ್ಲರ ವಶವಾದುದನ್ನು 'ಕಂಪನಿ ಸರಕಾರದ ವಶವಾದ ಸೂಜಿಯೇ' ಸಾಲು ವ್ಯಂಜಿಸುತ್ತದೆ.

ಸಿಪಾಯಿದಂಗೆ : ದೇಶೀಯ ಆಳರಸರ ದಮನ ಹಾಗೂ ಸಿಪಾಯಿಯರನ್ನು ಹೀನಾಯವಾಗಿ ಕಾಣುವ ಕಂಪನಿ ಸರಕಾರದ ನೀತಿ ೧೮೫೭ರ ಸಿಪಾಯಿ ದಂಗೆಗೆ ಕಾರಣವಾಯಿತು. ಸಿಪಾಯಿದಂಗೆಯನ್ನು ಕಂಪನಿ ಸರಕಾರ ಹತ್ತಿಕ್ಕಿದರೂ ಹಿಂದೂಸ್ಥಾನದ ಆಡಳಿತ ಸೂತ್ರಗಳನ್ನು ರಾಣಿ ಸರಕಾರ ಹಿಡಿದುಕೊಂಡಿತು. ಇದರ ಮುನ್ಸೂಚನೆ ಶರೀಫ್ ಕಾಲಜ್ಞಾನದಲ್ಲಿರುವುದು ಆಶ್ಚರ್ಯವೆನಿಸುವುದು!

''ಜಿಟ್ಟಿ ಹುಳುಗಳು ಎದ್ದಾವು ಇದು ನೋಡು
ಸೃಷ್ಟಿಪತಿ ಅರಸರಿಗೆಲ್ಲ ಕೇಡು
ಅಷ್ಟದಿಶ ಮಧ್ಯದಲ್ಲಿಪ್ಪುವನೆಟ್ಟನಾದಿ ಭೂಮಿ ದಿಲ್ಲಿಗೆ
ಶ್ರೇಷ್ಠ ಕ್ರಿಸ್ತಾನ ಬಾದಶಹ ಪಟ್ಟಗಟ್ಟಲು ಕಂಡು .....''

(೨೭೫ : ೨೫೬)

ರೋಗ-ರುಜಿನ : **೧** : ೧೮೫೭ರ ಹಿಂದುಸ್ಥಾನದ ರಾಜ್ಯಾಡಳಿತ ರಾಣಿ ಸರಕಾರದ ನೇರ ಅಂಕಿತಕ್ಕೊಳಪಟ್ಟಾಗ ಅದು ಕೆಲವೊಂದು

ಜನೋಪಯೋಗಿ ಕಾರ್ಯಗಳನ್ನು ಕೈಗೊಂಡಿತು. ಅವುಗಳಲ್ಲಿ ಆಗಿನ್ನು ಪ್ರಚಾರದಲ್ಲಿರದ ಮರಣಾಂತಿಕ ಪ್ಲೇಗಿನ ಹುಟ್ಟು, ಪ್ರಸಾರ ಹಾಗೂ ಸರಕಾರ ಕೈಕೊಳ್ಳಬಹುದಾದ ಮುನ್ನೆಚ್ಚರಿಕೆ ಕ್ರಮಗಳನ್ನು ಶರೀಫ್ ಕಾಲಜ್ಞಾನದಲ್ಲಿ ವಿವರಿಸುವುದು ಸೋಜಿಗವೆನಿಸುತ್ತದೆ.

''ಉತ್ತರ ದಿಕ್ಕಿನೊಳುಟ್ಟುವುದು ರೋಗ
ಸುತ್ತಿಕೊಳ್ಳುವುದು ಪೃಥ್ವಿ ಅಷ್ಟದಿಕ್ಕುಗಳ
ಅತ್ಯಧಿಕ ಪೃಥ್ವಿಪತಿ ಇಂಗ್ಲಿಷ್ ಸರಕಾರ
ಗೊತ್ತು ಮಾಡುವುದು ಪ್ಲೇಗುಯೆಂತೆಂದು
ರೋಗದ ಸೂಚನೆ ಮೊದಲು ಇಲಿಗೆ ತಗಲಿ
ಜಾಗೆಯನ್ನು ಬಿಟ್ಟು ಹೊರಬಾಗಿಲೊಳು ಬಿದ್ದಳೆಯೆ
ಆಗ ಜನರಿಗಂಟಿ ಬಾಭರಿಗೊಳ್ಳು
ಹ್ಯಾಗೆ ಮಾಡಲಿ ದೇವಾ ಎನ್ನುವರು
ಜಗಪತಿ ಪ್ರಜಕೆಲ್ಲ ಕಟ್ಟಪ್ಪಣೆ ಇತ್ತನು
ತಗಲಬಾರದು ರೋಗ ಒಬ್ಬರಿಗೊಬ್ಬರಿಗೆ
ಅಗಲಿಸಿ ಊರ ಬಿಡಿಸಿ ಹೊರಗ್ಹಾಕಿಸಿ
ಮಿಗಿಲಾದ ಕ್ವಾರಂಟು ಕಟ್ಟಿಸುವ . . . .'' (೨೭೪ : ೨೫೪)

ಶಿಕ್ಷಣ: ಭಾರತೀಯರಿಗೆ ಶಿಕ್ಷಣ ನೀಡುವುದು ಕಂಪನಿ ಸರಕಾರದ ಆದ್ಯ ಕರ್ತವ್ಯವಾಗಿದೆಯೆಂಬ ಬ್ರಿಟಿಶ್ ಸರಕಾರದ ಆಜ್ಞೆಯ ಮೇರೆಗೆ ಕಂಪನಿ ಸರಕಾರ ಅನೇಕ ಗ್ರಾಮಗಳಲ್ಲಿ ಶಾಲೆ ತೆರೆದು ಮಕ್ಕಳಿಗೆ ಲೌಕಿಕ ಶಿಕ್ಷಣ ಕೊಡಲು ಪ್ರಾರಂಭಿಸಿತು. ಕೂಲಿಮಠ ಹಾಗೂ ವೈದಿಕ ಪಾಠಶಾಲೆಯ ಗುರುಗಳನ್ನು ಬಲ್ಲ ಶರೀಫರಿಗೆ ಗುಡಗೇರಿಯಲ್ಲಿ ತೆರೆದ ಸರಕಾರಿ ಶಾಲೆಯ ಶಿಕ್ಷಕನ ಕಾರ್ಯ ಚಟುವಟಿಕೆಗಳು ಗಮನಸೆಳೆಯದಿರಲಿಲ್ಲ.

''ಸಾಲಿಯ ನೋಡಿದಿಯಾ ಸರಕಾರದ
ಸಾಲಿ ಸದ್ಗುರುವಿನ ಮಾಲು ಮಂಟಪವಿದು

ಮೇಲು ಕಾಣಿಸುತದೆ ಭೂಲೋಕದೊಳು
. , ...
ಮೋಜಿಲಿಂದಿರುವ ಮಾಸ್ತರ ವಿ -
ರಾಜಿಸುತಿಹ ಸಹಜದಿ ಶಿಕ್ಷಣ ವಿಸ್ತಾರ
ಸೋಜಿಗೆವೆನಿಪ ಶ್ರೀ ಗುಡಿಪುರ ಗ್ರಾಮದಿ
ರಾಜ ಶಿಶುನಾಳಧೀಶನ ದಯದಿಂದ'' (೨೦೩ : ೧೭೯-೧೮೦)

ಸಾರಿಗೆ ಸಂಪರ್ಕ: ಹಿಂದೂಸ್ಥಾನದ ಮಸಾಲೆ ಸಾಮಾನು ಹಾಗೂ ಇತರೇ ಕಚ್ಚಾವಸ್ತುಗಳನ್ನು ಕಡಿಮೆ ಬೆಲೆಗೆ ಖರೀದಿಸಿ ಯೂರೋಪ ಮಾರುಕಟ್ಟೆಯಲ್ಲಿ ದುಬಾರಿ ಬೆಲೆಗೆ ಮಾರಿ ಶ್ರೀಮಂತವಾಗುವ ದಿಸೆಯಲ್ಲಿ ಬ್ರಿಟಿಶ್ ಸರಕಾರ ಹಿಂದೂಸ್ಥಾನದಲ್ಲಿ ಸಾರಿಗೆ - ಸಂಪರ್ಕ ಅಭಿವೃದ್ಧಿಪಡಿಸಿತು. ಹಿಂದುಸ್ಥಾನದ ಬೇರೆ ಬೇರೆ ಭಾಗಗಳಿಂದ ಕಚ್ಚಾವಸ್ತುಗಳನ್ನು ಬಂದರು ಕಟ್ಟೆಗೆ ಹಾಗೂ ದೇಶೀಯ ಆಳರಸರ ವಿರುದ್ಧ ಯುದ್ಧ ಮಾಡಲು ಬೇಕಾಗುವ ಯುದ್ಧೋಪಕರಣ ಸಾಗಾಣಿಕೆಗಾಗಿ ಬ್ರಿಟಿಶ್ ಸರಕಾರ ರೈಲುಮಾರ್ಗ ಕಲ್ಪಿಸಿದುದು ಶರೀಫ್ ಕಾವ್ಯಕ್ಕೆ ವಸ್ತುವಾಗಿದೆ.

'' ಭೂಪಾರದೊಳಗೆ ಮದೀನಶಹರದೊಳು
ವ್ಯಾಪಾರ ಮಾಡುವ ಅಗಿನಗಾಡಿಯು
. . . .
ಕೋಣಿಪರಾಜನ ಶಹಾನದೊರೆಗಳ
ಠಾಣೆದೊಳಗಿರುವ ಅಗಿನ ಗಾಡಿಯು
ಪಾಣಿ ಅಲಗು ಸಮಸ್ತ ಆಯುಧ
ಕ್ಷೀಣವಿಲ್ಲದೆ ತುಂಬ ತವಕದಿ
ಬಾಣಬಿಲ್ಲುಗಳಡಿಸಿ ಬೇಗನೆ
ರಾಣಿ ಸರಕಾರ ಸದರಿನೊಳು
. . . .

ಧರೆಯೊಳು ದಕ್ಷಿಣ ದೇಶದೊಳಗೆಲ್ಲ
ಅರಳ ಹೇರಿಸುವ ಅಗಿನ ಗಾಡಿಯು
ಸ್ವರಸದಿಂ ವಿಸ್ತರಿಸಿ ಪೇಳುವೆ
ವರ ಶಿಶುನಾಳಧೀಶನಾಜ್ಞೆಯ
ಮೆರಸಿದರು ಇಂಗ್ಲೀಷ್ ದೊರೆಗಳು
ಸರ್ವರಿಗೆ ಆಶ್ಚರ್ಯವಾಯಿತು" (೪೧೭ : ೪೧೦ - ೪೧೧)

ಸಿಪಾಯಿ ದಂಗೆ, ಪ್ಲೇಗ್, ಶಿಕ್ಷಣ, ಸಾರಿಗೆ - ಸಂಪರ್ಕ ನೀತಿ ಕುರಿತು ಶರೀಫ್ ಪ್ರತಿಕ್ರಿಯಿಸಿದರೂ ಪ್ರಖರತೆಯಿರುವುದಿಲ್ಲ. ಉದಾಹರಣೆಗೆ, ಸಿಪಾಯಿ ದಂಗೆ ಕುರಿತ ಮುನ್‌ಸೂಚನೆ ನೀಡಿದರೂ ಕಾರಣಗಳನ್ನಾಗಲಿ, ವಿಫಲತೆಯನ್ನಾಗಲಿ ವಿವರಿಸುವುದಿಲ್ಲ. ಹಾಗೆಯೇ ಬ್ರಿಟಿಶ್ ಶಿಕ್ಷಣ ಹಾಗೂ ಸಾರಿಗೆ - ಸಂಪರ್ಕ ನೀತಿ ಕುರಿತು ರಚಿತವಾದ ಗೀತೆಗಳು ಆಯಾ ನೀತಿಯ ಹಿಂದಿನ ಬ್ರಿಟಿಶ್ ಸರಕಾರದ ದುಷ್ಟ ಉದ್ದೇಶವನ್ನು ವಿವರಿಸದಿರುವುದರಿಂದ ಅವು ವರ್ಣನಾತ್ಮಕವಾಗಿ ಗೀತೆಗಳಾಗಿ ಬಿಡುತ್ತವೆ.

ವ್ಯಕ್ತಿ ವಿಚಾರ: ವ್ಯಕ್ತಿ ಕುಟುಂಬ, ಸಮಾಜ ಹಾಗೂ ದೇಶದ ಅವಿಭಾಜ್ಯ ಅಂಗ. ಆತನ ಆಗು-ಹೋಗುಗಳು ಮೇಲೆ ವಿವರಿಸಿದ ಸಾಮಾಜಿಕ ಸಂಸ್ಥೆಗಳ ಮೇಲೆ ಪರಿಣಾಮ ಬೀರುವುದು ಸಹಜ. ವ್ಯಕ್ತಿ ಕುರಿತು ಶರೀಫ್ ವ್ಯಕ್ತಪಡಿಸಿದ ವಿಚಾರಗಳು ಅಧ್ಯಯನ ಯೋಗ್ಯವಾಗಿವೆ.

ಜಾರತನ: ವಿವಾಹಿತ ಸ್ತ್ರೀ - ಪುರುಷರು ಒಂದು ಪರಿಧಿಯಲ್ಲಿ ತಮ್ಮ ಕಾಮ ಅಭಿವ್ಯಕ್ತಿಗೊಳಿಸಿ ತನ್ಮೂಲಕ ಕಾಮತೃಪ್ತಿ, ಸಂತಾನಭಾಗ್ಯ ಪಡೆಯುವುದನ್ನು ಸಮಾಜ ಮನ್ನಿಸುತ್ತದೆ. ಆದರೆ ವಿವಾಹಬಾಹಿರ ಸಂಬಂಧವನ್ನು ಸಮಾಜ ಮನ್ನಿಸದೇ 'ಹಾದರ'ವೆಂದು ಪರಿಗಣಿಸಿ ಹಾದರಕ್ಕೆಳಸಿದ ಸ್ತ್ರೀ - ಪುರುಷರನ್ನು ಕ್ರಮವಾಗಿ 'ಜಾರಿಣಿ' ಹಾಗೂ

'ಜಾರ' ಎಂದು ಮೊದಲಿಸುವ ಮೂಲಕ ಅವರನ್ನು ಕೀಳಾಗಿ ಕಾಣುತ್ತದೆ. ಸಂಪ್ರದಾಯ ಕುಟುಂಬದಲ್ಲಿ ಹುಟ್ಟಿದ ಶರೀಫ್ ವಿವಾಹಬಾಹಿರ ಸಂಬಂಧದ ದುಷ್ಪರಿಣಾಮ ವಿವರಿಸುವುದಕ್ಕೆ ಮರೆಯಲಿಲ್ಲ.

''ವಾರಿಜಮುಖಿ ದೊಡ್ಡ ಶಾರ ಹುಬ್ಬಳ್ಳಿಯೊಳು
ಕೋರಿ ಗಂಗಪ್ಪ ಸಾವಕಾರನು
ದಾರುಣಿಯೊಳು ಸಣ್ಣ ಊರ - ಕರಡೀಗುಡ್ಡ -
ಕಾರೈಸುತ ವ್ಯವಹಾರಕ್ಹೋಗಿ ಒಬ್ಬ
ವೀರಜಂಗಮನ ಹೇಣತಿಕೆಣಕಲು
ಮಾರಕೇಳಿಯೊಳ್ಮರಣ ಹೊಂದಿದ ...... '' (೧೯೮ : ೧೭೧)

ಸೂಳೆಗಾರಿಕೆ : ಶರೀಫ್ ಸೂಳೆಗಾರಿಕೆಯನ್ನು ಖಂಡಿಸುವುದರ ಜೊತೆಗೆ ಅದರ ಮೂಲವನ್ನು ಕಂಡು ಹಿಡಿದಿದ್ದಾರೆ.

''ಮಕ್ಕಳ್ಹಡೆದ ಸೂಳೆಯ ಸಂಗ ಮಾಡಬಾರದು ಅವಳ
ಕಕ್ಕುಲತೆಯಿಂದ ಹೋಗಿ ಕೂಡಬಾರದು
ವಿಷಯ ಸುಖವನು ಬಯಸಿ ಪೋಗಿ
ಹಾಸಿಗೆಯ ಮ್ಯಾಲ ಕೂಡ್ರಲಾಗಿ
ಶಿಶುವು ಅಳುತದೆಂದು ಎನ್ನ ಬಿಟ್ಟು ಪೋಗುತ ಬಹು
ಲೇಸಿನಿಂದ ಮೊಲೆಯನೊಡ್ಡಿ ಹಾಲು ನೀಡುತ ಹೊನ್ನಿನ
ರಾಶಿಯೇ ಬಾ ಎಂದು ಎತ್ತಿ ಮೋಹ ಮಾಡುತ'' . . . . . .
(೨೪೫ : ೨೦೯)

ಶರೀಫ್ ದೃಷ್ಟಿಯಲ್ಲಿ ಸೂಳೆಗಾರಿಕೆ ಸಮಾಜ ಮನ್ನಿಸಿದ ಸಂಸ್ಥೆಯಾಗಿರದೆ ವಿಟಪುರುಷನ ಕಾಮತೃಷೆ ಹಿಂಗಿಸಿ ಹಣ ಸಂಪಾದಿಸಿ ಹೊಟ್ಟೆ ಹೊರೆದುಕೊಳ್ಳುವ ಕಸುಬಾಗಿದೆ. ಇಂಥ ವೃತ್ತಿನಿರತ ಸೂಳೆಯಲ್ಲಿಗೆ ಹೋದ ವಿಟಪುರುಷ ಅವಳ ಶಿಶುವಿನ ಚಂಡಿತನದಿಂದಾಗಿ ಕಾಮಕಟ್ಟಳೆ ತೀರಿಸಿಕೊಳ್ಳಲು ವಿಫಲವಾಗಿ ಹಣ ಪೋಲು ಮಾಡಿಕೊಂಡುದಕ್ಕಿಂತಲೂ ವಿಟಪುರುಷ ಹಾಗೂ ಹೆತ್ತ ಶಿಶುವಿನ ಮಧ್ಯ ತೊಳಲಾಡುವ ಸೂಳೆಯ ಮಾನಸಿಕ ತುಮಲ ಓದುಗರ ಮನ ತಟ್ಟುತ್ತದೆ.

ಆಸೆಬುರುಕುತನ : ಆಸೆಯೇ ದುಃಖಕ್ಕೆ ಮೂಲ. ಇದು ಲೌಕಿಕ ಸುಖಕ್ಕೆ ಅಡ್ಡಿಯಾದಂತೆ ಪಾರಮಾರ್ಥಿಕ ಸುಖಕ್ಕೂ ಅಡ್ಡಿಯಾಗುವ ಕಾರಣ ಶರೀಫ್ ಮನೋನಿಯಂತ್ರಣಕ್ಕೆ ಕರೆಕೊಡುತ್ತಾರೆ.

''ಹೇಸಬಾರದೆ ಮನಸೇ ನೀ ಹೇಸಬಾರದೆ
ಆಸೇದ ನದಿಯೊಳು ಈಶಾಡುವುದಕ್ಕೆ
ಭೂಮಿಗುದಿಸಿ ಭವದ ಮಹಾ ಕರ್ಮದಿ
ಮರಳಿ ಮಾಯಾ ಮೋಹಕೆ ಮೋಹಿಸುವುದು
ಏಳು ಜನ್ಮಾಂತರ ಮೇಳಯಿಸದ ಸುಖ
ತಾಳಿ ಇಳೆಗೆ ಬಂದು ಬಾಳುವುದೇಕೆ ನೀ
ಲೋಕದಿ ಶಿಶುನಾಳಾಧೀಶನ ಭಜಿಸುತ
ಕಾಕು ವಿಷಯದ ಭೋಗ ಸಾಕು ಸಾಕಿನ್ನೆನುತ ''(೧೦೪ : ೯೬)-

ಆಸೆಬುರುಕ ಸ್ವಭಾವ ಮನುಷ್ಯನ ಮರುಹುಟ್ಟಿಗೆ ಕಾರಣವಾಗುವುದು. ಶಿಶುನಾಳಧೀಶ (ದೇವರು)ನ ನಾಮಸ್ಮರಣೆಯಲ್ಲಿ ತೊಡಗುವ ಮೂಲಕ ಆಸೆಯ ಪಾಶ ಹರಿದು, ಹುಟ್ಟು ಸಾವುಗಳಿಂದ ಮುಕ್ತನಾಗಬೇಕೆಂಬ ಶರೀಫ್ ವಿಚಾರ ಆಸೆ ಅಳಿದವನು ಈಶನಾಗುವ ನಾಣ್ನುಡಿ ನೆನಪಿಸುತ್ತದೆ.

ಅಹಂಕಾರ : 'ನಾನು' ಎನ್ನುವ ಹಮ್ಮು ಅಥವಾ ನಾನೇ ಮಿಗಿಲೆಂಬ ಸೊಕ್ಕು, ಇಲ್ಲವೇ ಮದ ಅಹಂಕಾರಕ್ಕೆ ಕಾರಣವಾಗಿದೆ. ಅಷ್ಟಮದಗಳಿಂದಾಗಿ ಮನುಷ್ಯ ದೇವತ್ವಕ್ಕೇರುವ ಬದಲು ಪಶುತ್ವಕ್ಕಿಳಿಯುವನೆಂದು ಹಲವಾರು ದೃಷ್ಟಾಂಗಳ ಮೂಲಕ ಶರೀಫ್ ವಿವರಿಸಿ ಎಚ್ಚರಿಸಿದ್ದಾರೆ.

ಅಷ್ಟಮದಗಳಲ್ಲಿ ಕುಲಮದ ಒಂದು. ಸ್ವಕುಲ ಶ್ರೇಷ್ಠವೆಂದು ಭಾವಿಸುವ ಕಳಸದ ಕೆಲವು ವೈದಿಕರು ಅನ್ಯಮತೀಯರೊಡನೆ ಸಂಪರ್ಕವಿರಿಸಿಕೊಂಡ ಗೋವಿಂದ ಭಟ್ಟರನ್ನು ಅನ್ನಪ್ರಸ್ತಕ್ಕೆ

ಆಹ್ವಾನಿಸದಿರುವುದಲ್ಲದೆ ಅವರನ್ನು ಸಾರ್ವಜನಿಕವಾಗಿ ಅವಹೇಳನ ಮಾಡಿದ್ದು ಶರೀಫ್ ಟೀಕೆಗೆ ಕಾರಣವಾಗಿದೆ.

"ಎರಗಿ ಬಿನ್ನಹ ಮಾಡದ್ದೊಡೀದರು
ಗುರುವರನ ಗಣರಿಗೆರಗಿ
ಬಿನ್ನಹ ಮಾಡದ್ದೊಡೀದರು
ನರಗುರಿಗಳು ಪರಿಹಾಸ್ಯದಿ
ಜರೆದರು ಎನ್ನ ಕರೆಸಿದುದಕ್ಕೆ
ಹರನ ಶಾಸ್ತ್ರಕ್ಕೆ ವರಪ್ರಸ್ತಕೆ
ಮರೆತರು ನಿಮಗರಿಕಿರಲಿ...."(೧೨೫:೧೧೭)

ಕುಲಮದದಂತೆ ವಿದ್ಯಾ ಮದವೂ ಅಷ್ಟಮದಗಳಲ್ಲೊಂದು. ವಿದ್ಯೆಯಲ್ಲಿ ತನ್ನನ್ನು ಮೀರಿಸುವವರು ಯಾರೂ ಇಲ್ಲವೆಂಬುದು ವಿದ್ಯಾಮದದ ಸಂಕೇತ. ಶಿಶುನಾಳದ ನೆರೆಯ ಅತ್ತಿಗೇರಿಯಲ್ಲಿ ನಡೆಯುತ್ತಿದ್ದ ಬ್ರಹ್ಮೋತ್ರಕಾಂಡ ಪ್ರವಚನದಲ್ಲಿ ಶಾಸ್ತ್ರಿ ಬೊಗಳೆ ಹೊಡೆಯುವುದನ್ನು ಪ್ರಶ್ನಿಸಿದ ಶರೀಫರಿಗೆ ಶಾಸ್ತ್ರಿಯಿಂದ ಅವಮಾನವಾಯಿತೆಂದು ಬೇರೆ ಹೇಳಬೇಕಿಲ್ಲ.

"ಎದ್ದು ಹೋಗತೇನಿ ತಾಳೆಲೊ
ಛಿ ಬುದ್ಧಿ ಗೇಡಿ
ಎದ್ದು ಹೋಗತೇನಿ ತಾಳೆಲೊ
ಇದ್ದು ಇಲ್ಲೇ ಭವಕೆ ಬೀಳೋ
ಸಧ್ಯ ಸದ್ಗುರು ಶಾಪ ನಿನಗೆ
ಸಿದ್ಧಲಿಂಗನ ಪಾದ ಸಾಕ್ಷಿ...." (೨೧೧:೧೮೫)

ಎಂದು ನುಡಿದು ಶರೀಫ್ ಪ್ರವಚನದ ಸ್ಥಳದಿಂದ ನಡದೇ ಬಿಟ್ಟರು!

ಯೌವ್ವನ ಮದ ಅಷ್ಟಮದಗಳಲ್ಲೊಂದು. ಯೌವ್ವನ ಮದದಿಂದ ಮೆರೆಯುತ್ತಿದ್ದ ಸೀಗಿಹಳ್ಳಿಮಠದ ಓರ್ವ ಜವ್ವನೆಯು ಆಗಮಿತ ಅಯ್ಯನವರಿಗೆ ಅವಮರ್ಯಾದೆ ಮಾಡಿದ್ದು ಶರೀಫ್ ಕೆರಳುವುದಕ್ಕೆ ಕಾರಣವಾಗಿದೆ.

''ಹುಟ್ಟಗರತಿಯ ಕಾಣಲಿಲ್ಲ ಕೊಟ್ಟ್ಯಾದಿಯಲ್ಲ
ಹುಟ್ಟಗರತಿಯ ಕಾಣಲಿಲ್ಲ
ಹುಟ್ಟಗರತಿಯ ಕಾಣಲಿಲ್ಲ
ಪಟ್ಟಗುಡುಮ ರಂಡೆ ನೀನು
ಪಟ್ಟದಯ್ಯನವರಿಳಿಯ ಬಂದರೆ
ಎಟ್ಟಿಮಾತುಗಳಾತೀದಿ....'' (೨೧೨:೧೮೬)

ಅಜ್ಞಾನ : ಜ್ಞಾನದ ವಿರುದ್ಧವಾದುದು ಅಜ್ಞಾನ. ವ್ಯಕ್ತಿ ಜ್ಞಾನದಿಂದ ಸುಖ-ಸಂಪತ್ತು-ಗೌರವಗಳನ್ನು ಸಂಪಾದಿಸಲು ಸಾಧ್ಯವಾದರೆ ಅಜ್ಞಾನದಿಂದ ಅವಮರ್ಯಾದೆಗೊಳ್ಳುತ್ತಾನೆ. ಶಿಶುನಾಳದಲ್ಲಿ ಜರುಗುವ ಪುರಾಣ ಪ್ರವಚನದಲ್ಲಿ ಸಂಗೀತದಲ್ಲಿ ಗಂಧ ಅರಿಯದ ತಂಬೂರಿ ಬಾರಿಸಿ ಅಪಸ್ವರ ಹೊರಡಿಸುವ ವ್ಯಕ್ತಿ ಶರೀಫ್ ಕಾವ್ಯಕ್ಕೆ ವಸ್ತುವಾಗುವುದಲ್ಲದೆ ಸಂಗೀತದಲ್ಲಿ ಶರೀಫ್‌ರಿಗಿರುವ ಜ್ಞಾನ ಪರಿಣತಿಯನ್ನು ಪ್ರಕಟಿಸುತ್ತದೆ.

''ತರವಲ್ಲ ತಗಿ ನಿನ್ನ ತಂಬೂರಿ
ಸ್ವರ ಬರದೆ ಬಾರಿಸದಿರು ತಂಬೂರಿ
ಸರಸಸಂಗೀತದಕುರುಹುಗಳರಿಯದೆ
ಕರದೊಳಿಡಿಬ್ಯಾಡ ತಂಬೂರಿ...'' (೧೬೭:೧೪೯)

ದುರ್ವ್ಯಸನ : ಸೆರೆ, ಸೇಂದಿ ಗಾಂಜಾ ಮುಂತಾದ ಮಾದಕ ಪೇಯ ಸೇವನೆ ದುರ್ವ್ಯಸನಗಳಿಂದ ಮನುಷ್ಯ ತಾನು ಹಾಳಾಗುವನಲ್ಲದೆ ತನ್ನ ಮೇಲೆ ಅವಲಂಬಿತವಾಗುವ ಕುಟುಂಬದ ಸದಸ್ಯರ ಅವನತಿ ಹಾಗೂ ಸಮಾಜದ ಮೊದಲಿಕೆಗೊಳಗಾಗುತ್ತಾನೆಂದು ಶರೀಫ್ ಸೋದಾಹರಣ ವಾಗಿ ವಿವರಿಸುತ್ತಾರೆ.

''ಹ್ಯಾಂಗ ಬಳಕೆ ಮಾಡಬೇಕಣ್ಣ ಹೀಂಗಾದಮ್ಯಾಲೆ
ಹ್ಯಾಂಗ ಬಳಕೆ ಮಾಡಬೇಕಣ್ಣ
ಹ್ಯಾಂಗ ಬಳಕೆ ಮಾಡಬೇಕು
ಹಂಗು ಹರಿದು ನಿಂತು ಮೇಲೆ

ಬಂಗಿತಂಬಾಕ ಸೇದುವ ಮರುಳ
ಮಂಗ್ಯಾಗಂಜಿದ ಮೇಲೆ......''(೨೪೯:೨೦೬)

ಸ್ವಕೀಯರ ಬಗ್ಗೆ ಕಾಳಜಿ ಇರದ ಹಾಗೂ ಅನ್ಯರು ದುಡಿದುದನ್ನು ಕುಳಿತು ಉಂಡು ಊರಲ್ಲಿ ಪುಂಡರಾಗಿ ತಿರುಗುವ ಪಾನಮತ್ತರಿಗೆ ಇಹಪರದಲ್ಲಿ ಸದ್ಗತಿ ಸಿಗಲಾರದು. ಕಾರಣ ಮಾದಕಪೇಯ ಸೇವನೆಯಿಂದ ದೂರಿರುವಂತೆ ಶರೀಫ್ ಮಾನವರಲ್ಲಿ ಮನವಿ ಮಾಡಿಕೊಳ್ಳುತ್ತಾರೆ. 'ಹಮ್ ಶರಾಬ ಸೀನೇಸೆ, ದಿಲ್‌ಲತನ್ ತಹೂರ್ ಬನ್‌ಗಯಾ' (೩೬೨:೩೭೪):ಹಾಗೂ 'ಸೇದಿದಿಯಾ ಬತ್ತಿ ಸೇದಿದಿಯಾ' (೧೯೯:೧೭೭) ಶರೀಫ್ ಗೀತೆಗಳು ಸಾಂಕೇತಿಕವಾಗಿ ರಹಸ್ಯಾನುಭವ ಸೂಚಿಯಾಗಿವೆ.

ಜಾರತನ, ಸೂಳೆಗಾರಿಕೆ, ಅಸೆಬರುಕತನ, ಅಹಂಕಾರ, ಅಜ್ಞಾನ, ದುರ್‌ವ್ಯಸನ ಮುಂತಾದ ದುರ್ಗುಣಗಳು ವ್ಯಕ್ತಿ ಹಾಗೂ ಆತನ ಕುಟುಂಬ, ಸಮಾಜ, ದೇಶದ ಮೇಲೆ ದುಷ್ಪರಿಣಾಮ ಬೀರುವುದನ್ನು ಶರೀಫ್ ಸೋದಾರಣವಾಗಿ ವಿವರಿಸಿದರೂ ವ್ಯಕ್ತಿಯನ್ನು ಅವುಗಳಿಂದ ಮುಕ್ತನಾಗಲು ಬಸವಾದಿ ಪ್ರಮಥರಂತೆ ಸಾಂಘಿಕ ಪ್ರಯತ್ನ ಮಾಡದಿರುವುದು ಕಂಡುಬರುತ್ತದೆ. ಆದಾಗ್ಯೂ ದುರ್ಗುಣಗಳಿಂದ ವ್ಯಕ್ತಿ ದೂರಿರಬೇಕೆಂಬ ಶರೀಫ್‌ರ ಕಳಕಳಿ ಮೆಚ್ಚುವಂಥಹದು.

ಇಲ್ಲಿಯವರೆಗೆ ಮತ, ರಾಜಕೀಯ ಹಾಗೂ ವ್ಯಕ್ತಿ ವಿಚಾರವಾಗಿ ಶರೀಫ್ ಪ್ರತಿಕ್ರಿಯೆ ಪರಿಶೀಲಿಸಿದ ಫಲಶೃತಿಯೆಂದರೆ, ಸಮಕಾಲೀನ ಮತಾಚರಣೆ ಹಾಗೂ ವ್ಯಕ್ತಿ ವಿಚಾರದಲ್ಲಿ ಶರೀಫ್ ತೋರಿದ ಆಸಕ್ತಿ ಮಾಡಿದ ಟೀಕೆ-ಟಿಪ್ಪಣೆಗಳು ರಾಜಕೀಯ ವಿಚಾರದಲ್ಲಿ ಕಂಡುಬರುವುದಿಲ್ಲ. ಸಿಪಾಯಿ ದಂಗೆಯ ಬಗ್ಗೆ ಮುನ್‌ಸೂಚನೆ ನೀಡಿದರೂ ಅದರ ಕಾರಣಗಳನ್ನಾಗಲಿ, ವಿಫಲತೆಯನ್ನಾಗಲಿ ಶರೀಫ್

ಗುರುತಿಸುವುದಿಲ್ಲ. ಸಿಪಾಯಿದಂಗೆ (೧೮೫೭)ಗೆ ಮೊದಲು ಕನ್ನಡ ಪ್ರದೇಶಗಳಲ್ಲಿ ಈಸ್ಟ್ ಇಂಡಿಯಾ ಕಂಪನಿ ಸರಕಾರದ ದುಷ್ಟ ಶಾಸನಗಳನ್ನು ವೀರತನದಿಂದ ಪ್ರತಿಭಟಿಸಿ ಅಮರರಾದ ಕಿತ್ತೂರ ಚನ್ನಮ್ಮ, ಅನಂತರ, ಸಿಪಾಯಿ ದಂಗೆ ಸರಿಸುಮಾರಿಗೆ ನಡೆಯುವ ನರಗುಂದ ಬಾಬಾಸಾಹೇಬ, ಮುಂಡರಗಿ ಭೀಮರಾಯ ಮುಂತಾದವರ ದಂಗೆಗಳು; ಆಂಗ್ಲ ಮಾಧ್ಯಮ ಬೋಧೆ, ಕಾನೂನಿನ ಆಡಳಿತ, ಸಾರಿಗೆ ಸಂಪರ್ಕ ನೀತಿ ಹಾಗೂ ವಾಯಿಸ್‌ರಾಯ್ ನೇತೃತ್ವದ ಕೇಂದ್ರ ಸರಕಾರದ ಆಡಳಿತ ಇವೇ ಮೊದಲಾದ ಬ್ರಿಟಿಶ್ ನೀತಿಯಿಂದಾಗಿ ಭಾರತೀಯರಲ್ಲಿ ಮೂಡಿದ ಭಾವೈಕ್ಯತೆ, ಅರಳಿದ ರಾಷ್ಟ್ರೀಯತೆ, ಭವಿಷ್ಯತ್ತಿನಲ್ಲಿ ಸ್ವಾತಂತ್ರ್ಯ ಸಮರ ಹೊಣೆ ಹೊರಲು ಸಿದ್ಧವಾಗುವ ರಾಷ್ಟ್ರೀಯ ಸಭೆಯ ಜನನ (೧೮೮೫) ಇತ್ಯಾದಿ ಹಿಂದುಸ್ಥಾನದ ರಾಜಕೀಯ ವಿದ್ಯಮಾನಗಳು ಶಿಷ್ಟ ಹಾಗೂ ಜಾನಪದ ಕವಿಗಳಿಗೆ ವಸ್ತುವಾದರೂ ಶರೀಫ್‌ರಿಗಾಗದಿರುವದು ಆಶ್ಚರ್ಯವೆನಿಸುತ್ತದೆ. ಬಹುಶಃ ಪರಮಾರ್ಥ ಪಥದಲ್ಲಿ ಮುನ್ನಡೆದಿರುವ ತಮಗೆ ರಾಜಕೀಯ ಹೊಲ್ಲವೆಂಬ ಕಾರಣಕ್ಕಾಗಿಯೋ ಇಲ್ಲವೆ ಬ್ರಿಟಿಶ್‌ರ ಪೋಲಿಸ್ ಹಾಗೂ ಸೈನ್ಯಬಲಕ್ಕಂಜಿಯೋ ಶರೀಫ್ ರಾಜಕೀಯ ವಿದ್ಯಮಾನಗಳ ಕುರಿತು ಪ್ರಖರವಾಗಿ ಪ್ರತಿಕ್ರಿಯಿಸಲು ಹಿಂಜರಿದಿರಬೇಕು. ಮತ ಹಾಗೂ ವ್ಯಕ್ತಿ ವಿಚಾರವಾಗಿ ಮಾಡಿದ ಶರೀಫ್ ವಸ್ತುನಿಷ್ಠ ಟೀಕೆ - ಟಿಪ್ಪಣಿಗಳು ಸುಧಾರಣೆಯ ದಿಸೆಯಲ್ಲಿ ಸಾಂಘಿಕ ಪ್ರಯತ್ನ ಮಾಡದಿರುವುದರಿಂದ ಅವು ಸಾಮಾಜಿಕ ವಿಮರ್ಶೆಯ ದಾಖಲೆಗಳಾಗಿ ಮಾತ್ರ ಉಳಿದುಬಿಡುತ್ತವೆ. ಇಷ್ಟಾದರೂ ಮತಗಳ ಬಗ್ಗೆ ಅವರಿಗಿರುವ ತಿಳವಳಿಕೆ, ಆದರಭಾವ ಹಾಗೂ ವ್ಯಕ್ತಿಯ ಇಹ - ಪರ ಸುಖದ ಬಗೆಗಿನ ಕಾಳಜಿ ಮೆಚ್ಚುವಂತಹದು.

ಅಧ್ಯಾಯ ೩

ತತ್ವ

ಲೌಕಿಕರಂತೆ ಸಂಸಾರಿಯಾಗಿದ್ದ ಶರೀಫ್ ತಂದೆ ತಾಯಿ, ಮಗಳು ಹಾಗೂ ಕೊನೆಗೆ ಮೋಹದ ಮಡದಿಯ ನಿಧನದಿಂದಾಗಿ ಪಾರಮಾರ್ಥಿಕದೆಡೆಗೆ ತಿರುಗುತ್ತಾರೆ. ಬಾಲ್ಯದಲ್ಲಿ ಸ್ಥಳೀಯ ಹಿರೇಮಠದ ಸಿದ್ಧರಾಮಯ್ಯ ಅವರಿಂದ ಶಿವಶರಣರ ಹಾಗೂ ಗೋವಿಂದಭಟ್ಟರಿಂದ ಅರಿತುಕೊಂಡ ವೇದೋಪನಿಷತ್ತುಗಳ ವಿಚಾರಗಳ ಕುರಿತು ಇದೀಗ ಗಂಭೀರವಾಗಿ ಆಲೋಚಿಸಲು ಪ್ರಾರಂಭಿಸುತ್ತಾರೆ. ಜೀವ, ಜಗತ್ತು, ದೇವರು ಇವೇ ಮೊದಲಾದ ಲೌಕಿಕ- ಪಾರಲೌಕಿಕ ಸಂಗತಿಗಳನ್ನು ತಮ್ಮ ಕಾವ್ಯದಲ್ಲಿ

ಅಭಿವ್ಯಕ್ತಿಗೊಳಿಸುವ ಮೂಲಕ ತತ್ವಜ್ಞಾನಿಯಾಗಿ ಹೊರಹೊಮ್ಮುತ್ತಾರೆ.

ಜೀವ-ಜಗತ್ತು-ದೇವರು:

ಈ ಮೊದಲೇ ಹೇಳಿದಂತೆ ಪಾರಮಾರ್ಥಿಕ ಪಥದತ್ತ ಸಾಗುವ ಶರೀಫ್ ಜೀವ-ಜಗತ್ತು-ದೇವರು ಕುರಿತು ಆಳವಾಗಿ ಆಲೋಚಿಸಿ ಅವುಗಳ ನಡುವಿನ ಸಂಬಂಧ ಕಂಡುಕೊಂಡಿದ್ದಾರೆ.

ಜೀವ : ಜಗತ್ತಿನ ಸೃಷ್ಟಿಗೆ ಬ್ರಹ್ಮ ಮೂಲವಾದರೆ ಜೀವಸೃಷ್ಟಿಗೆ ಪಂಚಭೂತಗಳು ಹಾಗೂ ಮನುಷ್ಯನ ಇಂದ್ರಿಯ ವಿಕಾರಗಳು ಕಾರಣ ಎಂಬುದು ಶರೀಫ್ ಸಿದ್ಧಾಂತ. ಇದನ್ನು ತಮ್ಮ 'ಚಂದದಿ ಕೇಳಿದರ ವಿಸ್ತಾರ, ವೇದಾಂತದ ಸಾರ' (೨೭೯:೨೭೦) ಲಾವಣಿಯಲ್ಲಿ ವಿಶದೀಕರಿಸಿದ್ದಾರೆ.

"ಬರಿಯ ತೇಜದ ಅಂಶಕ ನೇತ್ರ
ಜಲಕೆ ಜಿವ್ಹೆ ಪವಿತ್ರ
ಪೃಥ್ವಿ ಕೂಡಲು ಪ್ರಾಣ ವಿಚಿತ್ರ
ಗಗನಕೂಡಲಾಯಿತು ಶ್ರೋತ್ರ
ಪರ್ವನಂಶವೇ ಗಾತ್ರ
ಜ್ಞಾನೇಂದ್ರಿಯ ಕೇಳು ಸರ್ವತ್ರ
ವಾಯ ಬೆರೆತು ಪ್ರಾಣಿಯ ಸೂತ್ರ
ತೇಜಕಪದಯತ್ರ
ಗಗನಕೂಡಲ್ಕೆ ವಾಕಸೂತ್ರ
ಪೃಥ್ವಿಯೊಳು ಜಲಕೂಡಿ ಲಿಂಗಮಾತ್ರ
ಬರಿಯ ಪೃಥ್ವಿಗೆ ಗುದತಂತ್ರ
ಕರ್ಮ ಇಂದ್ರಿಯಗಳ ಚರಿತ್ರೆ
ಮುಂದೆ ಕೇಳು ವಿಷಯಗಳಂಕುರ"

ಅನಂತರ-

ಕೆಲವು ದಿವಸ ಗಗನದೊಳಿದ್ದು
ಜಲದೊಳಗೆಬಿದ್ದು

ಪಾನಮಾತ್ರದಿ ಪಿತನ ದೇಹದಿ ಬಂದು
ಮೂರು ತಿಂಗಳುದರದಿ ನಿಂದು
ರತಿಕೂಡಲು ಬಿಂದು
ಜನನಿಯ ಗರ್ಭಕ್ಕೆ ತಂದು
ನವತಿಂಗಳು ಬಹು ವಿಧದಿ ನೊಂದು
ಜನಿಸಿ ಬರಲಂದು
ಪೂರ್ವಜನ್ಮದ ಸ್ಮರಣೆಯ ಮರೆದು
ಶಿಶುತನದಲಿ ತಿಳದು ಬೆಂದು
ಪ್ರಾಯಕಾಲಕ ಕುದಿದು
ವಿಷಯದಾಸೆಯಲಿ ಮರುಗಿ ಬೆಂದು
ವೃದ್ಧನಾಗಿ ಬಿಡತ್ಯೆತಿ ಘೋರ''

ಹೀಗೆ ಪಂಚಭೂತ ಹಾಗೂ ಇಂದ್ರಿಯ ವಿಕಾರದಿಂದ ಜನಿಸುವ ಜೀವ, ವಿಷಯ ಸುಖದಲ್ಲಿ ವ್ಯರ್ಥವಾಗಿ ಕಾಲಕಳೆದು ವೃದ್ಧನಾಗಿ ಬಿಡುತ್ತದೆಂದು ಶರೀಫ್ ಅರುಹುತ್ತ ಅದು ಸಾಗಬೇಕಾದ ಮಾರ್ಗ ಸೂಚಿಸುತ್ತಾರೆ.

'' ಒಂದೇ ಮನದಿ ಗುರುಮತವಿರದು
ಎರಡು ಬುದ್ಧಿಯ ಮರೆದು
ಮೂರು ತಾಪವನೆ[೧] ಮೊದಲು ಮುರಿದು
ಚತುರ್ವಿಧ್ನ ಪುರುಷಾರ್ಥ[೨]ವನೆ ಜರೆದು
ಪಂಚಕ್ಲೇಷ[೩] ಕೊರ್ಲ್ರೆದು
ಪಂಚವಿಷಯಗಳ[೪]ನ್ನೆಲ್ಲ ತರಿದು
ಷಡ್ವಿಧ ವೈತಾರಿಗಳ[೫] ಮುರಿದು

೧. ಅಧ್ಯಾತ್ಮಿಕ, ಅಧಿ ಭೌತಿಕ ಹಾಗೂ ಆಧಿದೈವಿಕ
೨. ಧರ್ಮ, ಅರ್ಥ, ಕಾಮ ಹಾಗೂ ಮೋಕ್ಷ
೩. ಅವಿದ್ಯ, ಅಸ್ಮಿತೆ, ರಾಗ, ದ್ವೇಷ ಹಾಗೂ ಅಭಿನಿವೇಶ
೪. ಶಬ್ದ, ಸ್ಪರ್ಶ, ರೂಪ, ರಸ ಹಾಗೂ ಗಂಧ
೫. ಕಾಮ, ಕ್ರೋಧ, ಲೋಭ, ಮೋಹ, ಮದ ಹಾಗೂ ಮತ್ಸರಯಯ

ಷಡ್‌ಭ್ರಮೆಗಳನ್ನು[6] ಉರಿದು
ಸಪ್ತವ್ಯಸನಗಳೆಲ್ಲ[7] ಸರಿದು
ಅಷ್ಟಪಾಶಗಳ[8] ಪರಿಹರಿದು
ಅಷ್ಟಮದಗಳನ್ನರಿದು[9]
ನವವಿಧಭಕ್ತಿ[10]ಯಲ್ಲಿ ಮೆರೆದು
ರಾಜಯೊಗಿಯೆನಿಸುವ ಶೂರ .... "

ಈ ಪರಿ ಸಾಧನೆಯಲ್ಲಿ ಸತ್ಸಂಗ ಹಾಗೂ ಗುರು ಮಾರ್ಗದರ್ಶನದ ಅವಶ್ಯಕತೆ ಅರುಹಿ, ಅದರಂತೆ ನಡೆದರೆ ಜೀವಿಯು ನಿಸ್ಸಂಶಯವಾಗಿ ನಿತ್ಯಸುಖ (ಮುಕ್ತಿ) ಹೊಂದುವನೆಂದು ಶರೀಫ್ ವಿವರಿಸುವ ಮೂಲಕ ವೇದಾಂತಸಾರವನ್ನು ಸರಳಗನ್ನಡದಲ್ಲಿ ತಿಳಿಸಿಕೊಟ್ಟು ಮುಮುಕ್ಷುಗಳ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

ಜಗತ್ತು :

ಜೀವದ ಉಗಮದಂತೆ ಜಗತ್ತಿನ ಹುಟ್ಟಿನ ಬಗೆಗೆ ಶರೀಫ್ ವ್ಯಕ್ತಪಡಿಸಿದ ವಿಚಾರಗಳಿಗೆ ಉಪನಿಷತ್ತುಗಳು, ಮೂಲವಾಗಿರುವುದನ್ನು 'ಚಂದದಿ ಕೇಳಿದರ ವಿಸ್ತಾರ ವೇದಾಂತದ ಸಾರ' (೨೬೯:೨೬೧) ಲಾವಣಿಯಲ್ಲಿ ಕಾಣಬಹುದು.

"......ಆದಿ ಬ್ರಹ್ಮನಿಂದಲಿ ಮುನ್ನ
ಪ್ರಕೃತಿಯು ಉತ್ಪನ್ನ
ಅದರಿಂದ ಅಹಂಕಾರದ ಜನನ
ಅಹಂಕಾರದಿ ಹುಟ್ಟಿತು ಗಗನ

೬. ಜಾತಿ, ವರ್ಣ, ಕುಲ, ಗೋತ್ರ, ಆಶ್ರಮ ಹಾಗೂ ನಾಮ
೭. ಅತನು ಮನ, ಧನ, ರಾಜ್ಯ ಉತ್ಸಾಹ, ಸೇವಕ ಹಾಗೂ ಸ್ತ್ರೀ
೮. ಬೇಟೆ, ಜೂಜು, ಹಗಲು ನಿದ್ದೆ, ಪರನಿಂದೆ, ಸ್ತ್ರೀ ಲಾಲಸೆ, ಮದ್ಯಪಾನ, ನೃತ್ಯ-ಗಾನ-ವಾದನಾಭಿರುಚಿ
೯. ತೃಷೆ, ಶಂಕೆ, ಭೀತಿ, ಲಜ್ಜೆ, ಜಗುಪ್ಸೆ, ಕುಲ, ಶೀಲ ಹಾಗೂ ಗರ್ವ
೯. ಕುಲ, ಛಲ (ಬಲ) ಧನ, ರೂಪ, ಯೌವನ, ವಿದ್ಯೆ, ರಾಜ್ಯ ಹಾಗೂ ತಪ
೧೦. ಶ್ರವಣ, ಕೀರ್ತನ, ಸ್ಮರಣ, ಅರ್ಚನ, ಪಾದಸೇವನೆ, ದಾಸ್ಯ, ಸಖ್ಯ ವಾತ್ಸಲ್ಯ ಹಾಗೂ ನಿವೇದನೆ.

ಗಗನದಿಂದ ಪವನ
ಪವನದಿಂದ ಅಗ್ನಿಯು ಆಯಿತಿನ್ನ
ಅಗ್ನಿ ಜಲ ಕೇಳಿನ್ನ
ಪೃಥ್ವಿಯ ರಚನ..."

ಆಮೇಲೆ -

".....ಅದರೊಳು ಔಷಧಗಳಾದವಿನ್ನ
ಔಷಧದಿಂದ ಹುಟ್ಟಿತು ಅನ್ನ
ಅನ್ನದಿಂದ ವೀರ್ಯ ಉತ್ಪನ್ನ
ವೀರ್ಯದಿಂದ ಕ್ರಿಮಿ-ಕೀಟಕ ಜನನ
ಈ ಪರಿ ಆಯಿತೋ ಚರಾಚರಾ-

ಪ್ರಕೃತಿಯಿಂದ ಗಗನ, ಪವನ, ಅಗ್ನಿ, ಜಲ ಹಾಗೂ ಪೃಥ್ವಿ - ಪಂಚತತ್ವಗಳು ಹಾಗೂ ಪಂಚತತ್ವಗಳಲ್ಲಿ ಒಂದಾದ ಪೃಥ್ವಿಯಿಂದ ಔಷಧಗಳು, ಅವುಗಳಿಂದ ಅನ್ನ, ಅನ್ನದಿಂದ ವೀರ್ಯ ಹಾಗೂ ವೀರ್ಯದಿಂದ ಸಕಲ ಚರಾಚರ ಜೀವರಾಶಿ ಹುಟ್ಟಿಕೊಳ್ಳಲು ಕಾರಣವಾಯಿತೆಂದು ಶರೀಫ್ ವಿವರಿಸುತ್ತಾರೆ.

ದೇವರು:

ದೇವರ ವಿಷಯವಾಗಿ ಶರೀಫ್ ದ್ವೈತ ಹಾಗೂ ಅದ್ವೈತ ತತ್ವಗಳಿಂದ ಪ್ರಭಾವಿತರಾಗಿರುವುದರಿಂದ ದೇವರನ್ನು ಸಗುಣ ಹಾಗೂ ನಿರ್ಗುಣ ರೂಪದಲ್ಲಿ ಉಪಾಸಿಸಲು ಸೂಚಿಸುತ್ತಾರೆ.

ಪಾರಮಾರ್ಥಿಕ ಪಥದ ಪ್ರಥಮ ಹಂತದಲ್ಲಿ ಭಕ್ತ ದೇವರನ್ನು ಸಗುಣ ರೂಪದಲ್ಲಿ ಉಪಾಸಿಸುತ್ತಾನೆ. ಈ ಮಾತಿಗೆ ಶರೀಫ್ ಹೊರತಿಲ್ಲವೆನ್ನುವುದಕ್ಕೆ ನಾಡಿನುದ್ದಕ್ಕೂ ಉಪಲಬದ್ಧವಿರುವ ಪುಣ್ಯ ಕ್ಷೇತ್ರಗಳನ್ನು ಸಂದರ್ಶಿಸಿ ಆಯಾ ದೇವರ ವಿಶೇಷಗಳನ್ನು ಭಕ್ತಿ-ಭಾವದಿಂದ ಬಣ್ಣಿಸಿ ಕೃತಾರ್ಥರಾಗಿದ್ದಾರೆ.

ಉದಾಹರಣೆಗೆ, 'ಪಾಲಿಸಯ್ಯ ಪಾರ್ವತಿ ಪತಿ' (೧:೩) ಹಾಗೂ 'ಮೈಲಾರ ಮಹದೇವ ಕೈಲಾಸ ಪತಿಯೆ' (೬:೮) 'ಗೀತೆಗಳಲ್ಲಿ ಪರಮೇಶ್ವರ, 'ದಶಾವತಾರಕಾ ಕೃಷ್ಣ'(೮:೭) ಹಾಗೂ 'ಶ್ರೀ ಕೃಷ್ಣದಂಡಕ' (೨೭೧:೨೪೧) ಕೃತಿಗಳಲ್ಲಿ ವಿಷ್ಣು ಸ್ತುತಿ ಗೈದಿರುವುದು ದೇವ-ಭಕ್ತರನಡುವಿನ ದ್ವೈತಭಾವ ಅರುಹುತ್ತದೆ.

ಪಾರಮಾರ್ಥಿಕ ಪಥದ ಪ್ರಥಮ ಹಂತದಲ್ಲಿ ಭಕ್ತ ಹಾಗೂ ದೇವರ ಮಧ್ಯ ದ್ವೈತಭಾವವಿದ್ದರೂ ಗುರುಸೇವೆ ಹಾಗೂ ಗುರುಕೃಪೆಯಿಂದಾಗಿ ಕಾಲಾಂತರ ಭಕ್ತ-ದೇವರಲ್ಲಿಯ ದ್ವೈತಭಾವ ಅಳಿದು ಅದ್ವೈತಭಾವ ಮೂಡುತ್ತದೆ. ಹೀಗಾದಾಗ ಭಕ್ತ ದೇವರನ್ನು ಬಾಹ್ಯಾದಲ್ಲರಸದೆಅಂತರಂಗದಲ್ಲಿ ಕಂಡುಕೊಳ್ಳುತ್ತಾನೆ.

''ಗುಡಿಯ ನೋಡಿರಣ್ಣ ದೇಹದ
ಗುಡಿಯನೋಡಿರಣ್ಣ
ಗುಡಿಯನೋಡಿರಿದು
ಪೊಡವಿಗೆಒಡೆಯನು
ಅಡಗಿಕೊಂಡು ಕಡು ಬೆಡಗಿನೊಳಿರುತಿಹ......'' (೭೧:೫೭)

ಪ್ರತಿಯೊಬ್ಬರ ಅಂತರಂಗದಲ್ಲಿರುವ ದೇವರನ್ನು ಕಾಣಲು -

''ಆರು ಮೂರು ಕಟ್ಟಿ ಮೇಲಕೆ
ಏರಿದವನು ಘಟ್ಟಿ
ಭೇರಿ ಕಾಳಿ ಶಂಖ
ಬಾರಿಸುನಾದದಿ
ಮೀರಿದಾನಂದ ತೋರಿ ಹೊಳೆಯುತಿಹ...'' (೭೧:೫೭)

ಅರಿಷಡ್ವರಿ ಹಾಗೂ ತ್ರಿಗುಣಗಳನ್ನು ಮೆಟ್ಟಿ ಗುರು-ಮಾರ್ಗದರ್ಶನದಲ್ಲಿ ಯೋಗ ಸಾಧನೆಯ ಮೂಲ

ಪ್ರತಿಯೊಬ್ಬರು ತಮ್ಮ ಅಂತರಂಗದಲ್ಲಿ ಕುಳಿತಿರುವ ದೇವರನ್ನು ಕಾಣುವರು. ಹೀಗಾದಾಗ ಭಕ್ತ-ದೇವರಲ್ಲಿ ಭಿನ್ನತೆಯಳಿದು ಅದ್ವೈತಭಾವ ಮೂಡಿ ಸ್ವಯಂ ದೇವರಾಗುತ್ತಾನೆ. ಇದನ್ನೇ 'ಅಹಂ ಬ್ರಹ್ಮಾಸ್ಮಿ' ಎಂದು ಅದ್ವೈತಿಗಳು ಬಣ್ಣಿಸಿದರೆ, 'ಲಿಂಗಾಂಗ ಸಾಮರಸ್ಯ'ವೆಂದು ವೀರಶೈವರು ವರ್ಣಿಸುತ್ತಾರೆ.

ಶರೀಫ್ ಆರಂಭದ ಘಟ್ಟದಲ್ಲಿ ದೇವರನ್ನು ಬಾಹ್ಯದಲ್ಲಿ, ಅನಂತರ, ದ್ವಿತೀಯ ಘಟ್ಟದಲ್ಲಿ ಅಂತರಂಗದಲ್ಲಿ ಕಂಡು ಕೃತಾರ್ಥರಾದರೂ ಅತನ ಸ್ವರೂಪ ಊಹೆಗೆ ಇಲ್ಲವೆ ವರ್ಣನೆಗೆ ನಿಲುಕದೆಂದು ಹೇಳುತ್ತಾರೆ.

''ಅದು ನೋಡು ಅದು ನೋಡು
ಬ್ರಹ್ಮಾನಂದದಿ ಮುಣಿಮುಣಿಗ್ಯಾಡ್ವುದು ನೋಡು
ನೋಡೆನೆಂದರೆ ಕಾಣಿಸುವುದಿಲ್ಲ
ನೋಡಿದಾಕ್ಷಣಬಿಡುವುದಿಲ್ಲ
ಹರಿಯೂ ಅಲ್ಲ ಹರನೂ ತಾನಲ್ಲ
ಧರೆಯೊಳು ಶಿಶುನಾಳಧೀಶನೇ ಬಲ್ಲ.....''(೪೯:೫೧)

ದೇವರು ಅಥವಾ ಬ್ರಹ್ಮನು ಅಥವಾ ಪರಾತ್ಪರ ಸತ್ಯವು ನೋಡಲು ಕಾಣುವುದಿಲ್ಲ ಹಾಗೂ ಕಾಣದಿರುವುದೂ ಇಲ್ಲ. ಇಂಥ ಕಾಣದಿರುವ ಹಾಗೂ ಕಾಣಸಿಗುವ ದೇವರು ಹರಿಯೂ ಅಲ್ಲ, ಹರನೂ ಅಲ್ಲವೆಂದು ಶರೀಫ್ ವಿವರಿಸುತ್ತ ಆತನ ಸ್ವರೂಪವನ್ನು ಭುವಿಯಲ್ಲಿ 'ಶಿಶುನಾಳಧೀಶ'ನೇ ಬಲ್ಲ ಎಂಬ ನಿರ್ಣಯಕ್ಕೆ ಬರುತ್ತಾರೆ. ಶರೀಫ್ ನಿರ್ಣಯಕ್ಕೆ ಎರಡು ಅರ್ಥಗಳನ್ನು ಕಲ್ಪಿಸಬಹುದು: ೧) 'ಶಿಶುನಾಳಧೀಶ' ಎಂಬುದು ಸ್ವತ: ಶರೀಫರಿಗೆ ಅನ್ವಯಿಸಿ 'ತಾವು ಮಾತ್ರ ದೇವರ ಸ್ವರೂಪ ಬಲ್ಲೆವು ಎಂಬುದನ್ನು ಸೂಚಿಸುತ್ತದೆ. (೨) 'ಶಿಶುನಾಳಧೀಶ' ಎಂಬುದು ದೇವರಿಗೆ ಅನ್ವಯಿಸಿ 'ದೇವರ ಸ್ವರೂಪ ದೇವರೇ ಬಲ್ಲರು' ಎಂಬುದನ್ನು ಸೂಚಿಸುತ್ತದೆ. ಹೀಗೆ ಶಿಶುನಾಳಧೀಶ'

(ಆತ ಸಂತನಿರಬಹುದು ಇಲ್ಲವೇ ದೇವರಿರಬಹುದು) ನನ್ನುಳಿದು ಇನ್ನಾರು ದೇವರ ಸ್ವರೂಪವನ್ನರಿಯಲಾರರು. ದೇವರು ತನ್ನನ್ನು ತಾನು ಅರಿಯುವದರಲ್ಲಿ ಆಶ್ಚರ್ಯವಿಲ್ಲ. ಆದರೆ ಸಂತನು ದೇವರನ್ನರಿಯುವದು ನಿಜವಾಗಿಯೂ ಆಶ್ಚರ್ಯಕರವು. ಈ ರೀತಿ ಶರೀಫ್ ಅಹಂಕಾರಕ್ಕೆ ಒಳಗಾಗದೆ, 'ಶಿಶುನಾಳಧೀಶ' ಪದವನ್ನು ಶ್ಲೇಷೆಯಿಂದ ಬಳಸಿ ದೇವರು ತನ್ನನ್ನು ಅರಿವನಷ್ಟೇ ಅಲ್ಲದೆ, ಸಂತರಾದ ತಾವು ಕೂಡ ಅತನನ್ನು ಅರಿಯಲು ಸಾಧ್ಯವಾಯಿತೆಂದು ಅರುಹುತ್ತಾರೆ.

ಈ ಪ್ರಕಾರ ದೇವರಿಂದ ಜಗತ್ತು, ಜಗತ್ತಿನಿಂದ ಜೀವ ಹಾಗೂ ಭುವಿಯಲ್ಲಿ ಜೀವಿಯು ಎಸಗುವ ಕರ್ಮದ ಆಧಾರದ ಮೇಲೆ ಆತನ ಭವಿತವ್ಯ ನಿರ್ಧಾರ ದೇವರ ಅಧೀನದಲ್ಲಿರುವುದೆಂದು ಶರೀಫ್ ವಿವರಿಸುವ ಮೂಲಕ ಜೀವ ಜಗತ್ತು ದೇವರ ಮಧ್ಯ ಅವಿನಾಭಾವ ಸಂಬಂಧ ಕಲ್ಪಿಸಿದ್ದಾರೆ.

ಹೊನ್ನು-ಹೆಣ್ಣು-ಮಣ್ಣು:

ಆಧ್ಯಾತ್ಮಿಗಳು ಹೊನ್ನು-ಹೆಣ್ಣು-ಮಣ್ಣುಗಳನ್ನು ಮಾಯೆಯೆಂದು ಹಾಗೂ ಅವುಗಳನ್ನು ದೂರಿಕರಿಸಿದರೆ ಮಾತ್ರ ಆತ್ಮೋನ್ನತಿ ಸಾಧ್ಯವೆಂದು ಸಾರಿದರು. ಪ್ರತಿಯಾಗಿ ಬಸವಾದಿ ಪ್ರಮಥರು ಹೊನ್ನು -ಹೆಣ್ಣು-ಮಣ್ಣುಗಳು ಮಾಯೆಯಾಗಿರದೆ ಅವುಗಳನ್ನು ಹೊಂದಬೇಕೆಂಬ ಆಸೆಯೇ ಮಾಯೆಯೆಂದು ಸಾರಿದರು. ಈ ಎರಡು ಅಭಿಪ್ರಾಯಗಳನ್ನು ಸಮನ್ವಯಿಸಿಕೊಂಡ ಶರೀಫ್ ಹೊನ್ನು -ಹೆಣ್ಣು-ಮಣ್ಣುಗಳ ಬಗ್ಗೆ ಎಚ್ಚರಿಕೆಯಿಂದಿರುವಂತೆ ಮುಮುಕ್ಷುಗಳಿಗೆ ಕರೆಕೊಟ್ಟಿದ್ದಾರೆ.

ಹೊನ್ನು: ಹೊನ್ನು ಲೌಕಿಕ ಬದುಕಿಗೆ ಅವಶ್ಯವಾದರೂ ಅದು ಅಂತಿಮವಲ್ಲವೆಂದು ಸಾರುತ್ತ ಅದರ ದುಷ್ಪರಿಣಾಮಗಳನ್ನು ಶರೀಫ್ ವಿವರಿಸುತ್ತಾರೆ.

''ದುಡ್ಡು ಕೆಟ್ಟದ್ದು ಮನುಜ ಈ ಲೋಕದಿ
ದುಡ್ಡು ಕೆಟ್ಟದ್ದು ನೋಡೆಲೊ
ಹೆಡ್ಡ ಮೂಢಾತ್ಮನೆ ದೊಡ್ಡ ದೊಡ್ಡವರನು
ಮಡ್ಡ ಇಳಿಸುತ್ತಲಿ ಅಡ್ಡ ಬೀಳಿಸುವದು......''

(೨೩೫:೨೦೩)

ಹಾಗೆಯೇ ದುಡ್ಡು ಹರಪೂಜೆಯಿಂದ ವಿಮುಖಗೊಳಿಸುವ, ಗುರು-ಶಿಷ್ಯರ ಸಂಬಂಧ ಕೆಡಿಸುವ ಸಾಧ್ಯತೆಯಿರುವುದರಿಂದ ದುಡ್ಡಿನ ಮೋಹಕ್ಕೊಳಗಾಗದಿರಲು ಶರೀಫ್ ಕರೆಕೊಟ್ಟಿದ್ದಾರೆ.

ಹೆಣ್ಣು : ಪಾರಮಾರ್ಥಿಕ ಪಥಕ್ಕೆ ಅಡ್ಡಿಯಾಗುವ ವಿಷಯ ಸುಖ ಹಾಗೂ ಅದಕ್ಕೆ ಕಾರಣವಾದ ಹೆಣ್ಣಿನಿಂದ ದೇವ-ದಾನವ-ಮಾನವರು ಅನುಭವಿಸದ ಕಷ್ಟ-ಕೋಟಲೆಗಳನ್ನು ಸಚಿತ್ರವಾಗಿ ಚಿತ್ರಿಸುವ ಮೂಲಕ ಮುಮುಕ್ಷಗಳನ್ನು ಶರೀಫ್ ಎಚ್ಚರಿಸಿದ್ದಾರೆ.

''ಸಣ್ಣ ಹುಡುಗಿಯೇ ನಿನ್ನ ಬಣ್ಣ ಸಲಳವೆ ಮುನ್ನ
ಹೆಣೆದ ಜಾಲಕೆ ನಿನ್ನ ಬೆನ್ನ ಹತ್ತಿ ಮುನಿ ಜನ
ನುಣ್ಣಗಸುರ ದಾನವರು ಮನುಜರು
ಚೆನ್ನ ಚೆಲ್ವಿಕೆಗೆ ಮನಸೋತು ಅರಣ್ಯದಿ
ರನ್ನ ಸಿದ್ಧ ಋಷಿಗಳನು ಕೆಣಕಿ ಬಲು
ಕಣ್ಣು ಸೊನ್ನಿ ಮಾಡಿ ಕಾಮ ಪಾಶದಿ
ಮಣ್ಣುಗೂಡಿಸಿದೇ ಬಿಡು ಮಾಯೆ ಹೌದು ಬಿಡು
ಘನ ಘಾತಕ ಕಂಡ ನಿನ್ನೊಳು ... (೧೭೩ : ೧೫೬ : ೧೫೭)

ದಾಕ್ಷಾಯಿಣಿಯಿಂದ ದಕ್ಷಬ್ರಹ್ಮ, ಸುಗ್ರೀವನ ಮಡದಿಯಿ ವಾಲಿ, ಸೀತೆಯಿಂದ ರಾವಣ, ದ್ರೌಪದಿಯಿಂದಾಗಿ ದುರ್ಯೋಧ ಇವೇ ಮೊದಲಾದ ಪೌರಾಣಿಕ ದೃಷ್ಟಾಂತಗಳ ಮೂಲಕ ಹೆ ಅವಮಾನಿಸೆ ಇಲ್ಲವೆ ಕಾಮಿಸಿ ಹಾಳಾದುದನ್ನು ವಿವರಿಸಿ ಹೆಣ್ಣನಿ ದೂರವಿರಲು ಶರೀಫ್ ಕರೆಕೊಡುತ್ತಾರೆ.

ಮಣ್ಣು : ಹೆಣ್ಣಿನಂತೆ ಮಣ್ಣಿಗಾಗಿ ಆಸೆಪಟ್ಟು ಕೌರವ ಹಾಳಾದುದನ್ನು ಶರೀಫ್ 'ಚಾರೋ ಯಾರೋ ಅಲಿ ಪಾದಕ್ಕೆ (೪೧೩:೪೦೫) ರಿವಾಯತ್ ಪದದಲ್ಲಿ ವಿವರಿಸಿ ಎಚ್ಚರಿಸಿದ್ದಾರೆ.

ಹೊನ್ನು-ಹೆಣ್ಣು-ಮಣ್ಣುಗಳಿಂದಾದ ಅನಾಹುತಗಳ ಸೋದಾಹರಣವಾಗಿ ವಿವರಿಸಿ ಅವುಗಳಿಂದ ದೂರವಿರುವಂತೆ ಕರೆಕೊ ಶರೀಫ್ ಇನ್ನೊಂದೆಡೆಗೆ ಅವು ಶತ್ರುವಾಗಿರದೆ ಗುರು ಕರುಣಿ ಮೂರು ಕಣ್ಣುಗಳೆಂದು ವಿವರಿಸುವುದು ಗಮನಾರ್ಹವಾಗಿದೆ.

"......ಶತ್ರುವಲ್ಲವು ಹೊನ್ನು-ಹೆಣ್ಣು-ಮಣ್ಣು
ತಿಳಿದರೆ ಅವು ಮೂರು ಗುರುಕೊಟ್ಟ ಕಣ್ಣು
ಬಿಟ್ಟು ನೋಡೆಲೊ ತಮ್ಮ ಕಣ್ಣು
ಶಿಶುನಾಳಧೀಶನ ನೋಡೆಲೋ ಚನ್ನು....." (೨೩೪:೨೦೨)

ಸಂಸಾರ-ಸದ್ಗತಿ:

ಶರಣ ಮಾರ್ಗಾವಲಂಬಿಯಾದ ಶರೀಫ್ ಮದುವೆಯ ಸಂಸಾರವಂದಿಗರಾದರು. ತಂದೆ-ತಾಯಿ, ಮಗಳು ಕೊನೆಗೆ ಮಡದಿ ಮರಣದಿಂದಾಗಿ "......ಸ್ಥಿರವಲ್ಲ ಈ ಸಂಸಾರ...." (೨೩೫:೨೦ ಎಂಬುದನ್ನು ಅರಿತುಕೊಂಡು ಮರಣ ಗೆಲಿದು ಮಹದೇವನ ಒಂದಾಗುವುದಕ್ಕೆ ಕರೆಕೊಟ್ಟರು.

"....ಸಂಸಾರದಿಂದ ಸದ್ಗತಿ ಹೊಂದಿ
ಹವಣವರಿತು ಮಾಯೆಯ ಜಯಿಸಿ
ಮರಣ ಗೆಲಿದವನೇ ಶಿವಯೋಗಿ..." (೮೭:೮೭)

ಹುಟ್ಟು-ಸಾವು:

ಹುಟ್ಟಿದವನು ಸಾಯುವುದು ಸೃಷ್ಟಿ ನಿಯಮ. ಅರ್ಥಾತ್ ಶರೀರ ಅಸ್ಥಿರವಾದುದು. ಈ ಅಸ್ಥಿರವಾದ ಶರೀರದ ಸದುಪಯೋಗ ಪಡಿಸಿಕೊಳ್ಳಲು ಶರೀಫ್ ಕರೆಕೊಡುತ್ತಾರೆ.

"ಹೋಗುತಿಹುದು ಕಾಯ ವ್ಯರ್ಥ
ಇದರ ಲಾಘವ ತಿಳಿದವ ಯೋಗಿ ಸಮರ್ಥ
ಇನ್ನಾರ ತಿಳಕಂಡ್ಯಾ ತಮ್ಮ ನುಡಿ
ಓಂ ನಮಃ ಶಿವಯೆಂಬೋ ಮಂತ್ರದ ಮರ್ಮ...."
(೧೧೭:೧೯೨)

ಕಾಲನ ಕರೆ ಬರುವ ಮೊದಲು ಮನಸ್ಸನ್ನು ಹಿಡಿತದಲ್ಲಿಟ್ಟುಕೊಂಡು ಷಡಕ್ಷರಿ ಮಂತ್ರ (ಓಂ ನಮಃ ಶಿವಾಯ)ದ ಸಹಾಯದಿಂದ ಜವನಬಾಧೆ ಗೆದ್ದು ಮುಕ್ತಿ ಹೊಂದಲು ಶರೀಫ್ ಕರೆಕೊಡುತ್ತಾರೆ.

ಜೀವನ ಮೌಲ್ಯಗಳು:

ಶರೀಫ್ ಆಧ್ಯಾತ್ಮಿಗಳಾಗಿದ್ದರೂ ಸಮಾಜದ ವಿವಿಧ ಮತ-ಪಂಗಡಗಳ ವಿಚಾರ ಪ್ರಣಾಲಿ, ಆಚಾರ ಅಸಂಗತಗಳನ್ನು ಬದುಕಿನ ಹಿನ್ನೆಲೆಯಲ್ಲಿ ಸಮೀಕ್ಷಿಸಿ ಜೀವನ ಮೌಲ್ಯಗಳನ್ನು ತಮ್ಮ ಕಾವ್ಯದಲ್ಲಿ ಹರಳುಗಟ್ಟಿಸಿದ್ದು ಅವು ಈಗಲೂ ಸುಸಂಗತವಾಗಿರುವುದೊಂದು ವಿಶೇಷ.

ಸಮದರ್ಶಿತ್ವ : ಮುಸ್ಲಿಂ ಮೂಲದವರಾದ ಶರೀಫ್ ಇಸ್ಲಾಮ್ ತತ್ವಗಳನ್ನು ತಿಳಿದುಕೊಳ್ಳುವುದಲ್ಲದೆ ನೆರೆಯ ವೀರಶೈವ ಹಾಗೂ ವೈದಿಕ

ಧರ್ಮದ ತತ್ವಗಳನ್ನು ತಿಳಿದುಕೊಂಡು ಧಾರ್ಮಿಕ ವಿಶಾಲ ಮನೋಭಾವ ಬೆಳಸಿಕೊಳ್ಳುವುದಲ್ಲದೆ ಅವುಗಳ ಬೋಧೆ ಒಂದೇಯಾಗಿರುವದನ್ನು ಪ್ರತಿಪಾದಿಸುವ ಮೂಲಕ ಹಿಂದು-ಮುಸ್ಲಿಮ್ ಮತೀಯ ಸಾಮರಸ್ಯಕೆಳಸಿದ್ದಾರೆ.

''ಬೋಧ ಒಂದೇ
ಬ್ರಹ್ಮನಾದ ಒಂದೇ
ಸಾಧನಮಾಡುವ ಹಾದಿ ಒಂದೇ
ಆದಿಪದ ಒಂದೇ...''(೫೨:೪೭)

ಹಿಂದು-ಮುಸ್ಲಿಮ್ ಧಾರ್ಮಿಕ ತತ್ವಗಳನ್ನು ಸಮೀಕರಿಸಿ ಸಮದರ್ಶಿತ್ವ ಪ್ರಕಟಿಸುವ ಶರೀಫ್ ಸಮದರ್ಶಿತ್ವಕ್ಕೆ ಸೋಲೆನಿಸಿದ ಕುಲಬೇಧಗಳನ್ನು ಖಂಡಿಸಲು ಮರೆತಿಲ್ಲ.

''ತೊಗಲು ಮೊಲೆಯ ಹಾಲು ಕುಡಿದು ದೊಡ್ಡವರಾಗಿ
ಶೀಲಮಾಡತಿರಿ ನಾಡ್ಡೆಲ್ಲ
ನಾ ಆದರೇನು ನೀ ಆದರೇನು
ಅರಸ ಪ್ರಧಾನಿ ತೊಗಲ:....''(೨೮೧:೨೭೬)

ಹುಟ್ಟುವ ಪ್ರತಿಯೊಬ್ಬನೂ ತೊಗಲಮೊಲೆ (ತಾಯಿಯ ಮೊಲೆ) ಹಾಲು ಕುಡಿದು ದೊಡ್ಡವರಾಗುವ ಕಾರಣ ತರ-ತಮಭಾವ ಪ್ರಕಟಿಸುದಕ್ಕೆ ಶರೀಫ್ ಅಸಮ್ಮತಿ ವ್ಯಕ್ತಪಡಿಸುವುದು ಸರ್ವ ಕುಲದವರನ್ನು ಸಮಭಾವದಿಂದಕಾಣಬೇಕೆಂಬುದನ್ನು ಸೂಚಿಸುತ್ತದೆ.

ಸಮತೆ-ಸಮಾಧಾನ ಚಿತ್ತತೆ: ದಿನನಿತ್ಯದ ಬದುಕಿನಲ್ಲಿ ಮನಸ್ಸಿನ ನೆಮ್ಮದಿ ಕಲಕುವ ಹಲವಾರು ಸನ್ನಿವೇಶಗಳು ಎದುರಾಗುತ್ತವೆ. ಇಂತಹ ಸಂದರ್ಭದಲ್ಲಿ ಅಜ್ಞಾನಿಯು ದುಡುಕಿ ತನಗೂ ಹಾಗೂ ತಾನು ಜೀವಿಸಿರುವ ಸಮಾಜದ ಸ್ವಾಸ್ಥ್ಯಗೆ ಭಂಗವನ್ನುಂಟುಮಾಡಿದರೆ, ಸುಜ್ಞಾನಿ ಅಂತರಂಗದಲ್ಲಿ ಗುರು-ದೇವರ ಧ್ಯಾನದಲ್ಲಿ ನಿರತನಾಗುವ ಮೂಲಕ

ಮನಸ್ಸಿನ ಸಮತೋಲನ ಕಾಯ್ದುಕೊಂಡು ತನಗೂ ಹಾಗೂ ತಾನು ಜೀವಿಸಿರುವ ಸಮಾಜಕ್ಕೂ ಕ್ಷೇಮವನ್ನುಂಟು ಮಾಡುತ್ತಾನೆ.

''ಎಂಥಿಂಥಾದೆಲ್ಲಾನು ಬರಲಿ
ಚಿಂತೆಯೆಂಬುದು ನಿಜವಾಗಿರಲಿ
ಅಂತರಂಗದಿ ಗುರುವಿನಿ ಧ್ಯಾನವು
ಸಂತತಕಾಲದಿ ತಾನೆಲಸಿರಲಿ
ಈಶ ಶಿಶುನಾಳೇಶನ ಭಜಿಸುವ
ಆಸೆಯೊಂದು ತಾ ನಿಜವಾಗಿರಲಿ.....''(೫೦:೪೩)

ಎಂಬುದು ಲೌಕಿಕಬದುಕಿನ ತ್ಯಾಜ್ಯ, ಪಾರಮಾರ್ಥಿಕ ಬದುಕಿನ ಕಾಳಜಿಸೂಚಿಸುತ್ತದೆ

ಜೀವದಯೆ : ಶರಣ ಮಾರ್ಗಾವಲಂಬಿಯಾದ ಶರೀಫ್ 'ಜೀವದಯೆ' ತತ್ವ ಪ್ರತಿಪಾದಿಸುವುದು ಸಹಜ. ಮೊಹರಮ್ ಸಂದರ್ಭದಲ್ಲಿ ಶಾಸ್ತ್ರ (ಕುರಾನ್) ಸಮ್ಮತವಲ್ಲದ ಪಂಜಾ-ತಾಬೂತ ಪ್ರತಿಷ್ಠಾಪನೆ ಹಾಗೂ ಅವುಗಳಿಗೆ ಕುರಿಮಾಂಸ ಎಡೆ (ನೈವೇದ್ಯ) ಹಿಡಿಯುವ ಮುಸ್ಲಿಮ್ ಸಂಪ್ರದಾಯ ಜೀವಹಿಂಸೆಗೆಡೆ ಮಾಡಿಕೊಡುವುದೆಂಬ ಕಾರಣದಿಂದ ವಿರೋಧಿಸಿದರು. ದೇವರಿಗೆ ಎಡೆ ಹಿಡಿಯಬೇಕೆಂಬುದೇ ಆದರೆ ಸಂಚಿತಾರ್ಥಕರ್ಮಗಳನ್ನು ಕಡಿದು ಅದಕ್ಕೆ ಗುರುಮಂತ್ರ ಜಪಿಸಿ, ಪವಿತ್ರವಾದ ಅರವುಳ್ಳ ಎಡೆಯನ್ನು ಮಸೀದಿಯಲ್ಲಿರುವ ದೇವರಿಗೆ ನೈವೇದ್ಯ ಹಿಡಿಯುವಂತೆ ಶರೀಫ್ ಸೂಚಿಸುತ್ತಾರೆ.

ಎಡೆ ಒಯ್ಯುನು ಬಾರೆ ದೇವರಿಗೆ
ಎಡೆ ಒಯ್ಯುನು ಬಾರೆ

ಕರ್ಮದ ಕುರಿ ಕೊಯ್ಸಿ ಅದಕ್ಕೆ
ಗುರುಮಂತ್ರವ ಜಪಿಸಿ
ಅರಿವಿನ ಎಡೆಯನು

ಕರದೊಳು ಪಿಡಕೊಂಡು
ಸ್ಥಿರವಾದ ದೇವರು
ಇರುವ ಮಸೀದೆಗೆ.......(೩೪೬:೩೬೫)

ಎನ್ನುವದು ಜೀವದಯೆ ತತ್ವ ಪ್ರತಿಪಾದಿಸುವುದರ ಜೊತೆ ಕರ್ಮಾತೀತನಾಗದೆ ಮನುಷ್ಯನಿಗೆ ಮುಕ್ತಿಸಾಧ್ಯವಿಲ್ಲವೆಂದು ಸನಾತನ ತತ್ವ ಪ್ರತಿಪಾದಿಸುತ್ತದೆ.

ನಿಶ್ಚಿಂತತೆ: ಮಾನವ ಬದುಕು ಸಂಕೀರ್ಣವಾದಂತೆ ಆತನ ಆ ಆಕಾಂಕ್ಷೆಗಳು, ಬೇಕು-ಬೇಡಿಕೆಗಳು ಹೆಚ್ಚುತ್ತ ನಡೆದು ಅವುಗಳನ್ನು ಈಡೇರಿಸಿಕೊಳ್ಳುವಲ್ಲಿ ವಿಫಲನಾದಾಗ ಚಿಂತೆಗೊಳಗಾಗುತ್ತಾನೆ. ಲೌಕಿ ಬದುಕಿನಲ್ಲಿ ಸಿಹಿಗಿಂತ ಕಹಿಯನ್ನೇ ಹೆಚ್ಚು ಉಂಡುಟ್ಟ ಶರೀಫ್ ಚಿಂ ಹಾಗೂ ನಿಶ್ಚಿಂತತೆ ನಡುವಿನ ಸಂಬಂಧದ ಬಗ್ಗೆ ಗಂಭೀರವಾ ಆಲೋಚಿಸುತ್ತಾರೆ.

''ನಿಶ್ಚಿಂತನಾಗಬೇಕಂತಿ ಬಹು
ದುಶ್ಚಿಂತೆಯೊಳಗೆ ನೀ ಕುಂತಿ
ಯಾಕೋ ಎಲೋ ನಿನಗೀ ಭ್ರಾಂತಿ
ನಾಳೆಗಾಗುವದೀಗಂತಿ......''(೯೬:೯೧)

ನಾಳಿನ ಬಗ್ಗೆ ಇಂದು ಯೋಚಿಸಿ ಅದು ಈ ಕೂಡಲೆ ಕೈಗೂಡಬೇಕೆಂಬ ತೀವ್ರತೆಯೇ ಚಿಂತೆಗೆ ಮೂಲವೆಂಬುದನ್ನು ಶರೀಫ ಪರಿಶೋಧಿಸಿ ಇಂಥ ಪ್ರವೃತ್ತಿಯನ್ನು ನಿಲ್ಲಿಸಿ ಎಲ್ಲವನ್ನು ದೇವರ ಮೇಲೆ ಭಾರಹಾಕಿ ಆತನ ಧ್ಯಾನ ಮಾಡುತ್ತ ನಿಶ್ಚಿಂತನಾಗಿರಬೇಕೆಂದು ಚಿಂತೆಮಾಡುವವರಿಗೆ ಶರೀಫ್ ಸಲಹೆ ನೀಡುತ್ತಾರೆ.

ನಡೆ - ನುಡಿ: 'ನುಡಿದಂತೆ ನಡೆ, ಇದೇ ಜನ್ಮ ಕಡೆ' ಎನ್ನುವ ನಾಣ್ನುಡಿಯಂತೆ ಮುಕ್ತಿಗೆ ಪೂರಕವಾಗುವ ನಡೆ-ನುಡಿಗಳು ಎಂತಿರಬೇಕೆಂಬುದನ್ನು ಶರೀಫ್ ಸೂಚಿಸಿದಿರಲಿಲ್ಲ.

''ನಡೆ ನುಡಿಯಿಂದ ನಾವು ನಡೆಯಬೇಕಣ್ಣ ದೇಹವಿದು
ನಡುವೆ ಬಿದ್ದು ಹೋಗತ್ತೈತಣ್ಣ
ಭಜನೆಯ ಮಾಡ್ವಾಗ ಬೇಧ-ಭಾವ ಬಿಟ್ಟು ಭಜಿಸಬೇಕಣ್ಣ
ಅಣ್ಣ-ತಮ್ಮ ರೆಂದು ತಿಳಿಯಬೇಕಣ್ಣ
ಪರಹೆಣ್ಣು ಮಕ್ಕಳು ಎದುರಿಗೆ ಬಂದರೆ ನಜರಿಡಬೇಡಿರಣ್ಣ
ನಿನ್ನ ಭಗಿನಿಯರೆಂದು ಅರಿಯಬೇಕಣ್ಣ
ವಸುಧೆಯಲ್ಲಿ ಶಿಶುನಾಳಧೀಶನ ದಯವ ಗಳಿಸಬೇಕಣ್ಣ
ಗುರುಗೋವಿಂದನ ಧ್ಯಾನ ಮಾಡಣ್ಣ'' (೨೪೩:೨೦೮)

ಎಂಬುದರಲ್ಲಿ ಮಾನವನ ಇಹ-ಪರ ಬದುಕಿನ ಉದ್ಧಾರ ಅಡಗಿರುವುದನ್ನು ಅರಿಯಬಹುದಾಗಿದೆ.

ನಿರ್ವಂಚನೆ : ಎಲ್ಲ ವಲಯಗಳಲ್ಲಿ ಪ್ರಚಲಿತವಿರುವ ಪುರೋಹಿತಶಾಹಿಯನ್ನು ಶರೀಫ್ ಖಂಡಿಸಿದರು. ಕಾರಣ ಅದು ಭಕ್ತರನ್ನು ವಂಚಿಸುವುದಕ್ಕೆ ನೆರವಾಗುವುದೆಂದು ಅವರು ನಂಬಿದರು. ಅಂತೆಯೇ ವೀರಶೈವ ಸಮಾಜದಲ್ಲಿ ಅಗ್ರಗಣ್ಯರೆಂದು ಹೇಳಿಕೊಳ್ಳುವ ಜಂಗಮರು ಮತ ಪ್ರಚಾರ ಮಾಡದೆ ಭಕ್ತರಿಂದ ಭಿಕ್ಷೆ ಸ್ವೀಕರಿಸುತ್ತ ತಿರುಗುವುದು ಕರ್ತವ್ಯ ವಿಮುಖತೆಯ ಜೊತೆಗೆ ವಂಚನೆಯಾಗುವುದೆಂದು 'ಲಿಂಗದೊಳಗೆ ಮನವಿಡದಿನ್ನಷ್ಟಾವರಣದ, ಇಂಗಿತ ತಿಳಿಯದಲೇನು ಫಲ' (೯೫:೯೧) ಗೀತೆಯಲ್ಲಿ ಹೇಳಿದ್ದಾರೆ.

ಮುಸ್ಲಿಮ್ ಮೂಲದವರಾದ ಶರೀಫ್ ಅನ್ಯಮತ ಗುರುಗಳನ್ನು ಟೀಕಿಸುವರು ಪರಧರ್ಮ ಸಹಿಷ್ಣುತೆಯ ಅಭಾವವೆಂದು ತಪ್ಪಾಗಿ ಅರ್ಥೈಸಬಾರದು. ತಮ್ಮದೇ ಆದ ಇಸ್ಲಾಮ್ ಸಮಾಜದಲ್ಲಿ

ಮೊಹರಮ್ ಸಂದರ್ಭದಲ್ಲಿ ಶಾಸ್ತ್ರಸಮ್ಮತವಲ್ಲದ ಪಂಜಾ ತಾಬೂ
ಪ್ರತಿಷ್ಠಾಪಿಸಿ ಮಾಂಸ ನೈವೇದ್ಯ ಹಿಡಿಯಬೇಕೆಂದು ಸೂಚಿಸು
ಮುಲ್ಲಾಮೌಲವಿಗಳನ್ನು ಶರೀಫ್ ತರಾಟೆಗೆ ತೆಗೆದು ಕೊಂಡದ್ದನ್
'ಅಶುರಾ ಛೇ ಇದು, ಏನು ಮೊಹರಮ್‌ದ್ದಬ್ಬ, ಮಾಡಿ ಧೀನ
ಎಂಬುವರು' (೩೩೩:೪೫೫) ಹಾಗೂ 'ಬೋಕಿಯೊಳಗೆ ಮೂರು ಲೋ
ಹುಟ್ಟಿತು' (೫೬೭:೫೯೪) ರಿವಾಯತ್ ಪದಗಳಿಂ
ಗಮನಿಸಬಹುದಾಗಿದೆ.

ಇದೇ ರೀತಿ ದೇವರ ಹೆಸರಿನಲ್ಲಿ ಮುಗ್ಧ ಜನರನ್ನು ವಂಚಿಸು
ಕುನ್ನಿ ಮನುಜರನ್ನು ಶರೀಫ್ ತರಾಟೆಗೆ ತೆಗೆದುಕೊಂಡದ್ದನ್
'ದೇವರಾಟ ಕಣಗಂಡೆ ಸಂಶಿಯೊಳು' (೨೮೨:೨೭೮) ಲಾವಣಿಯಿಂ
ಗಮನಿಸಬಹುದು. ಶಿಶುನಾಳದ ನೆರೆಯ ಸಂಶಿ ಗ್ರಾಮದಲ್ಲಿ ಶ್ರಾವ
ಮಾಸದಲ್ಲಿ ನಾಗರಹಾವು ಕಚ್ಚಿಸಿಕೊಂಡು ಹತನಾದ ದನಗಾಹಿ
ಸಮಾಧಿಗೆ ಇಷ್ಟಾರ್ಥಸಿದ್ಧಿಗಾಗಿ ಅಜ್ಞರು ಹರಕೆಹೊರುವುದನ್ನು ಶರೀ
ಕಣ್ಣಾರೆ ಕಂಡು ಅಶ್ಚರ್ಯವ್ಯಕ್ತಪಡಿಸಿದರು. 'ಜನಮರುಳು ಜಾತ್
ಮರುಳು' ನಾಣ್ನುಡಿಯಂತೆ ಅದಾವನೋ ಕುನ್ನಿ ಮನುಜ ಮಾಡಿದ ರ
ಸಜ್ಜಿಕೆಗೆ ಅದೆಷ್ಟು ಜನ ಮೋಸ ಹೋದರಲ್ಲ ಎಂದು ಶರೀಫ್ ಮರುಗುತ
ಜನತೆಗೆ ನೈಜಸ್ಥಿತಿ ಪರಿಚಯಮಾಡಿಕೊಟ್ಟು ವಂಚನೆ ತಡೆಗಟ್ಟಿದರು.
ಹೀಗೆ ಸಮಾಜದ ವಿವಿಧ ವಲಯಗಳಲ್ಲಿ ವಿವಿಧ ಕಾರಣಗಳಿಗಾ
ಪ್ರಚಲಿತವಿದ್ದ ವಂಚನ ಪ್ರವೃತ್ತಿಯನ್ನು ಶರೀಫ್ ಖಂಡಿಸಿ ನಿರ್ವಂಚನ
ತತ್ವ ಪ್ರತಿಪಾದಿಸಿ ಮುಗ್ಧರ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

ಕಾಯಕ: ಶರಣ ಮಾರ್ಗಾವಲಂಬಿಯಾದ ಶರೀಫ್ ಅನ್ನಕ್ಕಾ
ಅನ್ಯರನ್ನು ಅವಲಂಬಿಸುವುದನ್ನು ಅಲ್ಲಗಳೆದು ಪ್ರತಿಯೊಬ್ಬರೂ ಕಾಯ
ಮಾಡಿ ಹೊಟ್ಟೆ ಹೊರೆದುಕೊಳ್ಳಬೇಕೆಂದು ಕರೆ ಕೊಡುತ್ತಾರೆ.

"....ಕುಡಗೋಲ ಪಿಡಿದು ಕೂಲಿ ಮಾಡಿ
ತುಂಬಿಸಬೇಕು ಈ ಚೀಲ
ಒಂದರಘಳಿಗೆ ಅನ್ನ ವಿಲ್ಲ ದಿರೆ
ಸೈಲಬೀಳತ್ತೈತೋ ತೊಗಲ....."(೨೮೧:೨೭೭)
ಎಂಬ ನೈಜ ಸತ್ಯ ಸಾರುತ್ತಾರೆ.

ಈವರೆಗೆ ಪರಿಶೀಲಿಸಿದ ಜೀವ-ಜಗತ್ತು-ದೇವರು, ಹೊನ್ನು-ಹೆಣ್ಣು-ಮಣ್ಣು, ಸಂಸಾರ-ಸದ್ಗತಿ, ಹುಟ್ಟು-ಸಾವು, ಜೀವನ ಮೌಲ್ಯಗಳು ಮುಂತಾದ ಜೀವನ ಜಿಜ್ಞಾಸೆ ಕುರಿತ ಚಿಂತನೆಗಳು ವೈದಿಕ, ವೀರಶೈವ ಹಾಗೂ ಇಸ್ಲಾಮ್ ಮತತತ್ವಗಳಿಂದ ಪ್ರಭಾವಿತವಾಗಿದ್ದು ಈ ಮತತತ್ವಗಳ ಸರ್ವಸಾಮಾನ್ಯ ತತ್ವಗಳನ್ನು ತಮ್ಮ ಕಾವ್ಯದಲ್ಲಿ ಅಳವಡಿಸಿ ಪ್ರಚಾರ ಮಾಡುವ ಮೂಲಕ ಶರೀಫ್ ಮತೀಯ ಸಾಮರಸ್ಯ ಹಾಗೂ ಪಾರಮಾರ್ಥಿಕ ಸಿದ್ಧಿಗಳನ್ನು ಏಕಕಾಲಕ್ಕೆ ಸಾಧಿಸಲು ಸಾಧ್ಯವೆಂಬುದನ್ನು ತೋರಿಸಿಕೊಟ್ಟಿದ್ದಾರೆ.

ಅಧ್ಯಾಯ ೪

ಕಾವ್ಯ

ಶರೀಫ್ ಜೀವಿತದುದ್ದಕ್ಕೂ ನೂರಾರು ಕೃತಿ ರಚಿಸಿದರೂ ಕಾ
ರಚನೆಯ ಬಗೆಗಿನ ಕಳಕಳಿಗಿಂತ ಸುತ್ತಣ ಜನ-ಮನ ತಿದ್ದು
ಉದ್ದೇಶವೇ ಪ್ರಧಾನವಾಗಿದ್ದುದರಿಂದ ಕಾವ್ಯರೂಪದ ಅಭಿವ್ಯಕ್ತಿ ತಾನ
ಹೇಳುವ ನೀತಿಗೆ, ವಿವೇಕಕ್ಕೆ ಸಲೀಸಾಗಿ ಒದಗಿ ಬರುವ ಒಂದು ಮಾಧ್ಯವ
ಮಾತ್ರವಾಗಿತ್ತು. ಸುತ್ತಣ ಜನರ ಆಡುಮಾತಿಗೆ ಕಾವ್ಯಾಭಿವ್ಯಕ್ತಿ
ತಿರುವುಕೊಟ್ಟು ವ್ಯಂಗ್ಯ, ಕಟಕಿ, ವಿನೋದ, ಸಹಾನುಭೂತಿ ಇತ್ಯಾ
ವೈವಿಧ್ಯಗಳಲ್ಲಿ ಜನರ ಬದುಕನ್ನು ತಿದ್ದುತ್ತ ನಿಜವಾದ ಅರ್ಥದಲ್ಲಿ
ಕವಿಯಾದರೂ ಶರೀಫ್ ತಮ್ಮ ಕೃತಿಗಳನ್ನು ಬರೆದಿಡುವ ಪರಿಪಾಠವಿಟ್ಟು

ಕೊಂಡಿದ್ದಿಲ್ಲವೆಂಬುದನ್ನು[೧] ಅವರದೇ ಒಂದು ಹಾಡಿನಿಂದ ಮನಗಾಣಬಹುದು.

''ಬರಕೋ ಪದ ಬರಕೋ
ಇದರನ್ವಯ ತಿಳಕೋ
ಸದಮಲ ಜ್ಞಾನದಿ ಕುದಿ ಉಕ್ಕಿ ಬರುವಾಗ
ನೆದರಿಟ್ಟು ನಿನ್ನೊಳು ಸದಮಲ ತತ್ವದಿ....'' (೧೮೪:೧೦೫)

ಹೀಗಾಗಿ ಶರೀಫ್ ರಚಿಸಿರಬಹುದಾದ ಕೃತಿ ಸಂಖ್ಯೆಯ ಬಗೆಗಾಗಲಿ, ಪ್ರಚಾರದಲ್ಲಿರುವ ಹಾಡುಗಳ ಪಾಠಾಂತರಗಳ ಬಗೆಗಾಗಲಿ ನಿಖರವಾಗಿ ಹೇಳುವುದು ಕಷ್ಟ. ಶರೀಫ್ ಸ್ವತಃ ತಮ್ಮ ಕೃತಿಗಳನ್ನು ಬರೆದಿಡದಿರುವುದರಿಂದ ಅವುಗಳಿಗೆ ಶೀರ್ಷಿಕೆಗಳಿಲ್ಲ. ಆದರೆ ದಂಡಕ, ಹೋಳೀ ಹಾಡುಗಳು ದೀರ್ಘವಾಗಿರುವದರಿಂದ ಶರೀಫ್ ಅವುಗಳನ್ನು ಬರೆದಿಟ್ಟುಕೊಂಡ ಸಾಧ್ಯತೆ ಇರುವುದರಿಂದ ಅವುಗಳಿಗೆ ಶೀರ್ಷಿಕೆಗಳಿವೆ. ಈ ಕುರಿತ ಶರೀಫ್ ಹಸ್ತಪ್ರತಿ ದೊರೆಯದಿದ್ದರೂ ಅವುಗಳನ್ನು ಹಾಡುವವರು ಹಾಡಿನ ಮೊದಲ ಚರಣಗಳಿಗೆ ಬದಲಾಗಿ ಕಾವ್ಯ ನಾಯಕ(ಕಿ)ನಿಂದ ಕೃತಿ ಗುರುತಿಸುವುದೇ ಕಾರಣವಾಗಿದೆ.[೨]

ಕಾವ್ಯ ಬೆಳವಣಿಗೆ :

ಜನತೆಯ ಸಮಾಜೋ-ಆಧ್ಯಾತ್ಮಿಕ ಜೀವನ ಹಸನಾಗಲೆಂಬ ಘನ ಉದ್ದೇಶದಿಂದ ನೂರಾರು ಕೃತಿಗಳನ್ನು ರಚಿಸಿದ ಶರೀಫ್ ಕಾವ್ಯ ಕೃಷಿಯಲ್ಲಿ ಒಮ್ಮೆಲೆ ಪಳಗಿದವರಂತೆ ತೋರುವುದಿಲ್ಲ. ಅವರ ಕಾವ್ಯಸಿದ್ಧಿಯ ಬೆಳವಣಿಗೆಯನ್ನು ನಾಲ್ಕು ಘಟ್ಟಗಳಲ್ಲಿ ಗುರುತಿಸಬಹುದು. ಆತ್ಮೋದ್ಧಾರದ ಹಂಬಲದಿಂದ ಗೋವಿಂದಭಟ್ಟರ ಬಳಿ ಬರುವ ಮೊದಲಿನ ಕಾಲವನ್ನು ಪ್ರಥಮ ಘಟ್ಟವೆಂದೂ,

೧ ಶರೀಫ್ ಒಡನಾಡಿ ಗುಡಗೇರಿಯ ಕುಂಬಾರ ಮುದಕಪ್ಪ ಶರೀಫ್ ರಚನೆಗಳನ್ನು ಬರೆದಿಟ್ಟು ಕೊಳ್ಳುತ್ತಿದ್ದನೆಂದು ಹೇಳಲಾಗಿದೆ.

೨ ನೋಡಿ : ಶಿವಾನಂದ ಗುಬ್ಬಣವರ (ಸಂ.) ಶಿಶುನಾಳ ಶರೀಫರ ಗೀತೆಗಳು ಪು.ಪು. ೨೨೫ - ೨೪೪, ಹಾಗೂ ಪು.ಪು. ೨೯೭ - ೩೦೨

ಗುರುಕರಣೆ-ಮಾರ್ಗದರ್ಶನಕ್ಕಾಗಿ ಗೋವಿಂದಭಟ್ಟರಲ್ಲಿ ನೆಲೆನಿಂದ ಕಾಲವನ್ನು ದ್ವಿತೀಯ ಘಟ್ಟವೆಂದೂ, ಸಿದ್ಧಿಯ ಕಾಲ ತೃತೀಯ ಘಟ್ಟವೆಂದೂ ಹಾಗೂ ಪರಮಾತ್ಮ ಸಾಕ್ಷಾತ್ಕಾರದ ನಂತರದ ಕಾಲ ಚತುರ್ಥ ಹಾಗೂ ಅಂತಿಮ ಘಟ್ಟವೆಂಬು ಹೆಸರಿಸಬಹುದು.

ಆರಂಭದ ಘಟ್ಟದಲ್ಲಿ 'ಶರೀಫ್' ಹಾಗೂ 'ಶಿಶುನಾಳ' ಅಂಕಿತಗಳುಳ್ಳ ಕೆಲ ಕೃತಿಗಳಲ್ಲಿ ನಾಮ ವ್ಯಾಮೋಹ ಕಾಣಿಸಿಕೊಳ್ಳುವುದೇ ವಿನಹ ಕಾವ್ಯದ ಬನಿಯಾಗಲಿ, ಬಂಧುರತೆಯಾಗಲಿ ಇರದಿರುವುದನ್ನು ಗಮನಿಸಬಹುದು.

''ಸ್ವಾಮಿ ಹೊರಟಾರು ಶರಣ
ಅವರಿಗೆ ಮೂಲಾತು ಕರ್ಬಲ್ದ ರಣ
ನೂರಾರು ಬಂಡಿಯ ಮ್ಯಾಲ ಬಾಣ
ಹೌಹಾರಿ ಕುಂತಾನು ಹುಸೇನ
ನೂರಾರು ಕುದರೆಯನೇರಿ ಕುಂತಾರಣ್ಣ
ಎಜೇದನ ಹಾದಿಗೆ ಹಚ್ಚಿತು ನಿಶಾನ
ತಾಯಿ ಕರಳು ಎಂಬುದು ಬಲು ಹೆಚ್ಚು
ಕುಂತು ಸೋಸ್ಯಾಳು ಭೂಮಿಯ ಮಣ್ಣು
ಶಿಶುನಾಳ ಎಂಬುದು ಜಾಹೀರ
ಶರೀಫ್‌ಸಾಹೇಬ ಮಾಡ್ಯಾನು ಕವಿ ಚಾತುರ'' (೩೧೧:೩೪೩)

ದ್ವಿತೀಯ ಘಟ್ಟದಲ್ಲಿ ಸಂಸಾರಸುಖದಿಂದ ವಂಚಿತರಾಗಿ ಪರಮಾರ್ಥ ಪಥದಲ್ಲಿ ಹೊರಳುವ ಶರೀಫ್ ಗುರಿಸಾಧನೆಗಾಗಿ

ಗೋವಿಂದಭಟ್ಟರಲ್ಲಿ ಸಮರ್ಪಣಭಾವ ಪ್ರಕಟಿಸಿ ಅವರ ಅಂಕಿತದಲ್ಲಿ ಕೆಲ ಕೃತಿಗಳನ್ನು ರಚಿಸಿರುವುದು ಶಿವಶರಣರ ವಚನಗಳನ್ನು ನೆನಪಿಸುತ್ತದೆ.

''ನನ್ನೊಳಗೆ ನಾ ತಿಳಕೊಂಡೆ
ನನಗೆ ಬೇಕಾದ ಗಂಡನ ಮಾಡಿಕೊಂಡೆ
....
ಗುರುಗೋವಿಂದನ ಪಾದ ಹಿಡಕೊಂಡೆ'' (೪೮:೪೧-೪೨)

ಗೋವಿಂದಭಟ್ಟರ ಸಮರ್ಥ ಮಾರ್ಗದರ್ಶನದಲ್ಲಿ ಪ್ರಾಣಾಯಾಮದಿಂದ ಸಹಸ್ರ ದಳದಲ್ಲಿ ಹೊಳೆಯುವ ಚಿಚ್ಛಕ್ತಿಯನ್ನು ಕಂಡು ಕೃತಾರ್ಥರಾದ ಶರೀಫ್ ಆ ಚಿಚ್ಛಕ್ತಿಗೆ, ತಾರಕಬ್ರಹ್ಮನಿಗೆ 'ಶಿಶುನಾಳಧೀಶ' ಎಂದು ಕರೆದು ಗೌರವಿಸುವುದರೊಂದಿಗೆ ಅದನ್ನು ಆಗುಮಾಡಿಕೊಟ್ಟ ಗೋವಿಂದ ಭಟ್ಟರಲ್ಲಿ ಕೃತಜ್ಞತಾಭಾವ ಸೂಚಿಸುವುದಕ್ಕಾಗಿ 'ಶಿಶುನಾಳಧೀಶ ಗೋವಿಂದಭಟ್ಟರ' ಅಂಕಿತದಲ್ಲಿ ಕೆಲವು ಕೃತಿಗಳನ್ನು ರಚಿಸಿರುವುದು ತೃತೀಯ ಘಟ್ಟ.

''ಸಾಧುಗಳಿಗೆ ಶಿವನ ಚಿಂತನೆಯು ಹಗಲಿರುಳು
....
ಹೊಂದಿ ಶಿಶುನಾಳಧೀಶನ ಸದ್ಗುರು ಗೋವಿಂದ
ತಂದೆ ರಾಜಯೋಗಿಯ ಚರಣ
ದ್ವಂದ್ವದಲ್ಲಿ ಲಕ್ಷವಿಟ್ಟು
ಬಿಂದುವಸ್ತು ಸವಿದು ಪರಮಾನಂದವೆಂಬ ವನದೊಳಗಿರ್ದು
ಚಂದದಿಂದ ಮಾತನಾಡುವ'' (೭೭:೭೩)

ವೃದ್ಧಾಪ್ಯದಿಂದ ಗೋವಿಂದಭಟ್ಟರು ತೀರಿದ ಮೇಲೆ ಮುಕ್ತಿಗೆ ಮೂಲವಾದ 'ಶಿಶುನಾಳಧೀಶ' ನನ್ನೇ ಶರೀಫ್ ನಂಬಿ ತಮ್ಮ ಅಂತ್ಯಗಾಲದವರೆಗೂ ಆತನ ಅಂಕಿತದಲ್ಲಿಯೇ ನೂರಾರು ಕೃತಿಗಳನ್ನು ರಚಿಸಿ ಕೃತಾರ್ಥರಾಗಿದ್ದಾರೆ.

''ಮರಣಕ್ಕೆ ಒಳಗಾಗೋ ನರಕುರಿಗಳೆ
ಅರಿವಿರಲಿ ಸಾರುವೆ ಕೇಳಿ
....
ವಸುಧೆಯೊಳು ಶಿಶುನಾಳಧೀಶನೇ ಗತಿಯೆಂದು
ಅಸಮ ಮುಕ್ತಿಯ ಪಥವನು ಕೂಡಿರೋ'' (೨೨೦:೧೯೩)

ಇದು ಕಾವ್ಯ ಬೆಳವಣಿಗೆಯ ಚತುರ್ಥ ಹಾಗೂ ಅಂತಿಮ ಘಟ್ಟವಾಗಿರುವುದಲ್ಲದೆ ಒಲಿದು ಶಿಶುನಾಳಧೀಶ ಕೇಳದೇ ತಮಗೆ ಸುಲಭದಿಂದ ಹೇಳಿದ ಪದಗಳನ್ನು ಜನತೆಗೆ ಕಲಿಸುತ್ತಿರುವುದಾಗಿ ಶರೀಫ್ ಹೇಳಿಕೊಳ್ಳುವುದು ಅವರ ವಿನಮ್ರಭಾವ ಪ್ರಕಟಿಸುತ್ತದೆ.

''ಪದವ ಬ್ಯಾಗನೆ ಕಲಿ ಕಲಿ
....
ಒಲಿದು ಶಿಶುನಾಳಧೀಶನು ಕೇಳದೆ
ಸುಲಭದಿಂದ ಎನಗೆ ಹೇಳಿದ ಪದವು'' (೧೮೩:೧೬೪-೧೬೫)

ಹೀಗೆ ಕವಿತ್ವ ಬೆಳವಣಿಗೆಯೊಂದಿಗೆ ಶರೀಫ್ ಆಧ್ಯಾತ್ಮಿಕ ಬೆಳವಣಿಗೆಯಾದುದು ಅವರ ಕಾವ್ಯಾಧ್ಯಯನದಿಂದ ಕಂಡುಬರುತ್ತದೆ. ಸಿದ್ಧಿಯ ಸಾಧನೆಯ ನಂತರ ಶರೀಫ್ ಪದರಚನೆಯ ಹದ ಚೆನ್ನಾಗಿ ಬಲ್ಲವರಾಗುತ್ತಾರೆ. ಪದರಚನೆಗೆ ಮೊದಲು ಸ್ಫೂರ್ತಿ ಬೇಕೆಂಬುದನ್ನು ಅರಿಯುತ್ತಾರೆ. ''ಭಾವದ ಕುದಿ ಉಕ್ಕಿ'' ಬಂದಾಗಲೇ ಪದ ರೂಪುಗೊಳ್ಳುವುದೆಂದು ಅವರು ಅರಿಯುತ್ತಾರೆ. ಪದರಚನೆ ಅಡಿ-ಗಣ-ಪ್ರಾಸ, ಗುರು-ಲಘುಗಳ ಮಿಳಿತ ಅವಲಂಬಿಸಿದೆಯೆಂಬುದು ಅವರಿಗೆ ಗೊತ್ತು. ಆದರೆ ಕೇವಲ ಹಾಡಿನ ಈ ಪರಿವಾರ ಮುಖ್ಯವಲ್ಲ. ಪದದಲ್ಲಿ ಹುದುಗಿರುವ 'ಸದಮಲಜ್ಞಾನ' ಮುಖ್ಯ, ಬೋಧ ಮುಖ್ಯ

ಎಂದು ಶರೀಫ್ ಸಾರುತ್ತಾರೆ. ಈ ಜ್ಞಾನ, ಈ ಬೋಧ ಭಾವಾವೇಶದೊಡನೆ ಹೊರಹೊಮ್ಮಿದಾಗ ತಾಳ, ಲಯ, ಅಡಿ, ಗಣ, ಪ್ರಾಸ ತಾವಾಗಿಯೇ ಪದ್ಯದಲ್ಲಿ ಹೊಂದಿಕೊಳ್ಳುವುದೆಂದು ಅನುಭವದಿಂದ ಕಂಡುಕೊಳ್ಳುತ್ತಾರೆ.

ಶಿಶುನಾಳಧೀಶ:

ಶರಣರು, ದಾಸರಂತೆ ಶರೀಫ್ ಕೂಡ ತಮ್ಮ ಆರಾಧ್ಯದೇವತೆಯಾದ 'ಶಿಶುನಾಳಧೀಶ' ಕಾವ್ಯನಾಮದಲ್ಲಿ ನೂರಾರು ಗೀತೆಗಳನ್ನು ರಚಿಸಿದ್ದಾರೆ. ಆದರೆ ಶಿಶುನಾಳಧೀಶ ಯಾರೆಂಬುದರ ಬಗ್ಗೆ ಭಿನ್ನಾಪ್ರಾಯಗಳಿವೆ. ಈ ಭಿನ್ನಾಭಿಪ್ರಾಯಗಳನ್ನು ನಾಲ್ಕು ವಿಧವಾಗಿ ವಿಂಗಡಿಸಿಪರಿಶೀಲಿಸಬಹುದು.

ಮೊದಲನೆಯದಾಗಿ, ಶಿಶುನಾಳದ ಅಧಿದೇವತೆಯಾದ ಬಯಲು ಗುಡಿಯ ಸ್ಥಂಭಮೂರ್ತಿ ನಂದಿಯೇ ಶಿಶುನಾಳಧೀಶನೆಂದು ಜನಸಾಮಾನ್ಯರ ತಿಳಿವಳಿಕೆಯಾಗಿದೆ. ಇದಕ್ಕೆ ಪೂರಕವಾಗಿ ಶರೀಫ್ ಗೀತೆಯನ್ನೊಂದು ಅವರು ಉದಾಹರಿಸುತ್ತಾರೆ.

''ಶ್ರೀ ಗುರುನಾಥ ನಿರಾಲನಾಲಯದೊಳು
ನಾವೀರ್ವರು ನಲಿದಾಡುನು ಬಾಬಾ
....
ನಡಿ ನಡಿ ಶಿಶುನಾಳಧೀಶನ ಗುಡಿಯೊಳು
ಅಡಗಿದ ಪ್ರಣಮವ ನುಡಿಸೋಣು ಬಾ ಬಾ''(೪೩:೩೮-೩೯)

ಸ್ವತಃ ಸ್ಥಾವರಪೂಜೆ ವಿರೋಧಿಯಾದ ಬಸವಣ್ಣನನ್ನು ಸ್ಥಳೀಯ ಸ್ಥಂಭ ಮೂರ್ತಿಯಲ್ಲಿ ಶರೀಫ್ ಕಂಡರೆಂದು ಹೇಳುವುದು ಸಮಂಜಸವೆನಿಸಲಾರದ ಕಾರಣ ಸ್ಥಂಭಮೂರ್ತಿಯೇ ಶಿಶುನಾಳಧೀಶನಾಗುವುದು ಸಾಧ್ಯವಿಲ್ಲ.

ಎರಡನೆಯದಾಗಿ, ಸ್ವತಃ ಶರೀಫರೇ ಶಿಶುನಾಳಧೀಶನಾಗಿರಬಹುದೆಂದು ಊಹಿಸಿ ಅವರ ಪದ್ಯವೊಂದನ್ನು ಉದಾಹರಿಸಲಾಗುತ್ತಿದೆ.

''ಬಿದ್ದಿಯಬೆಮುದುಕಿ
ನೀದಿನಹೋದಾಕಿ
....
ಶಿಶುನಾಳಧೀಶನಮುಂದೆ
ಕೊಸರಿ ಕೊಸರಿ ನಡೆಯದಿರು''....(೧೭೬:೧೫೮-೧೫೯)

ಪ್ರೊಫೆಸರ್ ಆರ್. ಡಿ. ರಾನಡೆ ಅವರು ಶರೀಫ್ ವಿರಚಿತ 'ಹಾವು ತುಳಿದೆನೆ ಮಾನಿನಿ' ಪದ್ಯದ ಪಾರಮಾರ್ಥಿಕ ಹಿನ್ನೆಲೆ ವಿವರಿಸುತ್ತ ಇದನ್ನು 'ಶಿಶುನಾಳಧೀಶ' ಇಲ್ಲವೆ ಆತನ 'ಶಿಷ್ಯ' ರಚಿಸಿರಬೇಕೆಂದು ಊಹಿಸುತ್ತಾರೆ.[1] ಶಿಶುನಾಳಧೀಶ ಅಂಕಿತವನ್ನು ವಾಚ್ಯಾರ್ಥ ಹಾಗೂ ವ್ಯಕ್ತಿ ವಾಚಕವಾಗಿ ಭಾವಿಸಿದುದೇ ಅವರ ಊಹೆಯ ಹಿನ್ನೆಲೆಯಾಗಿರುವಂತೆ ತೋರುತ್ತದೆ. ಆದರೆ ಶರೀಫ್ ಯೋಗಸಿದ್ಧಿಯಲ್ಲಿ ಕಂಡ ಬೆಳಕನ್ನೇ ಶಿಶುನಾಳಧೀಶನೆಂದು ಕರೆದು ಆತನ ಸೇವಕ ತಾವೆಂದು ಭಾವಿಸುವ ಮೂಲಕ ಶಿಶುನಾಳಧೀಶ ಹಾಗೂ ತಮ್ಮ ನಡುವಿನ ಸಂಬಂಧವನ್ನು ರಾನಡೆ ಹೆಸರಿಸಿದ ಶರೀಫ್ ಗೀತೆಯಲ್ಲಿಯೇ ಗಮನಿಸಬಹುದಾಗಿದೆ.

''ಹಾವು ತುಳಿದೆನೆ ಮಾನಿನಿ
....
ಸತ್ಯ ಶಿಶುನಾಳಧೀಶನ
ಉತ್ತಮ ಸೇವಕನಿಗೆ'' (೨೬೪:೨೨೭-೨೨೮)

---

೧ ಆರ್. ಡಿ. ರಾನಡೆ, ಕನ್ನಡ ಸಂತರ ಪರಮಾರ್ಥ ಪಥ, ಪು.೬೪

ಮೂರನೆಯದಾಗಿ, ಗೋವಿಂದಭಟ್ಟರನ್ನೇ ಶಿಶುನಾಳಧೀಶ ಎಂದು ಶರೀಫ್ ಸಂಬೋಧಿಸಿರಬೇಕೆಂಧು ಕೆಲವರು ಊಹಿಸುತ್ತಾರೆ. ಆದರೆ ಶಿಶುನಾಳಧೀಶ ಹಾಗೂ ಗೋವಿಂದಭಟ್ಟರು ಭಿನ್ನರೆಂಬುದನ್ನು ಶರೀಫ್ ಗೀತೆಯಿಂದ ಉಕ್ತವಾಗುತ್ತದೆ.

''ಇದೇ ಮನಿ ಇದೇ ಮನಿ
ಹೃದಯದೊಳಗೆನಲಿದಾಡುವ ಆತ್ಮಗೆ
....
ಶಿಶುನಾಳಧೀಶಗುರುಗೋವಿಂದನು
ಹಸನಾಗಿ ವಾಸಿಸಿ ಎಸೆಯುವ ಸುಂದರ'' (೬೦:೫೧)

ಮೇಲಿನ ಮೂರು ಅಭಿಪ್ರಾಯಗಳು 'ಶಿಶುನಾಳಧೀಶ' ಅಂಕಿತದ ಅಂತರಂಗವನ್ನು ಸಮರ್ಪಕವಾಗಿ ಪ್ರಕಟಿಸದಿರುವುದರಿಂದ ಅದನ್ನು ಭಿನ್ನ ದೃಷ್ಟಿಕೋನದಿಂದ ಪರಿಶೀಲಿಸಬೇಕಾಗುತ್ತದೆ. ಶಿಶುನಾಳಧೀಶ ಎನ್ನುವುದು 'ಶಿಶುನಾಳ' ಹಾಗೂ 'ಅಧೀಶ' ಎಂಬ ಎರಡು ಪದಗಳ ಸಮುಚ್ಚಯವಾಗಿದೆ. ಶಿಶುನಾಳ ಎಂಬ ಪದವು ಯೋಗಶಾಸ್ತ್ರದಲ್ಲಿ ಬರುವ ಹದಿನಾಲ್ಕು ನಾಡಿಗಳಲ್ಲೊಂದಾದ ಶುಷಮ್ನನಾಳಕ್ಕೆ ಸ್ವಲ್ಪ ಹತ್ತಿರವಾಗಿದೆ. ಶುಷಮ್ನನಾಳಕ್ಕೆ ಅಧೀಶ (ಒಡೆಯ) ನಾದವನೇ ಶಿಶುನಾಳಧೀಶನೆಂತಲೂ ಹಾಗೂ ಆತನೇ 'ಪರಮೇಶ್ವರ' ಇಲ್ಲವೆ 'ಪಾರ್ವತಿ ಪತಿ' ಎಂಬುದನ್ನು ತಾವು ಗುರೂಪದೇಶಿಸಿದ ಮಂತ್ರದಿಂದ ಅರಿತುಕೊಂಡಿರುವುದಾಗಿ ಶರೀಫ್ ತಮ್ಮ ಗೀತೆಯೊಂದರಲ್ಲಿ ವಿವರಿಸುತ್ತಾರೆ.

''ಶ್ರೀ ಗುರು ಮಂತ್ರವ ರಾಗದಿ ಸ್ತುತಿಸಲು
ಭೋಗಸಂಪದಸುಖವಾಗುವುದು
....
ಶಿಶುನಾಳಧೀಶನ ಹೆಸರಿನ್ನೈದಕ್ಷರ
ಹಸನಾಗಿ ಭಜಿಸಲಹುದೆನಿಸುವುದು''(೩೩:೩೨)

ಸಾಕ್ಷಾತ್ ಪರಶಿವನೇ ಶಿಶುನಾಳಧೀಶನೆಂದು ಭಾವಿಸಿದ ಶರೀಫ್ ಶಿವನಾಮ ಸ್ಮರಣೆಯಿಂದಾಗಿ ತಾವು ಅವನಿಯೊಳು ಜವನಬಾಧೆ ಗೆದೆಯಲು ಸಾಧ್ಯವಾಯಿತೆಂದು ಹೇಳಿದ್ದಾರೆ.

ಕಾವ್ಯ ಪ್ರಕಾರ:

ಜನತೆಯ ಸಮಜೋ ಆಧ್ಯಾತ್ಮಿಕ ಜೀವನ ಹಸನಾಗಲೆಂಬ ಸದುದ್ದೇಶದಿಂದ ನೂರಾರು ಕೃತಿ ರಚಿಸಿದ ಶರೀಫ್ ಕಾವ್ಯ ವೈವಿಧ್ಯಮಯ. ಅವುಗಳನ್ನು ಏಳು ವಿಧವಾಗಿ ವಿಂಗಡಿಸಿ ಅಧ್ಯಯನಿಸ ಬಹುದು.

೧) **ತತ್ವ ಪದ:** 'ತತ್ವ' ಎಂದರೆ 'ಪರಮಾತ್ಮ' ಎಂದು ಅರ್ಥೈಸಲಾಗುತ್ತದೆ. ಪರಮಾತ್ಮನ ಸ್ವರೂಪ ಹಾಗೂ ಅತನ ಸಾಕ್ಷಾತ್ಕಾರಕ್ಕಾಗಿ ಹಂಬಲಿಸುವುದನ್ನು ಕುರಿತು ರಚಿತವಾದ ಸಾಹಿತ್ಯವನ್ನು ತತ್ವಪದಸಾಹಿತ್ಯವೆಂದು ವರ್ಣಿಸಲಾಗಿದೆ. ಕನ್ನಡದಲ್ಲಿ ನಿಜಗುಣಶಿವಯೋಗಿಯಿಂದ ಮೊದಲ್ಗೊಂಡು ಶರೀಫ್‌ವರೆಗೆ ವಿಪುಲವಾದ 'ತತ್ವಪದಸಾಹಿತ್ಯ' ರಚನೆಯಾಗಿದೆ.

ಶರೀಫ್ ಚಿಕ್ಕಂದಿನಲ್ಲಿಯೇ ಬಸವಾದಿ ಪ್ರಮಥರಲ್ಲೆ ಅಗ್ರಗಣ್ಯರಾದ ಬಸವಣ್ಣ ಹಾಗೂ ಪ್ರಭುದೇವರ ವ್ಯಕ್ತಿತ್ವ ಹಾಗೂ ಅವರ ವಚನ ಸಾಹಿತ್ಯದಿಂದ ಆಕರ್ಷಿತರಾದುದಲ್ಲದೆ ಕಾಲಾಂತರ ಇನ್ನಿತರ ಶರಣ ಸಾಹಿತ್ಯ, ದಾಸ ಸಾಹಿತ್ಯ ಹಾಗೂ ವೇದೋಪನಿಷತ್ತುಗಳಿಂದಲೂ ಪ್ರಭಾವಿತರಾಗುತ್ತಾರೆ. ಪರಮಾತ್ಮ ಸಾಕ್ಷಾತ್ಕಾರ ಹಾಗೂ ಆತನಲ್ಲಿ ಸಮರಸಗೊಳ್ಳುವುದೇ ಈ ಸಾಹಿತ್ಯದ ಆಶಯವಾಗಿರುವುದನ್ನು ಅರಿತುಕೊಂಡು ಆ ದಿಸೆಯಲ್ಲಿ ಮುಮುಕ್ಷುಗಳಿಗೆ ಮಾರ್ಗದರ್ಶಿಯಾಗುವ ಸಾಹಿತ್ಯ ರಚಿಸಲು ಶರೀಫ್ ಸಂಕಲ್ಪಿಸುತ್ತಾರೆ.

'ಹೋಗುತಿಹುದು ಕಾಯ ವ್ಯರ್ಥ, ಇದರ ಲಾಘವ ತಿಳಿದವ ಯೋಗಿ ಸಮರ್ಥ' (೨೧೭:೧೯೧) ಗೀತೆಯ ಮೂಲಕ ಪರಮಾತ್ಮ ನಾಮಸ್ಮರಣೆ ಮರೆತುದಕ್ಕಾಗಿ ಈ ಹಿಂದೆ ಹಲವಾರು ಜನ್ಮಾಂತರಗಳಲ್ಲಿ ಹಾಯ್ದು ಬಂದ ಬಗೆ, ಸಂಸಾರ ಭೋಗದಲ್ಲಿ ನಿರತನಾಗಿ ವ್ಯರ್ಥಕಾಲ ಕಳೆದು ವೃದ್ಧಾಪ್ಯ ತಲುಪಿ ಭವರೋಗದಿಂದ ಮರಣ, ಪಾಪ-ಪುಣ್ಯಗಳ ಕರ್ಮಾನುಸಾರ ಯಮದೂತರಿಂದ ಫಲ ನಿರ್ಣಯ ವಿವರಿಸುತ್ತ 'ಓಂ ನಮಃ ಶಿವಾಯ' ಎಂಬ ದಿವ್ಯ ಮಂತ್ರದ ಸಹಾಯದಿಂದ ದೇವರಲ್ಲಿ ಒಂದಾಗುವುದಕ್ಕೆ ಮಾನವರಿಗೆ ಶರೀಫ್ ಕರೆಕೊಡುತ್ತಾರೆ. ಈ ದಿಸೆಯಲ್ಲಿ ಆರು (ಅರಿಷಡ್ವೈರಿ) ಮೂರು (ತ್ರಿಗುಣ) ನಿಯಂತ್ರಿಸಿಕೊಂಡು ಪ್ರಾಣಾಯಾಮದಿಂದ ಮೆಲ್ಲನೆ ದೃಷ್ಟಿಯನ್ನು ಮೇಲೆತ್ತಿದಾಗ ಬೇರಿ, ಕಾಳಿ, ಶಂಖವಾದ್ಯಗಳ ಸುನಾದವು ಕೇಳುತ್ತಿದ್ದಂತೆ ಪುಟಕಿಟ್ಟ ಚಿನ್ನದಂತೆ ಹೊಳೆಯುವ ಪರಮಾತ್ಮ ಕಾಣಿಸಿಕೊಳ್ಳುವನೆಂದು ಶರೀಫ್ ವಿವರಿಸುತ್ತ, ಇಂತಪ್ಪ ದೇವರು ಪ್ರತಿಯೊಬ್ಬರ ಅಂತರಂಗದಲ್ಲಿರುವನೆಂದು ಹೇಳಿ ಜಾಗ್ರತೆ ಪ್ರಯತ್ನಿಸಲು 'ಗುಡಿಯ ನೋಡಿ ರಣ್ಣ ದೇಹದ' (೭೧:೫೭) ಗೀತೆಯ ಮೂಲಕ ಕರೆಕೊಡುತ್ತಾರೆ. ಹೀಗೆ ವಿಷಯ ಸುಖದಿಂದ ಜನರ ಲಕ್ಷವನ್ನು ಶಿವಯೋಗದೆಡೆಗೆ ಸೆಳೆಯಲು ಶ್ರಮಿಸಿದ ಅವರು 'ಶರೀಫ್ ಶಿವಯೋಗಿ'ಯೆಂದು ಜನಮನದಲ್ಲಿ ಸೇವಿಸಲ್ಪಡುತ್ತಿರುವುದು ಸಹಜವೇ.

೨) **ದಂಡಕ :** 'ದಂಡಕ' ಎಂಬುದಕ್ಕೆ ಹೆಚ್ಚು ನೀಳವಾದದ್ದು, ಗಳೆಯ ಆಕಾರದ್ದು, ಒಂದು ಜಾತಿಯ ವೃತ್ತ, ಮುಂತಾದ ಅರ್ಥಗಳಿವೆ. ದೇವ - ದೇವತೆಯರನ್ನು ಸ್ತುತಿಸಿ ಅವರ ಕೃಪಾ ಕಟಾಕ್ಷ ಸಂಪಾದಿಸಲು ದಂಡಕ ರಚಿಸುವ ಸಂಪ್ರದಾಯ ಬಹು ಪುರಾತನವಾದದು. ಶಿವಶರಣರ ಭಕ್ತಿ ತತ್ವ ಎತ್ತಿ ಹಿಡಿದ ಶರೀಫ್ ದೇವ-ದೇವತೆಯರನ್ನು ಸ್ತುತಿಸಲು

ದಂಡಕ ರಚಿಸುತ್ತಾರೆ. ಈ ವರೆಗೆ ಲಭ್ಯವಾದ ಶರೀಫ್ ದಂಡಕಗಳು ಐದು.

ಬಸವಣ್ಣನ ಮಹಿಮೆ ಹಾಗೂ ಆತನ ಭಕ್ತಿತತ್ವ ಜಗದ ತುಂಬ ಸಾರಲು 'ಶ್ರೀ ಬಸವೇಶ್ವರ ದಂಡಕ' (೨೬೮:೨೩೫) ಶ್ರೀರಾಮನಲ್ಲಿ ಆಂಜನೇಯನ ಸ್ವಾಮಿಭಕ್ತಿ ಹಾಗೂ ರಾವಣನಿಂದ ಸೀತೆಯನ್ನು ಬಿಡಿಸಿಕೊಂಡು ಬರುವಲ್ಲಿ ಆತ ತೋರಿದ ಶೌರ್ಯ ಸಾಹಸವನ್ನು ಬಣ್ಣಿಸಲು 'ಶ್ರೀ ಹನುಮಂತದೇವರ ದಂಡಕ' (೨೬೯:೨೩೭) ವೀರಶೈವರ ಶಕ್ತಿವಿಶಿಷ್ಟಾದ್ವೈತ ತತ್ವ ಪ್ರಚುರಪಡಿಸಲು 'ಶ್ರೀ ದೇವಿದಂಡಕ' (೨೭೦:೨೪೧) ಮಹಾಭಾರತದಲ್ಲಿ ಶ್ರೀಕೃಷ್ಣನ ನಿರ್ಧಾರಾತ್ಮಕ ಪಾತ್ರವನ್ನು ವರ್ಣಿಸಲು 'ಶ್ರೀಕೃಷ್ಣ ದಂಡಕ' (೨೭೧:೨೪೧) ಪೂರ್ವಜನ್ಮದ ಕರ್ಮಗಳಿಗಾಗಿ ಪಶ್ಚಾತ್ತಾಪ ವ್ಯಕ್ತಪಡಿಸಿ ಮನ್ನಿಸಿ ಕರುಣಿಸಲು ಶಿವನಲ್ಲಿ ಮೊರೆ ಹೋಗಲು 'ಶ್ರೀ ಶಿವಾಪರಾಧ ಸ್ತೋತ್ರ'[1] ಶರೀಫ್ ರಚಿಸಿದ್ದಾರೆ.

೩) **ಕಾಲ ಜ್ಞಾನ** : ಸಮಾಜ ಇಲ್ಲವೆ ದೇಶಕ್ಕೆ ಮುಂದೊದಗಲಿರುವ ಇಷ್ಟಾನಿಷ್ಟಗಳನ್ನು ತಮ್ಮ ಸೂಕ್ಷ್ಮಮತಿಯಿಂದ ಮಹಾಪುರುಷರು ಮುಂದಾಗಿಯೇ ಗ್ರಹಿಸಿ ಜನತೆಯನ್ನು ಎಚ್ಚರಿಸುತ್ತ ಬಂದ ನುಡಿಗಳೇ 'ಕಾಲ ಜ್ಞಾನ' ಸಾಹಿತ್ಯವಾಗಿ ಪರಿಣಮಿಸಿವೆ. ಇಂಥ ಸಾಹಿತ್ಯ ಸೃಷ್ಟಿಗೆ 'ಕೋಡೆಕಲ್ ಬಸವ'ರು ಹೆಚ್ಚು ಸುಪರಿಚಿತರು.

ತ್ರಿಕಾಲಜ್ಞಾನಿಯಾದ ಶರೀಫ್ ಕೂಡ ಕಾಲಜ್ಞಾನ ಸಾಹಿತ್ಯ ಪ್ರಕಾರದಲ್ಲಿ ಕೃಷಿ ಮಾಡಿರುವುದೊಂದು ವಿಶೇಷ. ಈವರೆಗೆ ಲಭ್ಯವಾದ

1. 'ಶ್ರೀ ಶಿವಾಪರಾಧ ಸ್ತೋತ್ರ' ಶರೀಫ್ ಸ್ವಂತ ಕೃತಿಯಾಗಿರದೆ ಶಂಕರಾಚಾರ್ಯರು ಸಂಸ್ಕೃತದಲ್ಲಿ ಬರೆದ 'ಶಿವಾಪರಾಧಕ್ಷಮಾಪನ ಸ್ತೋತ್ರ'ದ ಕನ್ನಡ ಅನುವಾದವಾಗಿದೆಯೆಂಬುದು ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಇಟಗಿಯ ಡಾ.ಎಂ.ಎಸ್.ಜಾಧವ ಅವರು ೧೯೬೪ರಲ್ಲಿ ಸಂಶೋಧಿಸಿ ಪ್ರಕಟಿಸಿದ 'ಶಿವಾಪರಾಧ ಕ್ಷಮಾಪನ ಸ್ತೋತ್ರ' ಚಿಕ್ಕ ಪ್ರಕಟನೆಯಿಂದ ವಿಧಿತವಾಗುತ್ತದೆ. ಇದು ಸಂಸ್ಕೃತ ಮೂಲ ಶಬ್ದಶಃ ಅನುವಾದವಾಗಿರದಿದ್ದರೂ ಭಾವಾನುವಾದವಾಗಿರುವುದರಲ್ಲಿ ಸಂಶಯವಿಲ್ಲ. ಇದಕ್ಕೆ ಕೃತಿ ಆರಂಭದಲ್ಲಿ ಶರೀಫ್ ಶಂಕರಾಚಾರ್ಯರ ಸ್ತುತಿ ಮಾಡಿರುವುದೇ ಸಾಕ್ಷಿ.

ಶರೀಫ್ ಕಾಲಜ್ಞಾನಗಳು ಮೂರು. ದುರ್ಮುಖಿ ಸಂವತ್ಸರದಲ್ಲಿ ಚಂದ್ರಧರನ ಕೋಪದಿಂದಾಗಿ ಭೂಮಿಯ ಮೇಲೆ ಜರುಗಬಹುದಾದ ಕೊಲೆ, ಸುಲಿಗೆ, ಭೀಕರ ಬರಗಾಲ, ಮಾರಿಕಾಬೇನೆ ಇತ್ಯಾದಿಯಿಂದಾಗಿ ಜನ ಅನುಭವಿಸುವ ದುಃಖ-ನಷ್ಟಗಳನ್ನು, 'ಬಂದಿತು ಬರಬಹುದು ಇದು ದುರ್ಮುಖಿ ಸಂವತ್ಸರಕೆ' (೨೭೩:೨೫೩) ಕಾಲಜ್ಞಾನದಲ್ಲಿ; ಜನತೆಯ ಪಾಪಕರ್ಮಗಳಿಂದಾಗಿ ಕುಪಿತಗೊಳ್ಳುವ ಭೂದೇವಿ ಪ್ಲೇಗ್ ಮುಂತಾದ ಸಾಂಕ್ರಾಮಿಕ ರೋಗಗಳಿಂದ ಮಾರಣ-ಹೋಮ ನಡೆಸುವುದನ್ನು 'ಶ್ರೀಗುರುವರನ ಚರಣ ಕಮಲವ ಪಿಡಿದು' (೨೭೪:೨೫೪) ಕಾಲಜ್ಞಾನದಲ್ಲಿ ಹಾಗೂ ೧೮೫೭ರಲ್ಲಿ ಜರುಗಬಹುದಾದ ಸಿಪಾಯಿ ದಂಗೆಯ ಸುಳುವು 'ಜಿಟ್ಟಿ ಹುಳಗಳು ಎದ್ದಾವು ಇದು ನೋಡು' (೨೭೫:೨೫೬) ಕಾಲಜ್ಞಾನದಲ್ಲಿ ನೀಡಿದ್ದಾರೆ. ಶರೀಫ್ ಕಾಲಜ್ಞಾನದ ವೈಶಿಷ್ಟ್ಯವೆಂದರೆ ಮುಂದೊದಗಲಿರುವ ಅನಿಷ್ಟಗಳ ಸುಳುವು ನೀಡುವುದರೊಂದಿಗೆ ಅವುಗಳಿಂದ ಮುಕ್ತರಾಗಲು ಪರಿಹಾರೋಪಾಯಗಳನ್ನು ಸೂಚಿಸುವುದು ಶರೀಫ್‌ರಿಗಿರಬಹುದಾದ ಮಾನವ ಕಲ್ಯಾಣದ ಕಾಳಜಿ ವ್ಯಕ್ತಪಡಿಸುತ್ತದೆ.

೪) **ಲಾವಣಿ** : 'ಲವಣ' (ಉಪ್ಪು)ದಿಂದ ಲಾವಣಿ ಉತ್ಪತ್ತಿಗೊಂಡಿದೆಯೆಂದು ಒಂದು ನಂಬಿಗೆಯಾದರೆ, 'ಲಾವಣ್ಯ'ದಿಂದ ಲಾವಣಿ ಹುಟ್ಟಿಕೊಂಡಿತೆಂದು ಮತ್ತೊಂದು ತಿಳಿವಳಿಕೆಯಾಗಿದೆ. ಲಾವಣಿ ಮೊದಲು ಹೆಣ್ಣಿನ ಲಾವಣ್ಯ ವರ್ಣಿಸುವುದಕ್ಕೆ ಸೀಮಿತಗೊಂಡರೂ ಕಾಲಾಂತರ ಗಂಡಿನ 'ಶೌರ್ಯ-ಸಾಹಸಗಳಲ್ಲದೆ ಮಾನವನ ದುಃಖ-ದುಮ್ಮಾನ, ಭಕ್ತಿ-ಭಾವಗಳನ್ನು ಪ್ರಕಟಿಸುವ ಸಾಧನವಾಯಿತು. ಪೌರಾಣಿಕ,

ತತ್ವ-ವೇದಾಂತಿಕ, ಚಾರಿತ್ರಿಕ, ಸಾಮಾಜಿಕ ಹಾಗೂ ಕಲ್ಗಿ-ತುರಾ ಎಂದು ಲಾವಣಿ ಪ್ರಕಾರಗಳನ್ನು ಗುರುತಿಸಬಹುದು.

ಲಾವಣಿ ಸಾಹಿತ್ಯದಲ್ಲಿಯೂ ಕೃಷಿ ಮಾಡಿ ಖ್ಯಾತಿಸಿದ ಶರೀಫ್ ಕೃತ ಲಭ್ಯವಿರುವ ಲಾವಣಿಗಳು ಹನ್ನೊಂದು. ಅವುಗಳನ್ನು ವಿಶ್ಲೇಷಣಾರ್ಥದಲ್ಲಿ ಮೂರು ವಿಧವಾಗಿ ವಿಂಗಡಿಸಬಹುದು: ತತ್ವ-ವೇದಾಂತಿಕ, ಸಾಮಾಜಿಕ ಹಾಗೂ ಚಾರಿತ್ರಿಕ.

ಮಡದಿಯ ಸಾವಿನಿಂದಾಗಿ ವೇದಾಂತದೆಡೆಗೆ ತಿರುಗುವ ಶರೀಫ್ 'ನಾರಿಯರ ವಿಸ್ತರಿಸಿ ಸಾರಶಾಸ್ತ್ರ ಪೂರವಿಸಿ' (೨೭೬:೨೬೧) ಲಾವಣಿಯಲ್ಲಿ ಪುರುಷರು ನಾರಿಯರ ಬಾಹ್ಯ ರೂಪಕ್ಕೆ ಮರುಳಾಗಿ ನಿತ್ಯ ಸುಖದಿಂದ ವಿಮುಖರಾಗುವ ಬಗ್ಗೆ ಹಳಹಳಿಸಿದರೆ, 'ಕಾಮ ಇಲ್ಲದ ಮುಂಚೆ' (೨೭೭:೨೬೩) ಲಾವಣಿಯಲ್ಲಿ ಕಾಮದ ಮೂಲವನ್ನು 'ಗಿರಿಜಾ ಕಲ್ಯಾಣ'ಕ್ಕೆ ಆರೋಪಿಸುತ್ತ ಪರಮಾರ್ಥ ಪಥದಲ್ಲಿ ಅಡ್ಡಿಯುಂಟು ಮಾಡಬಹುದಾದ ಕಾಮದ ಬಗ್ಗೆ ಎಚ್ಚರಿಸಿದ್ದಾರೆ. ಇದೇ ನೀತಿಯನ್ನು 'ಸಾಂಬಗ ಸಾಕ್ಷಾತ್ ಅಂಬ ಕೇಳತಾಳು' (೨೮೦:೨೭೪) ಲಾವಣಿಯಲ್ಲಿಯೂ ಶರೀಫ್ ವಿಶದೀಕರಿಸುತ್ತಾರೆ. 'ಚಂದದಿ ಕೇಳಿದರ ವಿಸ್ತಾರ, ವೇದಾಂತದ ಸಾರ' (೨೭೯:೨೭೦) ಲಾವಣಿಯಲ್ಲಿ ಜೀವ - ಜಗತ್ತುಗಳ ಉಗಮ ಕಂಡು ಹಿಡಿದು ಅವುಗಳೊಡನೆ ದೇವರ ಅವಿನಾಭಾವ ಸಂಬಂಧವನ್ನು ಗುರುತಿಸುತ್ತಾರೆ. 'ಕೋಶ ಗ್ರಂಥ ವ್ಯಾಕರಣ ಪ್ರಸಂಗದಿ' (೨೭೮:೨೬೬) ಲಾವಣಿಯಲ್ಲಿ ವೇದಾಂತ ಓದುವುದಕ್ಕೆ ಮಾತ್ರವಲ್ಲ ಅನುಸರಿಸುವುದಕ್ಕೂ ಇದೆ ಎಂಬುದನ್ನು ಹಲವಾರು ದೃಷ್ಟಾಂತಗಳ ಮೂಲಕ ಶರೀಫ್ ವಿವರಿಸಿ ಢಾಂಬಿಕ ವೇದಾಂತಿಗಳ ಹೂರಣವನ್ನು ಬಯಲಿಗೆಳೆಯುತ್ತಾರೆ.

'ತೊಗಲಮಲಿಯನ ಹಾಲು ಕುಡಿದು ದೊಡ್ಡವರಾಗಿ ಶೀಲ ಮಾಡತಿರ ನಾಡೆಲ್ಲ' (೨೮೧:೨೭೬) ಲಾವಣಿಯಲ್ಲಿ ಕುಲಬೇಧ ಹಾಗೂ ಜಾತೀಯತೆ 'ದೇವರಾಟ ಕಣಗಂಡೆ ಸಂಶಿಯೊಳು' (೨೮೨:೨೭೮) ಲಾವಣಿಯಲ್ಲಿ ವಂಚನ ಪ್ರವೃತಿ, ನೋಡಿರಿ ಗಾಂಜಿ ಯಮಕಿನ' (೨೮೪:೨೮೫) ಲಾವಣಿಯಲ್ಲಿ ಮಾದಕ ಪೇಯಸೇವನೆ ಖಂಡಿಸುವ ಮೂಲಕ ಶರೀಫ್ ಸರಿಸಮಾನತೆ, ನಿರ್ವಂಚನೆ ಹಾಗೂ ದುಶ್ಚಟರಹಿತ ಸದ್ಗುಣಗಳಿಂದ ಕೂಡಿದ ಅರೋಗ್ಯಕರ ಸಮಾಜದ ಕನಸನ್ನು ಕಾಣುತ್ತಾರೆ.

'ಕಲ್ಯಾಣ ನಗರದ ಎಲ್ಲ ಗಣಂಗಳು' (೨೮೫:೨೮೭) ಹಾಗೂ 'ಕಲ್ಯಾಣ ನಗರದಲ್ಲಿ ಅಲ್ಲಮ ಪ್ರಭುವಿನ' (೨೮೬:೨೮೮) ಚಾರಿತ್ರಿಕ ಲಾವಣಿಗಳಲ್ಲಿ ಬಸವಾದಿ ಫ್ರಮಥರ ಕಾರ್ಯಚಟುವಟಿಕೆಗಳ ಮಹಿಮೆ ಶರೀಫ್ ವಿವರಿಸುತ್ತಾರೆ.

(೫) **ಹೋಳೀಪದ:** ಗಿರಿಜಾ ಕಲ್ಯಾಣಕ್ಕಾಗಿ ದೇವತೆಗಳ ಆಗ್ರಹದ ಮೇರೆಗೆ ಶಿವನ ತಪಸ್ಸು ಭಂಗಮಾಡಲೆಳಸಿದ ಕಾಮ ಆತನ ಉರಿಗಣ್ಣಿಗೆ ತುತ್ತಾಗುವ ಪುರಾಣ ಕಥೆಯೇ ಹೋಳಿ ಹಬ್ಬದ ಹಿನ್ನೆಲೆ. ಪಾಲ್ಗುಣಮಾಸದಲ್ಲಿ ಬರುವ ಹುಣ್ಣಿಮೆಗೆ ಹೋಳಿ ಹುಣ್ಣಿಮೆ ಇಲ್ಲವೆ ಕಾಮನ ಹಬ್ಬ ಎಂದು ಕರೆದು ಅಂದು ಕಾಮ-ರತಿದೇವಿಯರ ಮೂರ್ತಿ ಪ್ರತಿಷ್ಠಾಪಿಸಿ, ಪೂಜಿಸಿ ಉದಯವಾಗುವುದರೊಳಗೆ ಕಾಮನನ್ನು ಸುಟ್ಟು ಓಕುಳಿಯಾಡುವದಲ್ಲದೆ ಕಾಮ-ರತಿದೇವಿಯರ ಅಂದ-ಚಂದ, ಮಧುರ ದಾಂಪತ್ಯ ವರ್ಣಿಸುವ ತ್ರಿಪದಿಗಳಲ್ಲದೆ ರಾಮಾಯಣ-ಮಹಾಭಾರತ ಕುರಿತು ರಚಿತವಾದ ಕಥನಗೀತೆಗಳನ್ನು ಹಾಡುವುದು ಕೇಳಿಬರುತ್ತದೆ.

ಗ್ರಾಮೀಣ ಪ್ರದೇಶದಲ್ಲಿ ಇನ್ನೂ ಹೆಚ್ಚು ಪ್ರಚಾರದಲ್ಲಿರುವ ಹೋಳಿಹಬ್ಬದಿಂದ ಶರೀಫ್ ಆಕರ್ಷಿತರಾಗಿ ಹೋಳಿ ಸಾಹಿತ್ಯ ಸೃಷ್ಟಿಸುತ್ತಾರೆ. ಈವರೆಗೂ ಶರೀಫ್ ವಿರಚಿತ ಎರಡು ಹೋಳಿಪದಗಳು ಲಭ್ಯವಿದ್ದು ಅವು ದೀರ್ಘವಾಗಿರುವುದೊಂದು ವಿಶೇಷ. ಪರಶಿವ ಮಾರ್ತಂಡಭೈರವ ರೂಪುಧಾರಣ ಮಾಡಿ ಭುವನದಲ್ಲಿ ದುಷ್ಟಗುಣಗಳಿಂದ ಬೀಗುತ್ತಿದ್ದ ಮಣಿ-ಮಲ್ಲಾಸುರರನ್ನು ಸಂಹರಿಸಿ ಭಕ್ತರ ಕೃತಜ್ಞತೆಗೆ ಪಾತ್ರನಾದುದನ್ನು 'ಮೈಲಾರಲಿಂಗನ ಹೋಳಿಪದ' (೨೮೭:೫೭)ದಲ್ಲಿ ವರ್ಣಿಸಿದರೆ, ಭಾರತ ಯುದ್ಧದಲ್ಲಿ ದಿಗ್ವಿಜಯ ಸಾಧಿಸಿದ ನಂತರ ರಾಜಸೂಯಯಾಗ ಕೈಕೊಂಡ ಧರ್ಮರಾಜನ ಕುದುರೆಯನ್ನು ಕಟ್ಟಿ ಪಾರ್ಥನೊಡನೆ ಯುದ್ಧಕ್ಕೆಳಸಿ ಸೋಲಿಸಿದ ಪ್ರಮಿಳೆಯೊಡನೆ ಪಾರ್ಥ ವಿವಾಹವಾಗುವುದನ್ನು 'ಪ್ರಮೀಳೆಯ ಹೋಳಿಪದ'ದಲ್ಲಿ (೨೮೮:೩೯೨) ಕಾಣಬಹುದಾಗಿದೆ.

(೬) **ಮಂಗಳಾರತಿ :** ಸರ್ವಧರ್ಮ ತತ್ವಗಳ ಸಮನ್ವಯಕ್ಕೆ ಪರಿಶ್ರಮಿಸಿದ ಶರೀಫ್ ಸರ್ವಧರ್ಮಗಳ ಅಧಿದೇವದೇವತೆಗಳನ್ನು ಸ್ತುತಿಸಲು ಮಂಗಳಾರತಿ ರಚಿಸುವ ಮೂಲಕ ಸರ್ವರಿಗೂ ಮಂಗಳ ಬಯಸುತ್ತಾರೆ. ಈವರೆಗೂ ಶರೀಫ್ ವಿರಚಿತ ಹತ್ತೊಂಬತ್ತು ಮಂಗಳಾರತಿಗಳು ಲಭ್ಯವಿದ್ದು, ಅವುಗಳನ್ನು ದೇವ-ದೇವತೆಗಳ ಸ್ತುತಿ, ಸಾಧು-ಸತ್ಪುರುಷರ ಸ್ತುತಿ ಹಾಗೂ ಯೋಗದ ಸ್ಥಿತಿ-ಗತಿ ವಿವರಿಸುವ ಮಂಗಳಾರತಿಗಳೆಂದು ವಿಂಗಡಿಸಿ ಅಧ್ಯಯನಕ್ಕೊಳಪಡಿಸಬಹುದು. ಶರೀಫ್ ಮಂಗಳಾರತಿಗಳಲ್ಲೆಲ್ಲ:

''ಅಂಬಾಗಾರತಿಯನ್ನು
ರಂಭೆಯರುಬೆಳಗಿರೆ
ಶುಂಭ-ನಿಶುಂಭರ ಸಂಹಾರಿಗೆ ಶಂಕರಿಗೆ.....''

(೫೭:೩೩೧)

ಹೆಚ್ಚು ಪ್ರಚಾರದಲ್ಲಿರುವ ಮಂಗಳಾರತಿ. ಇದನ್ನು ಮಹಾನವಮಿಯ ಸಂದರ್ಭದಂದು ನಾಡಿನಾದ್ಯಂತ ಹಾಡದ ಭಾವುಕರಿಲ್ಲ.

ಶರೀಫ್ ಮಂಗಳಾರತಿ ಪದಗಳಲ್ಲಿ ಧಾರ್ಮಿಕ ಪ್ರಶ್ನೆ, ಸಮದೃಷ್ಟಿ, ಯೋಗದ ಮೆರಗು ಎದ್ದು ಕಾಣುವುದರಿಂದ ಅವು ಭಾವುಕರ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದೆ.

(೭) **ರಿವಾಯತ್ :** ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಪ್ರಚಲಿತವಿರುವ ಮುಸಲ್ಮಾನ ಸಂಪ್ರದಾಯದ ಮನರಂಜನಾ ಕಲೆ ರಿವಾಯತ್. 'ರಿವಾಜು' ಇದರಿಂದ ಮೂಡಿ ಬಂದಿರಬೇಕು. ರಿವಾಜು ಎಂದರೆ ರೂಢಿ ಅಥವಾ ಸಂಪ್ರದಾಯವೆಂದು ಅರ್ಥೈಸಲಾಗುತ್ತದೆ. ಹಿಂದಿ ಅಥವಾ ಉರ್ದುವಿನ ಖವ್ವಾಲಿ ರಿವಾಯತ್ ರಚನೆಗೆ ಸ್ಫೂರ್ತಿಯಾಗಿರಬೇಕು. ಎರಡು ಗುಂಪುಗಳ ನಡುವೆ ನಡೆಯುವ ಸವಾಲ್-ಜವಾಬ್ ಹಾಡಿನ ಸ್ಪರ್ಧೆಯೇ ರಿವಾಯತ್ ಸಾಹಿತ್ಯ ರಚನೆಗೆ ಮೂಲ. ಇವುಗಳಿಗೆ 'ಕರ್ಬಲಾ ಹಾಡು' ಇಲ್ಲವೆ 'ಮೊಹರಮ್ ಪದ' ಗಳೆಂತಲೂ ಕರೆಯಲಾಗುತ್ತದೆ.

ಈ ಮೊದಲೇ ಹೇಳಿದಂತೆ ಶರೀಫ್ ತಾರುಣ್ಯದಲ್ಲಿ ಜನಪದ ಕವಿಯಾಗಿ ಗುರುತಿಸಿಕೊಂಡುದು ರಿವಾಯತ್ ರಚನೆಗಳಿಂದಲೇ. ಮೊಹರಮ್ ಸಂದರ್ಭದಲ್ಲಿ ತಲೆಯೆತ್ತುತ್ತಿದ್ದ ಹೆಜ್ಜೆಮೇಳಗಳಿಗೆ ರಿವಾಯತ್ ರಚಿಸಿಕೊಡುವ ಮೂಲಕ ಕನ್ನಡದಲ್ಲಿ ರಿವಾಯತ್ ಸಾಹಿತ್ಯದ ಹರಿಕಾರರಾದರು. ಈವರೆಗೂ ಒಂದುನೂರ ಹನ್ನೆರಡು ಶರೀಫ್ ರಿವಾಯತ್ ರಚನೆಗಳು ಲಭ್ಯವಿದ್ದು ಅವುಗಳನ್ನು ವಿಶಾಲಾರ್ಥದಲ್ಲಿ ಕಾಳಗ ಪದ - ಧಾರ್ಮಿಕ - ನೀತಿ ಪದ ಹಾಗೂ ಸಾಮಾಜಿಕ-ಘಟನಾತ್ಮಕ ಪದಗಳೆಂದು ವಿಂಗಡಿಸಬಹುದಾಗಿದೆ. ವಿಕೃತ

ಮೊಹರಮ್ ಆಚರಣೆಯ ಖಂಡನೆ ಹಾಗೂ ಭಾರತೀಯ ಸಂಪ್ರದಾಯದಲ್ಲಿ ಮೊಹರಮ್ ಘಟನೆಗಳನ್ನರಸುವುದು ಶರೀಫ್ ರಿವಾಯತ್ ಪದಗಳ ವೈಶಿಷ್ಟ್ಯ.

ಒಟ್ಟಿನಲ್ಲಿ ಶರೀಫ್ ತತ್ವಪದಗಳನ್ನೇ ಹಾಡಲಿ, ದಂಡಕಗಳನ್ನೇ ಹೇಳಲಿ, ಕಾಲಜ್ಞಾನಗಳನ್ನೇ ನುಡಿಯಲಿ, ಲಾವಣಿ ಹೋಳೀ ಪದಗಳನ್ನೇ ಹಾಡಲಿ, ಮಂಗಳಾರತಿಗಳನ್ನೇ ರಚಿಸಲಿ, ರಿವಾಯತ್‌ಪದಗಳನ್ನೇ ಹೇಳಲಿ- ಇವುಗಳಲ್ಲೆಲ್ಲ ಭಕ್ತಿತತ್ವ ಸರ್ವಸಾಮಾನ್ಯವಾಗಿರುವುದು ಕಂಡು ಬರುತ್ತದೆ. ಕಾರಣ, ಶರೀಫ್ ಪ್ರಥಮತಃ ದೇವಭಕ್ತರು. ಭಕ್ತಿಯಿಂದಲೇ ಮುಕ್ತಿಯೆಂದು ನೆರೆನಂಬಿ ಅದರಂತೆ ನಡೆದು ಪ್ರಾತಃಸ್ಮರಣೀಯರಾದರು.

ಸ್ಥಳನಾಮ:

ಜನಬಳಕೆಯ ಶಬ್ದಗಳನ್ನೇ ತಮ್ಮ ಕಾವ್ಯದಲ್ಲಿ ಸೂರೆಗೈದು ಜನಪ್ರಿಯ ಕವಿಯೆನಿಸಿದ ಶರೀಫ್, ತಮ್ಮ ಕಾವ್ಯದಲ್ಲಿ ಬರುವ ಹಲವಾರು ಸ್ಥಳನಾಮಗಳ ಉಲ್ಲೇಖದಿಂದಲೂ ಕನ್ನಡ ಕಾವ್ಯ ಲೋಕದಲ್ಲಿ ವಿಶಿಷ್ಟ ಕವಿಯೆನಿಸಿದ್ದಾರೆ. ಶರೀಫ್ ಕಾವ್ಯದಲ್ಲಿ ಸ್ಥಳನಾಮ ಎಷ್ಟೊಂದು ಹಾಸುಹೊಕ್ಕಾಗಿದೆಯೆಂದರೆ, ಬಸವಣ್ಣ 'ಕೂಡಲ ಸಂಗಮದೇವ' ಕಾವ್ಯನಾಮವಿಟ್ಟುಕೊಂಡಂತೆ ಶರೀಫ್ 'ಶಿಶುನಾಳಧೀಶ' ಕಾವ್ಯನಾಮವಿಟ್ಟುಕೊಂಡಿರುವುದೇ ಸಾಕ್ಷಿ. 'ಶಿಶುನಾಳಧೀಶ' ಶಿಶುನಾಳ ಪ್ರದೇಶದ ಆರಾಧ್ಯದೈವವಾದರೂ ಅದರಲ್ಲಿ ದೈವವಾಚಕಕ್ಕಿಂತ ಸ್ಥಳವಾಚಕ ಅಂಶಗಳೇ ಹೆಚ್ಚಾಗಿರುವುದರಿಂದ ಪ್ರಾದೇಶಿಕ ಅಭಿಮಾನ ಹಾಗೂ ಮಣ್ಣಿನ ವಾಸನೆ ಶರೀಫ್ ಕಾವ್ಯದ ವಿಶೇಷ ಗುಣವಾಗಿದೆ.

ಶಿಶುನಾಳ, ಶರೀಫ್ ಕಾರ್ಯಕ್ಷೇತ್ರವಾದರೂ ಲೋಕ ಶಿಕ್ಷಕರಾದ ಶರೀಫ್ ಪ್ರಭುದೇವರಂತೆ ಒಂದೆಡೆ ಸ್ಥಾಯಿಯಾಗಿ ನಿಲ್ಲದೆ ನಾಡಿನಲ್ಲಿ ಉಪಲಬ್ಧವಿರುವ ಪುಣ್ಯ ಕ್ಷೇತ್ರಗಳನ್ನು, ಪ್ರಚಾರದಲ್ಲಿರುವ ಸಾಧು-ಸತ್ಪುರುಷರನ್ನು ಸಂದರ್ಶಿಸಿ ಅವರ ವಿಶೇಷ ಗುಣಗಳನ್ನು ಕೊಂಡಾಡುವುದಲ್ಲದೆ ಸಮಾಜದ ಜನತೆಯ ಆಚಾರ-ವಿಚಾರಗಳಲ್ಲಿ ಕಂಡು ಬರುವ ಲೋಪದೋಷಗಳನ್ನು ತಿದ್ದಿ ಸನ್ಮಾರ್ಗದಲ್ಲಿ ಹಚ್ಚಿದುದಕ್ಕೆ ಅವರ ಕಾವ್ಯದಲ್ಲಿ ಬರುವ ಹಲವಾರು ಸ್ಥಳನಾಮಗಳೇ ಸಾಕ್ಷಿ. ಉದಾ-ಅಂಕಲಗಿ (೩೫:೨೪), ಅತ್ತಿಗೇರಿ (೨೬೯:೨೩೭), ಉಳವಿ (೧೪೨:೧೨೯), ಎಳುಕೊಳ್ಳ (೨೯:೨೫), ಕರಡೀಗುಡ್ಡ (೧೮೯:೧೭೦) , ಕಳಸ (೧೨೫:೧೧೩), ಕಾರಡಗಿ (೨೬೪:೨೨೭), ಕುಂದಗೋಳ (೧೫೫:೧೩೯),ಗುಡಗೇರಿ-ಗುಡಿಪುರ (೨೦೨:೧೭೯), ಪಶುಪತಿಹಾಳ (೨೨೪:೧೯೫) ಬಸನಾಳ (೧೩೩:೧೨೩), ಬೂದಿಹಾಳ (೧೪೪:೧೩೧), ಮಂಡಿಗನಾಳ (೩೪೪:೩೬೩), ಮೈಲಾರ (೯:೮) ಲಕ್ಷೇಶ್ವರ-ಲಕ್ಷೀಪುರ (೨೫೬:೨೨೧)ಸಂಶಿ (೨೮೨:೨೭೮),ಹಂಪಿ (೧೨೮:೧೨೦), ಹುಬ್ಬಳ್ಳಿ (೧೯೬:೧೭೫) ಹುಲಗೂರ (೬:೬)ಇತ್ಯಾದಿ.

ಭಾಷೆಯ ಬಳಕೆ

'ಸಾಹಿತ್ಯ ಜೀವನದ ಪಡಿನೆಳಲು' ಎಂಬುದು ಸಾಹಿತ್ಯ ಪ್ರಪಂಚದಲ್ಲಿ ಪ್ರಚಾರದಲ್ಲಿರುವ ಮಾತು. ಸಮಾಜದ ಆಗುಹೋಗುಗಳಿಂದ ಪ್ರಭಾವಿತನಾಗುವ ಸಾಹಿತಿ ಸಮಾಜದಲ್ಲಿ ಉಪಲಬ್ಧವಿರುವ ಭಾಷೆಯ ನುಡಿಗಟ್ಟು, ಪಡೆನುಡಿ ಹಾಗೂ ಗಾದೆಗಳಿಂದ ಸಾಹಿತ್ಯ ನಿರ್ಮಿಸುತ್ತಲೇ ಅದರ ಮೇಲೆ ತನ್ನ ಛಾಪು ಹಾಕುತ್ತಾನೆನ್ನುವ ಮಾತು ಶರೀಫ್ ಕೃತಿಗಳಿಗೂ ಅನ್ವಯಿಸುತ್ತದೆ.

ನುಡಿಗಟ್ಟು : ಶರೀಫ್ ತಮ್ಮ ಕಾವ್ಯದಲ್ಲಿ ಹಲವಾರು ನುಡಿಗಟ್ಟುಗಳನ್ನು ಬಳಸಿದ್ದಾರೆ. ಉದಾಹರಣೆಗೆ, ತಾಯಿಗಂಡ (೮೨:೭೬) ಬೆದಗಡಕಿ (೧೧೩:೧೦೪), ನಡುಮರಕಿ (೧೧೪:೧೦೪)ಕಿಟ್ಟದಗೊಂಬಿ (೧೬೫:೧೪೭), ರಂಡಿಗೊಳು (೨೪೦:೨೦೭) ಇತ್ಯಾದಿ. ಇಲ್ಲಿ ಉದ್ಧೃತವಾದ ಒಂದೊಂದು ನುಡಿಗಟ್ಟುವಿನಲ್ಲಿ ಒಂದೊಂದು ವಿಶಿಷ್ಟಾರ್ಥ ಸ್ಫುಟಗೊಳ್ಳುವುದನ್ನು ಗಮನಿಸಬಹುದು. 'ತಾಯಿಗಂಡ' ಅನೈತಿಕ ಸಂಬಂಧ, 'ಬೆದಗಡಕಿ', 'ನಡಮುರಕಿ' - ಹಾದರ, 'ಕಿಟ್ಟದಗೊಂಬಿ'-ಸೌಂದರ್ಯ, ರಂಡಿಗೂಳು- ಅಸಹಾಯಕರ ಸಂಪಾದನೆ ಬಲಿಷ್ಟರು ಕಬಳಿಸುವುದನ್ನು ವ್ಯಂಜಿಸುತ್ತದೆ.

ಇದೇ ಸಂದರ್ಭದಲ್ಲಿ ಶರೀಫ್ ಕಾವ್ಯದಲ್ಲಿ ವಿಶೇಷವೆನ್ನಬಹುದಾದ ಚಿತ್ರಮಾಲಿಕೆಯೊಂದರ ಬಗ್ಗೆಯೂ ಹೇಳದಿರಲಾಗದು. ಕನ್ನಡ ಕವಿಗಳು ಹೆಣ್ಣಿನ ಸರ್ವಾಂಗಗಳನ್ನು ಬಣ್ಣಿಸುವ, ಅದರಲ್ಲಿಯೂ, ಆಕೆಯ ಗುಪ್ತಾಂಗ ವರ್ಣಿಸುವುದರಲ್ಲಿ ಚಪಲತನ ತೋರಿಸಿದ್ದುಂಟು. ಇದಕ್ಕೆ ಅಪವಾದವೆನ್ನುವಂತೆ, ಮಹದೇವಿಯಕ್ಕ ಅದರ ಬಗ್ಗೆ ತಾತ್ಸಾರ ಭಾವ ಕೆರಳಿಸಿ ವಿರಕ್ತಿಯನ್ನು ಕುದುರಿಸಬಲ್ಲ ಸಶಕ್ತ ಚಿತ್ರ (ಉದಾ-ಮೂತ್ರವು ಬಿಂದು ಒಸರ ನಾಳ-೧೧೧) ತನ್ನ ವಚನದಲ್ಲಿ ರೇಖಿಸಿದಂತೆ 'ಹೊಲಿಮನಿ' (೨೧೯:೧೯೨) 'ಹಾಳುಗುಂಡಿ' (೨೭೬:೨೬೧) ಇತ್ಯಾದಿ ಶರೀಫ್ ನುಡಿಚಿತ್ರಗಳು ಕಾಮಕ್ಕೆ ಬದಲಾಗಿ ವಿರಕ್ತಿ ಹುಟ್ಟಿಸಲು ಪ್ರೇರಕವಾಗುತ್ತವೆಂಬುದರಲ್ಲಿ ಸಂದೇಹವಿಲ್ಲ.

ಪಡೆನುಡಿ: ಶರೀಫ್ ಬಳಕೆಗನ್ನಡದ ಬನಿಯೂ ಗಮನಾರ್ಹವಾಗಿದೆ. ಕನ್ನಡದಲ್ಲಿ ಬಳಕೆಯಿರುವ ಅನೇಕ

ಪಡೆನುಡಿಗಳು ಅವರ ಕಾವ್ಯದಲ್ಲಿ ಅಡಕವಾಗಿವೆ. ಉದಾಹರಣೆಗೆ, 'ಸಂತ್ಯಾಗ ಮಂದಿ ಕಾಣದವಳು' (೧೪೪:೧೦೪) ಬೊಗಳುವ ನಾಯಿ' (೨೭೮:೨೦೭) ಇತ್ಯಾದಿ ಪಡೆನುಡಿಗಳು, ಕ್ರಮವಾಗಿ ಸಾರ್ವಜನಿಕ ಸಂಪರ್ಕ ಕಡಿದುಕೊಂಡುದರ, ವ್ಯರ್ಥಾಲಾಪನೆ ವ್ಯಂಜಿಸುತ್ತವೆ.

ಗಾದೆ: ಗಾದೆಯಂತಹ ಮಾತುಗಳು ಶರೀಫ್ ಕಾವ್ಯದಲ್ಲಿ ಸೇರಿಕೊಂಡು ಕಾವ್ಯದ ಅಭಿವ್ಯಕ್ತಿಗೆ ಮಿಂಚನ್ನು, ಮೊನಚನ್ನು ಒದಗಿಸಿಕೊಟ್ಟಿರುವುದೊಂದು ವಿಶೇಷ. ಉದಾಹರಣೆಗೆ, 'ಮಣಕ ಎಮ್ಮೆ ಕೋಣನೀದ್ಹಾಂಗ' (೧೩೩:೧೦೩)-ನಿರಾಸೆ, 'ಏಸೂರು ತಿರಿಗಿದರೂ ಬೀಸೋಣ ಬಿಡದವ್ವ' (೧೬೮:೧೫೦) ವಿಧಿಕೃತ ಕರ್ಮ, 'ಅಳಿವುದು ಕಾಯ ಉಳಿವುದು ಕೀರ್ತಿ' (೨೩೯:೨೧೫) - ಸಾವು ನಿಶ್ಚಿತವಾದರೂ ಕೀರ್ತಿ ಅಮರವೆಂಬುದನ್ನು ವ್ಯಂಜಿಸುತ್ತದೆ. ಇಂತಹ ಗಾದೆಮಾತುಗಳು ಶರೀಫರ ಶಕ್ತಿಯುತ ಭಾಷೆಯ ಸಂಪನ್ಮೂಲವಾಗಿವೆ. ಆಶಯದ ಆವಿಷ್ಕಾರದಲ್ಲಿ ಜೀವಾಳದ ಪಾತ್ರ ವಹಿಸಿವೆ. ಅವರ ಅನುಭವ ವೈವಿಧ್ಯ ಶ್ರೀಮಂತಿಕೆಗೆ ಸಾಕ್ಷಿಭೂತವೂ ಆಗಿವೆ. ಹೀಗೆ ಕನ್ನಡದ ವಿವಿಧ ಬಗೆಯ ಸಹಜ ಸಂಪತ್ತನ್ನು ಬಳಸಿಕೊಳ್ಳುವುದರೊಂದಿಗೆ ಅದರ ಸಿರಿ ಹೆಚ್ಚಿಸಲು ಶರೀಫ್ ಶ್ರಮಿಸಿದ್ದಾರೆ.

ಅಲಂಕಾರ:

ಅಲಂಕಾರಗಳ ಸೊಬಗು ಶರೀಫರಿಗೆ ಅಪರಿಚಿತವೇನಲ್ಲ. ಆದರೆ ಪಾಂಡಿತ್ಯ ಪ್ರದರ್ಶನಕ್ಕಾಗಿ ಅವರು ಅಲಂಕಾರಗಳನ್ನು ಬಳಸಲಿಲ್ಲ. ಬದಲಾಗಿ ಹದವರಿತು ಔಚಿತ್ಯಪೂರ್ಣವಾದ ಅಲಂಕಾರಗಳನ್ನು ಅವರು ಬಳಸಿದರು. ಉಪಮೆ, ರೂಪಕ ದೃಷ್ಟಾಂತ ಅವರ ಕಾವ್ಯದಲ್ಲಿ ಹಾಸು ಹೊಕ್ಕಾಗಿವೆ.

ಉಪಮೆ : ಶರೀಫ್ ತಮ್ಮ ಕಾವ್ಯದಲ್ಲಿ ಹಲವಾರು ಉಪಮೆಗಳನ್ನು ಬಳಸಿದ್ದಾರೆ. ಉದಾಹರಣೆಗೆ:

''ನಾಯಿ ಬಂದಾವ್ರೋ ಬೆನ್ನತ್ತಿ ನಾರಾಯಣ
ನಾಯಿಯೆಂದರೆ ನಾಯಿಯಲ್ಲ
ಮನುಜ ಜನ್ಮದ ಹೀನದ ನಾಯಿ
ಜ್ಞಾನಾನಂದವ ತಿಳಿಯದ
ಶ್ವಾನಾನಂದದೊಳು ಕೂಡಿರಲು....'' (೨೫೪:೨೨೦)

ನಾಯಿ ಸರ್ವಸಾಮಾನ್ಯವಾಗಿ ನಂಬಿಗೆಯ ಪ್ರಾಣಿಯೆಂಬ ಖ್ಯಾತಿಗೆ ಪಾತ್ರವಾಗಿದೆ. ಆದರೆ ಶರೀಫ್ ಅಭಿವ್ಯಕ್ತಿಯಲ್ಲಿ ಅದು ನಿರುದ್ದೇಶ, ಚಂಚಲತೆ ಹಾಗೂ ಅಲೆಮಾರಿತನದ ಹೀನ ಗುಣಗಳನ್ನು ಸಂಕೇತಿಸುವುದಲ್ಲದೆ ಇವುಗಳನ್ನು ಮನುಷ್ಯರಲ್ಲಿ ಕಾಣುವುದು ಶರೀಫ್ ಕಾವ್ಯದ ವೈಶಿಷ್ಟ್ಯ. ನಾಯಿಯಂತೆ ಅರಗಿಳಿ (೯೯:೯೩), ನೊಣ (೯೯:೯೩), ಬೆಳವ (೨೬೦:೨೨೫), ಚೇಳು (೨೬೬:೨೨೯) ಹಾವು (೨೬೪:೨೭೭) ಕಪ್ಪೆ (೨೬೩:೨೨೭), ತಿಗಣೆ (೨೬೭:೨೩೦), ಇತ್ಯಾದಿ ಕ್ರಿಮಿಕೀಟಗಳಿಗೆ ಸಂಬಂಧಿಸಿದ ಉಪಮೆಗಳನ್ನು ಶರೀಫ್ ಸಂದರ್ಭಕ್ಕೆ ತಕ್ಕಂತೆ ಬಳಸಿ ಅವುಗಳ ಗುಣ-ಸ್ವಭಾವ ಮನುಷ್ಯರಿಗೆ ಆರೋಪಿಸಿದ್ದಾರೆ.

ರೂಪಕ : ಶರೀಫ್ ತಮ್ಮ ಕಾವ್ಯದಲ್ಲಿ ಬಳಸಿದ ಉಪಮೆಗಳಂತೆ ರೂಪಕಗಳೂ ನಮ್ಮ ಗಮನ ಸೆಳೆಯುತ್ತವೆಂಬುದನ್ನು ಕೆಳಗಿನ ಪದ್ಯದಿಂದಮನಗಾಣಬಹುದು.

''ಸೋರುತಿಹುದು ಮನೆಯ ಮಾಳಿಗೆ ಅಜ್ಞಾನದಿಂದ
ಸೋರುತಿಹುದು ಮನೆಯ ಮಾಳಿಗೆ
ಸೋರುತಿಹುದು ಮನೆಯ ಮಾಳಿಗೆ
ದಾರುಗಟ್ಟಿ ಮಾಳ್ಪಿರಿಲ್ಲ

ಕಾಳಕತ್ತಲೆಯೊಳಗೆನಾನು
ಮೇಲಕೇರಿ ಮೆಟ್ಟಲಾರೆ
ಮುರುಕು ತೊಲೆಯು ಹುಳಕ ಜಂತಿ
ಕೊರೆದು ಸರಿದು ಕೀಲ ಸಡಲಿ
ಹರಕ ಜಪ್ತ ರಜೀರಗಿಂಡಿ
ಮೇಲಕೇರಿ ಮೆಟ್ಟಲಾರೆ...'' (೨೦೫:೧೮೧)

ಶರೀಫ್ ಇಲ್ಲಿ ಮನೆಯನ್ನು ಮನಕ್ಕೆ ಹೋಲಿಸಿದ್ದಾರೆ. ಮುರುಕು, ತೊಲಿ, ಹುಳುಕು ಜಂತಿ ಮೊದಲಾದವುಗಳೆಲ್ಲ ಇಂದ್ರಿಯಗಳಾಗಿರಬೇಕು. ಇಂದ್ರಿಯಗಳನ್ನು ಅಂಕಿತದೊಳಗಿಡುವುದು ಮನದ ಕೆಲಸ. ಹಾಗೆ ಇಟ್ಟಾಗಲೇ ಮನೆಯ ಮಾಳಿಗೆ ಭದ್ರವಾಗುತ್ತದೆ. ಇಡಿಯ ಹಾಡು ಹೀಗೆ ಬಾಹ್ಯ ಹಾಗೂ ಆಂತರಿಕ ಅರ್ಥವನ್ನು ಒಳಗೊಂಡು ರೂಪಕದಲ್ಲಿ ರೂಪಗೊಂಡಿದೆ. ಶರೀಫ್ ರೂಪಕಶಕ್ತಿಗೆ ಇದೊಂದು ಉತ್ತಮ ಉದಾಹರಣೆ. ಎಲ್ಲರ ಗಮನಕ್ಕೂ ಬಾರದ ಸಂಗತಿಯೊಂದನ್ನು ಅನುಭಾವದ ಬೆಳಕಿನಲ್ಲಿ ಎತ್ತಿ ತೋರುವ ಶಕ್ತಿ ಶರೀಫರಿಗೆ ಕರತಲಾಮಲಕವಾಗಿರುವುದೊಂದು ವಿಶೇಷ.

ದೃಷ್ಟಾಂತ : ಉಪಮೆಗಳಂತೆ ಶರೀಫ್ ತಮ್ಮ ಅನುಭವದ ಸಮೃದ್ಧಿಯನ್ನು ಸಾಬೀತುಪಡಿಸುವಂತೆ ಸೂರೆಗೈದಿದ್ದಾರೆ. ದೃಷ್ಟಾಂತಗಳು ಶರೀಫ್ ಕಾವ್ಯದ ಸಹಜ ಉಸಿರಾಗಿವೆ. ಅವು ಹಲವೆಡೆ ಸಹಜವೂ, ಮನೋಜ್ಞವೂ ಆಗಿವೆಯೆಂಬುದನ್ನು ಅವರದೇ ಒಂದು ಹಾಡಿನಿಂದ ಉದಾಹರಿಸಬಹುದು.

''ಬಲು ನಾತ ಬಲು ನಾತ ಮನ
ಮಲಿನ ತೊಳೆಯದಿರೆ ಹೊಲಸಾಯ್ತುವ್ವ
ನಾಯಿಸತ್ತು ಕೊಳೆತರೆ ನಾತಲ್ಲ

ಕಾಯಿಕೆಟ್ಟು ಹುಳತರೆ ನಾತಲ್ಲ
ಮಂಗಳಾತ್ಮಕ ಗುರು ಗೋವಿಂದನ
ಸಂಗ ಮಾಡದಿರುವುದು ನಾತವ್ವ'' (೨೩೮:೨೦೫)

ಮೇಲಿನ ಪದ್ಯದಲ್ಲಿ ಮನದ ಮಲಿನತೆಯ ಉಗ್ರಸ್ವರೂಪವನ್ನು ಹಲವಾರು ದೃಷ್ಟಾಂತಗಳ ಮೂಲಕ ಶರೀಫ್ ಪರಿಚಯ ಮಾಡಿಕೊಡುತ್ತ ಅದರ ಕಾರಣ ಹಾಗೂ ದೂರಗಾಮಿ ಪರಿಣಾಮದ ಸುಳವು ನೀಡಿದ್ದಾರೆ. ನಾಯಿ ಸತ್ತು ಕೊಳೆತರೆ, ಕಾಯಿ ಕೆಟ್ಟು ಹುಳತರೆ ನಾತಲ್ಲ. ಆದರೆ, ಗುರುವಿನ ಸಂಗ ಮಾಡದಿರುವುದು 'ಬಲು ನಾತ್' ಎಂಬ ಶರೀಫ್ ಹೇಳಿಕೆ ಆಶ್ಚರ್ಯ ಹುಟ್ಟಿಸುತ್ತದೆ! ವಿಚಾರ ಮಾಡಿ ನೋಡಿದರೆ ಅವರ ಹೇಳಿಕೆಯಲ್ಲಿ ಹುರುಳಿದೆ ಎಂದು ಅನಿಸುತ್ತದೆ. ಕೊಳೆತ ನಾಯಿ ಶವ ಹಾಗೂ ಹುಳಿತ ಕಾಯಿಯ ದುರ್ಗಂಧ ಸೀಮಿತ ಪ್ರದೇಶಕ್ಕೆ ಹರಡಿ ಪರಿಸರ ಮಾಲಿನ್ಯವನ್ನುಂಟು ಮಾಡಬಹುದಾದರೆ, ಗುರುವಿನ ನಿಸ್ಸಂಗದಿಂದುಂಟಾಗುವ ಮನದ ಮೈಲಿಗೆಯ ದುರ್ಗಂಧ ಸೀಮಾತೀತವಾದುದೆಂದು ಹೇಳಿ ವ್ಯಕ್ತಿಯ ಅಂತರಂಗ ಹಾಗೂ ಬಹಿರಂಗ ಶುದ್ಧಿ ಹಾಗೂ ಸಿದ್ಧಿ ಸಾಧನೆಯಲ್ಲಿ ಗುರುವಿನ ಸತ್ಸಂಗ ಹಾಗೂ ಮಾರ್ಗದರ್ಶನದ ಮಹತ್ವ ಶರೀಫ್ ವಿವರಿಸಿದ್ದಾರೆ

ಪ್ರತಿಮೆ:

ಈ ಮೊದಲೇ ಹೇಳಿದಂತೆ ಬಸವಾದಿ ಪ್ರಮಥರಲ್ಲಿ ಬಸವಣ್ಣನ ಭಕ್ತಿಯ ಒಲ್ಮೆಗೆ ಹಾಗೂ ಪ್ರಭುದೇವರ ಆತ್ಮಾನುಸಂಧಾನಕ್ಕೆ ಮಾರುಹೋದುದಲ್ಲದೆ ಅವರ ಸಾಹಿತ್ಯದಿಂದಲೂ ಶರೀಫ್ ಪ್ರಭಾವಿತರಾಗಿರುವುದನ್ನು ಶರೀಫ್ ಸಾಹಿತ್ಯದಿಂದ ಮನಗಾಣಬಹುದು. ಉದಾಹರಣೆಗೆ, ಪ್ರಭುದೇವರ ಬೆಡಗಿನ ವಚನ ಹೋಲಬಹುದಾದ

ಒಂದು 'ಪ್ರತಿಮಾ ಸೃಷ್ಟಿ' ಹಾಗೂ ಜಾನಪದ ಒಗಟುಗಳ ಪಡೆಯಚ್ಚಿನಲ್ಲಿ ಅವು ರೂಪತಳೆಯುವಂತೆ ಭಾಷೆ ಬಳಸಿರುವುದನ್ನು ಶರೀಫ್ ಗೀತೆಯೊಂದರಿಂದ ಗಮನಿಸಬಹುದು.

''ಕೋಡಗನ್ನ ಕೋಳಿ ನುಂಗಿತ
ನೋಡವ್ವ ತಂಗಿ
ಅಡು ಆನೆಯ ನುಂಗಿ
ಗೋಡೆ ಸುಣ್ಣವ ನುಂಗಿ
ಆಡಲು ಬಂದ ಪಾತರದವಳ ಮದ್ದಳೆ ನುಂಗಿತ''

(೨೫೭:೨೨೩)

ಕೋಡಗ (ಮಂಗನ) ಕೋಳಿ ನುಂಗುವುದು ಹೊರನೋಟಕ್ಕೆ ವಿರೋಧಾಭಾಸ (Paradox) ವಾಗಿ ಕಂಡರೂ ಇದರಲ್ಲೇನೋ ಗೂಢವಿರಬೇಕೆನಿಸುತ್ತದೆ. ಅದೇ 'ಬೆರಗು' ಇಲ್ಲವೆ 'ಬೆಡಗು'. ಈ ಪದ್ಯವನ್ನು ಪಾರಮಾರ್ಥಿಕ ಹಿನ್ನೆಲೆಯಲ್ಲಿ ಪರಿಶೀಲಿಸಿದರೆ ಆದರ ಒಳಪದರುಗಳು ಒಂದೊಂದೇ ಬಿಚ್ಚುತ್ತ ಹೋಗಿ ತತ್ವದರ್ಶನವಾಗುತ್ತದೆ.

ಕೋಡಗ ಮನಸ್ಸಿಗೂ, ಕೋಳಿ ಸತ್ತ್ವಣವಕ್ಕೂ ಸಂಕೇತವಾಗಿ ಚಿತ್ರಣಗೊಂಡಿರುವುದನ್ನು ಮೊದಲ ಪಾದದಲ್ಲಿ ನೋಡಬಹುದಾಗಿದೆ. ಹೀಗೆ ಮನಸ್ಸನ್ನು (ಚಂಚಲ ಮನಸ್ಸು) ಸತ್ತ್ವಣವ ನುಂಗಿತೆಂದು ಶರೀಫ್ ಜೀವ (ತಂಗಿ) ಕ್ಕೆ ಅರುಹುತ್ತಾರೆ. ಮೂರನೆಯ ಪಾದದಲ್ಲಿ ಬರುವ ಆಡು ಆಧಾರ ಸ್ಥಾನದಲ್ಲಿ ಉದಯವಾದ ಪ್ರಣವಕ್ಕೂ ಹಾಗೂ ಆನೆ ಅಹಂಕಾರಕ್ಕೂ ಸಂಕೇತವಾಗಿ ಆಧಾರಸ್ಥಾನದಲ್ಲಿರುವ ಪ್ರಣವ ಅಹಂಕಾರವನ್ನು ನುಂಗಿತೆಂಬ ಅರ್ಥ ಹೊಳೆಯುತ್ತದೆ. ನಾಲ್ಕನೆಯ ಪಾದದಲ್ಲಿ ಬರುವ ಗೋಡೆ ಮೃಣ್ಮಯ ಶರೀರಕ್ಕೂ ಹಾಗೂ ಸುಣ್ಣ ಚಿನ್ಮಯತೆಗೂ ಸಂಕೇತವಾಗಿ ಮೃಣ್ಮಯ ಶರೀರವನ್ನು ಚಿನ್ಮಯತೆ ನುಂಗಿ ಶರೀರದ ಮೇಲಿನ ವ್ಯಾಮೋಹ ತೊಡೆದು ಹಾಕಿತೆಂಬುದನ್ನು

ಸೂಚಿಸುತ್ತದೆ. ಐದನೆಯ ಪಾದದಲ್ಲಿ ಬರುವ ಪಾತರದವ
ಮೋಹ-ಮಾಯೆಗಳಿಗೂ ಹಾಗೂ ಮದ್ದಳೆ ಓಂಕಾರಕ್ಕ
ಸಂಕೇತವಾಗಿರುವುದಲ್ಲದೆ ಓಂಕಾರದಿಂದಾಗಿ ಮೋಹ ಮಾಯೆಗಳನ
ಜಯಿಸಿದ ಸಂಗತಿ ಚಾಮರಸನ 'ಪ್ರಭುಲಿಂಗಲೀಲೆ'ಯ ಮಾಯ
ಕೋಲಾಹಲ ನೆನಪಿಸುತ್ತದೆ. ಹೀಗೆಯೆ ಕೆಟ್ಟದ್ದನ್ನು ಒಳ್ಳೆಯದು ನುಂ
ನೀರು ಕುಡಿಯಿತೆಂದು ಮುಂದುವರಿಯುವ ಬೆರಗಿನಮಾಲೆ.

''ಗುಡ್ಡ ಗಂವ್ಹರ ನುಂಗಿ
ಗಂವ್ಹರ ಇರಿವೆ ನುಂಗಿ
ಗುರುಗೋವಿಂದನ ಪಾದ ಆತ್ಮ ನುಂಗಿತು'' (೨೫೭:೨೨೩)
ಎಂಬುದರಲ್ಲಿ ಕೊನೆಗೊಳ್ಳುತ್ತದೆ!

ಗುಡ್ಡ ದೇಹ ಇಲ್ಲವೆ ದೇಹಗುಣಗಳಿಗೂ ಹಾಗೂ ಗಂವ್ಹ
ಅಂತ:ಶಕ್ತಿಗೂ ಸಂಕೇತವಾಗಿ, ಅಂತಃಶಕ್ತಿ ದೇಹಗುಣಗಳನ್ನು ನುಂ
ಇಲ್ಲದಂತೆ ಮಾಡುವುದನ್ನು ಸೂಚಿಸಿದರೆ; ಈ ಅಂತಃಶಕ್ತಿಯನ್ನು ಜ್ಞಾ
(ಇರಿವೆ) ನುಂಗಿ ನೀರುಕುಡಿಯುವ ಮೂಲಕ ಎಲ್ಲವನ್
ಜ್ಞಾನಮಯವಾಗಿ ಮಾಡಿಬಿಡಬಹುದು. ಗುರುಗೋವಿಂದನ ಪಾದ ಆತ್
ನುಂಗಿತ' ಎನ್ನುವ ಕೊನೆಯ ಸಾಲು ಗುರುಬೋಧೆಯಿಂದಾಗಿ ಅಂತರಂ
ಶುದ್ಧಿ ಹಾಗೂ ಸಿದ್ಧಿಯಾದುದನ್ನು ಹಾಗೂ ಆ ಮೂಲಕ ಆತ್ಮ-
ಪರಮಾತ್ಮರ ಸಮ್ಮಿಲನವಾದುದನ್ನು ಶರೀಫ್ ಜೀವಕ್ಕೆ ಅರುಹುವ
ಮೂಲಕ ಇತರರಿಗೆ ಮಾರ್ಗದರ್ಶಿಯಾಗಿ ನಿಲ್ಲುತ್ತಾರೆ.

ಪ್ರತೀಕ:

ಪ್ರತಿಮೆಯ ಪ್ರಮುಖ ಲಕ್ಷಣ ಏಕಾರ್ಥ ಸೂಚಕವಾದರೆ,
'ಪ್ರತೀಕ'ದಲ್ಲಿ ಕನಿಷ್ಟಪಕ್ಷ ಎರಡು ಅರ್ಥಗಳಾದರೂ ಇದ್ದೇ ಇರುತ್ತವೆ.
ಒಂದು ವಸ್ತುವಿನ ಯಾವುದಾದರೊಂದು ಸ್ತರದ ಅರ್ಥದ ಮೂಲಕ
ಸಮಾನರೂಪದ ಅನ್ಯವಸ್ತು ವಿಷಯಗಳನ್ನು ಪ್ರತಿನಿಧಿಸುವಂತಹ

ಾವಿಷ್ಕರಣವೇ ಪ್ರತೀಕ. ಈ ಹಿಂದೆ ಪರಿಶೀಲಿಸಲಾದ ಪ್ರತಿಮಾ ಸೃಷ್ಟಿಯ ಂಗವಾಗಿ ವಿವೇಚಿತವಾದ ಕೆಲವು 'ಪ್ರತಿಮೆ'ಗಳು ಒಂದು ದೃಷ್ಟಿಯಿಂದ ಪ್ರತೀಕಗಳೂ ಆಗಿವೆ. ಏಕೆಂದರೆ ಅಲ್ಲಿ ಉಧೃತವಾದ ಪದ್ಯದಲ್ಲಿ ಗಟುಗಳ ನೆಲೆಯಲ್ಲಿ ಒಂದು ಅರ್ಥವನ್ನು ಪ್ರಕಟಿಸಿದರೆ, ಪ್ರತಿಮಾ ೂಪದಲ್ಲಿ ಇನ್ನೊಂದು ಅರ್ಥವನ್ನು ಹೊಳೆಯಿಸುತ್ತವೆ.

ಸರ್ವತ್ವತಂತ್ರವಾಗಿ ಪ್ರತೀಕವೆಂದು ಪರಿಗಣಿಸಬಹುದಾದ ಶರೀಫ್ ಪದ್ಯವೊಂದನ್ನು ಇದೀಗ ಪರಿಶೀಲಿಸಲಾಗುತ್ತದೆ.

''ಬಟ್ಟಿ ಕಟ್ಟಿಸಿದಿ ರುದ್ರವ್ವ ನಿನ್ನ
ಹೊಟ್ಟೆಯ ಕೂಸಿಗಿನ್ನೆಷ್ಟು ಪದ್ರವ್ವ
ಹೊಕ್ಕಳ ಕೆಳಗೆ ಐತೆವ್ವ ಎರಡು
ಪಕ್ಕಡಿ ಎಲುಬಿನೊಳು ಮನಿ ಮಾಡೇತೆವ್ವ
ಕುಕ್ಕಿ ಕಾಳಜಕ್ಕೇರಿತೆವ್ವ ಅದನ
ತಿಕ್ಕಿ ನಿಲ್ಲಸ ನನ್ನ ತಾಯವ್ವ
ಕುಂಡಲಿ ಕೆಳಗೆ ಐತೆವ್ವ ನಡು ಮಲ
ಕುಂಡದೊಳು ತಾ ಮನಿ ಮಾಡೇತೆವ್ವ

ಕಸವನು ಕಳದಿಟ್ಟೆವ್ವ
ಹೇಸಿ ವಿಷಯದ ರೋಗಕೌಷಧ ಕೊಟ್ಟೆವ್ವ
ಮುಸುಕು ಮುಟ್ಟದೆ ಮುಟ್ಟಿದೆವ್ವ
ದೇವ ಶಿಶುನಾಳಧೀಶಗ ಹಸನಾಯಿತವ್ವ''

(೧೫೨:೧೩೬-೧೩೭)

ಶರೀಫರಿಗೆ ಬಟ್ಟಿ (ಹೊಟ್ಟೆನೋವು) ಆದಾಗ ಓರ್ವ ರುದ್ರವ್ವ ಎನ್ನುವ ಹೆಣ್ಣುಮಗಳು ತಿಕ್ಕಿ ನಿಲ್ಲಿಸಿದಳೆಂಬುದು ಈ ಹಾಡಿನ ವಾಚ್ಯಾರ್ಥವಾದರೂ ಪಾರಮಾರ್ಥಿಕವಲ್ಲಿ ಅದಕ್ಕೆ ಬೇರೊಂದು ಅರ್ಥವುಂಟು. 'ರುದ್ರವ್ವ' ಎನ್ನುವದು ಇಲ್ಲಿ ರುದ್ರಶಕ್ತಿ, ಶಿವಶಕ್ತಿ

ಇಲ್ಲವೆ ಶಿವನ ಹೆಂಡತಿಯ ಪ್ರತೀಕವಾಗಿ ಶಿವಶಕ್ತಿಯ ಅರಿವನ್ನುಂಟು ಮಾಡಿಕೊಡುತ್ತದೆ.

ಬಟ್ಟೆಯಿಂದಾಗುವ ಭೌತಿಕ ನೋವನ್ನು ಅಧೋಮುಖದಲ್ಲಿರುವ ಕುಂಡಲಿಗೆ ಹೋಲಿಸುತ್ತ ಶಿವಶಕ್ತಿಯಿಂದ ಅದು ಜಾಗೃತಗೊಂಡು ಊರ್ಧ್ವಮುಖದತ್ತ ಸಾಗುವ ಮೂಲಕ ವಿಷಯರೋಗದಿಂದ ಮುಕ್ತರಾದುದು ಶರೀಫರಿಗೆ ಸಮಾಧಾನ ನೀಡಿತೆಂದು ಹಾಗೂ ಬ್ರಹ್ಮರಂಧ್ರವನ್ನು ರುದ್ರವ್ವ ಮುಟ್ಟದೆ ತಾವು ಆಕೆಯಿಂದ ಅನುಗ್ರಹಿತರಾದೆವೆಂದು ಶರೀಫ್ ಹೇಳುವದು ವೀರಶೈವದ ಶಕ್ತಿ ವಿವಿಷ್ಟಾದ್ವೈತ ತತ್ವದ ಹಿರಿಮೆ ಅರಹುತ್ತದೆ.

ಒಟ್ಟಿನಲ್ಲಿ ಶರೀಫ್ ಭಾವ-ಭಾಷೆಗಳು ಹಸನಾಗಿವೆ. ಜೊತೆಗೆ ಹಗುರಾಗಿವೆ. ಹೀಗಾಗಿ ಜನ ಸಾಮಾನ್ಯರ ಮನದಲ್ಲಿ ಅವರು ವರಕವಿಗಳಾಗಿ ಪ್ರತಿಷ್ಠಾಪನೆಗೊಂಡು ಸೇವಿಸಲ್ಪಡುತ್ತಿದ್ದಾರೆ. ಹಾಡುಗಳನ್ನು ಜಾನಪದ ರೀತಿಯ ರಾಗ-ತಾಳದಲ್ಲಿ ಹೊಂದಿಸಿ ಬರೆದಿದ್ದಾರೆ. ಪ್ರಚಲಿತವಿರುವ ಜಾನಪದ ಸಾಹಿತ್ಯಕ್ಕೆ ಅಂದರೆ, ಲಾವಣಿ, ಕಾಲಜ್ಞಾನ, ಹೋಳಿಪದ, ರಿವಾಯತ್-ವೈವಿಧ್ಯಗಳಿಗೆ ತಕ್ಕಂತೆ ಹೊಂದಾಣಿಕೆ ಮಾಡಿಕೊಂಡು ಕಾವ್ಯ ರಚಿಸಿದ್ದಾರೆ. ಆದಾಗ್ಯೂ ಕೆಲವೊಂದು ಕಥನ ಕವನ (ಉದಾ-ಹೋಳೀ ಪದಗಳು) ಹಾಗೂ ಸ್ತುತಿ ಪದಗಳಲ್ಲಿ ಭಾಷೆ ಗ್ರಾಮ್ಯದಿಂದ ಶಿಷ್ಟಕ್ಕೆ ಒಲಿಯುವುದನ್ನು ನೋಡುತ್ತೇವೆ. ವಸ್ತು ಜಾನಪದ ಜೀವನದ್ದೇ ಇದ್ದಾಗ ಮಾತ್ರ ಹೀಗಾಗುವುದು ತೀರ ವಿರಳ.

ಶರೀಫ್ ಜೀವನದ ಎಲ್ಲ ರಂಗಗಳಲ್ಲಿಯೂ ಅಲೆದಾಡಿ ಅನುಭವ ಪಡೆದಿದ್ದಾರೆ. ಆ ಅಲೌಕಿಕ ಪರಿಜ್ಞಾನದ ಕಣಜವನ್ನೇ ತಮ್ಮ ಗೀತೆಗಳಲ್ಲಿ ತುಂಬಿದ್ದಾರೆ. ಜೀವನದ ನಿತ್ಯನೋಟ-ನಿಲುವುಗಳನ್ನೇ ವಸ್ತುವಾಗಿ

ಆರಿಸಿಕೊಂಡು, ಅವುಗಳಲ್ಲಿ ಸಾಮಾಜಿಕ ರೀತಿ-ನೀತಿ, ಹಾವ - ಭಾವ, ಬೆಡಗು-ಬಿನ್ನಾಣಗಳನ್ನು ಒಪ್ಪಿಟ್ಟು ಭಕ್ತಿರಸದೊಂದಿಗೆ ಮೇಳವಿಸಿ ಹಾಡಿದ್ದಾರೆ. ಬೀಳುವ ಮುದುಕಿ, ಉಡಿಯಕ್ಕಿ ಹಾಕಿಕೊಂಡು ಗಂಡನ ಮನೆಗೆ ಹೊರಟ ಹೆಣ್ಣುಮಗಳು, ಸೇದುವ ಚಿಲುಮೆ, ತಿಪ್ಪಿ ಕೆದರುವ ಕೋಳಿ, ಕೆರೆಯೊಳಗಿನ ಕಪ್ಪೆ, ಕುಹೂ ಕುಹೂ ಉಲಿಯುವ ಬೆಳವ, ಹಾರುವ ಪಾರಿವಾಳ, ಬೊಗಳುವ ನಾಯಿ, ಜೀಕುವ ಜೋಕಾಲಿ, ಎಳೆಯುವ ತೇರು ಮುಂತಾದ ದಿನನಿತ್ಯದ ಪ್ರಪಂಚದಲ್ಲಿ ಕಾಣಬರುವ ವಿಷಯಗಳನ್ನೆತ್ತಿಕೊಂಡು ಅವುಗಳಲ್ಲಿ ಆತ್ಮಾನುಸಂಧಾನದ ಸಂಪತ್ತನ್ನು ತುಂಬಿ ಸೂರೆಗೊಂಡಿದ್ದಾರೆ. ತಮ್ಮ ಸುತ್ತಮುತ್ತಲಿನ ಸಮಾಜದ ರೀತಿ ನಡತೆಗಳನ್ನು ಭಯಭೀತಿಯಿಲ್ಲದೆ ನುಡಿಯಬೇಕಾದ ಕಠೋರ ಸತ್ಯದಲ್ಲಿ ನುಡಿದು ಈ ಸಮಾಜದಲ್ಲಿ ಹೇಗಿರಬೇಕೆಂಬುದು ನೀತಿ ಪಾಠಗಳನ್ನು 'ನಡೆ ನುಡಿಯಿಂದ ನಾವು ನಡೆಯಬೇಕಣ್ಣ' (೨೪೩:೨೦೮) ಹಾಡಿನ ಮುಖಾಂತರ ತಿಳಿಹೇಳಿ ಸನ್ಮಾರ್ಗದಲ್ಲಿ ನಡೆಯಲು ಜನತೆಗೆ ಕರೆಕೊಟ್ಟಿದ್ದಾರೆ.

ಅಧ್ಯಾಯ ೫

ವ್ಯಕ್ತಿತ್ವ

ಶರೀಫ್‌ರನ್ನು ಖುದ್ದಾಗಿ ನೋಡಿದವರ ಪ್ರಕಾರ ಅವರು ಒಳ್ಳೆಯ ಸುಂದರ ಪ್ರತಿಮೆಯಂತಹ ದೇಹಾಕರ ಹೊಂದಿದವರಾಗಿದ್ದರು. ಮೈಬಣ್ಣ ತಾಮ್ರಗೆಂಪು. ದುಂಡು ಗೋಲಾಕಾರದ ಮುಖ, ನೀಳವಾದ ತಕ್ಕ ಮೂಗು, ಅಗಲ ಕಿವಿ, ದೊಡ್ಡ ಕಣ್ಣು, ವಿಶಾಲವಾದ ಹಣೆಯಿಂದ ಕೂಡಿ ಸದ್ಭಾವನೆ ಪ್ರೇರೇಪಿಸುವ ಒಳ್ಳೆ ಆಕರ್ಷಕ ವ್ಯಕ್ತಿತ್ವ ಹೊಂದಿದವರಾಗಿದ್ದರು. ತುದಿಕಾಲ್ಬೆರಳು ಮುಚ್ಚುವಂತೆ ನಿರಿಗೆ ಹೊಯ್ದು ದಡಿಧೋತರವನ್ನು ಉಡುತ್ತಿದ್ದರು. ಬಿಳಿ ಬಗಲಕಸಿ ಅಂಗಿಯನ್ನು ಅಚ್ಚುಕಟ್ಟಾಗಿ ಧರಿಸುತ್ತಿದ್ದರು. ತಲೆಯ ಮೇಲೆ ಬಿಳಿಯ

ರುಮಾಲು; ಅದನ್ನು ದುಂಡು ದುಂಡಾಕಾರವಾಗಿ ಮುಂಡಾಸದಂತೆ ಸುತ್ತುತ್ತಿದ್ದರು. ಕೊರಳಿಗೆ ಚಕ್ರಾಕಾರವಾಗಿ ಉಪ್ಪುರಣೆ ಹೊರುತ್ತಿದ್ದರು. ಅವರ ಉಡುಗೆ ಒಳ್ಳೇ ಅಚ್ಚುಕಟ್ಟಾಗಿಯೂ ಓರಣವಾಗಿಯೂ ಇರುತ್ತಿದ್ದವು. ಇಸ್ಲಾಂ ಪದ್ಧತಿಯಂತೆ ಗಡ್ಡ ಬೆಳೆಸದಿದ್ದರೂ ಮೇಲಿಂದ ಮೇಲೆ ಕ್ಷೌರ ಮಾಡಿ ಕೊಳ್ಳುತ್ತಿರಲಿಲ್ಲವಾದುದರಿಂದ ಅವರ ಮುಖದ ತುಂಬೆಲ್ಲ ಗಡ್ಡ ಬೆಳೆದಿರುತ್ತಿತ್ತು. ಕಾಲಲ್ಲಿ ಮೊಚ್ಚೆ ಧರಿಸುತ್ತಿದ್ದ ಶರೀಫ್, ತಮ್ಮ ವೇಷಭೂಷಣದಿಂದಾಗಿ ಹತ್ತೊಂಬತ್ತನೆಯ ಶತಮಾನದ ಶಾಲಾಮಾಸ್ತರರಂತೆ ಕಾಣುತ್ತಿದ್ದರು. ಮಾಂಸಾಹಾರ ವರ್ಜ್ಯವಾದರೂ ಮಾದಕಪೇಯ ಹಾಗೂ ಬಂಗಿ-ತಂಬಾಕ ಸೇವನೆಯಿಂದಾಗಿ ಸಾರ್ವಜನಿಕ ಸಭೆ-ಸಮಾರಂಭಗಳಲ್ಲಿ ಉಪಸ್ಥಿತರಿರುವುದಕ್ಕೆ ಅವರಿಗೆ ಅಡ್ಡಿಪಡಿಸಲಾಗುತ್ತಿತ್ತು. ಕೆಲವರು ಇವರ ಮೇಲೆ ಇಲ್ಲ ಸಲ್ಲದ ಅಪವಾದ ಹೊರಿಸಿ ಅನಂತರ ಪಶ್ಚಾತ್ತಾಪ ಹೊಂದಿ ಶರೀಫ್‌ರಿಗೆ ಶರಣಾಗತರಾದುದೂ ಉಂಟು. ಸಾಮಾನ್ಯರು ಅವರನ್ನು ಒಳ್ಳೆ ಭಯ ಭಕ್ತಿಯಿಂದ ಕಾಣುತ್ತಿದ್ದರು. ಧ್ಯಾನನಿಷ್ಠ ಸಮಯದಲ್ಲಿ, ತೂರ್ಯ ಸ್ಥಿತಿಯಲ್ಲಿ ತಮಗೆಲ್ಲ ಶಾಪ ಕೊಟ್ಟುಬಿಡುವರೆಂದು ಅಂಜಿ ಅವರ ಸಮೀಪಕ್ಕೆ ಯಾರೂ ಸುಳಿಯುತ್ತಿರಲಿಲ್ಲ. ವಿಶೇಷವಾಗಿ ಯಾರ ಮನೆ-ಮಠಗಳಿಗೆ ಹೋಗಿ ಉಳಿದುಕೊಳ್ಳುತ್ತಿರಲಿಲ್ಲ. ಬಹುತರ ಹಾಳು ದೇವಾಲಯ, ಸಾರ್ವಜನಿಕ ಗುಡಿ-ಗುಂಡಾರಗಳೇ ಅವರ ಆವಾಸಸ್ಥಾನಗಳಾಗಿರುತ್ತಿದ್ದವು. ತಮ್ಮ ಜೀವನದ ಉತ್ತರಾರ್ಧದಲ್ಲಿ ಶರೀಫ್ ದೇವೋನ್ಮಾದದ ಪೂರ್ಣ ನಿಬ್ಬೆರಗಿನಲ್ಲಿರುತ್ತಿದ್ದರು. ಆಗ ಶರೀರದ ಮೇಲಿನ ಸ್ಮೃತಿ-ಪ್ರಜ್ಞೆ-ಪರಿವೆ ಅವರಿಗೆ ಇರುತ್ತಿರಲಿಲ್ಲ.

ಶರೀಫ್ ವ್ಯಕ್ತಿತ್ವ ಅಸಾಧಾರಣ. ಅದರ ವಿಶ್ಲೇಷಣೆ ಮತ್ತು ನಿರೂಪಣೆ ವಾಣಿಗೆ ನಿಲುಕದ ವಿಷಯ. ಈಗಾಗಲೇ ವಿವರಿಸಿದಂತೆ

ಶರೀಫ್ ದೇವಭಕ್ತರು ಸಂತರು, ತತ್ವ-ಜ್ಞಾನಿಗಳು, ಅನುಭಾವಿಕವಿಗಳು ಸಮಾಜ ಸುಧಾರಕರು, ವಿಚಾರವಾದಿಗಳು. ಇವುಗಳೆಲ್ಲವೂ ಅವರ ಭಕ್ತಿಸ್ವರೂಪಕ್ಕೆ ಪೂರಕ ಅಂಶಗಳು.

ಈ ಹಿಂದೆ ಹೇಳಿದಂತೆ ಶರೀಫ್ ಪ್ರಥಮತಃ ದೇವಭಕ್ತರು ಭಕ್ತಿಸಾಧನೆಯೇ ಅವರ ಜೀವನದ ಏಕಮಾತ್ರ ಉದ್ದೇಶವಾಗಿತ್ತು ಯಾವ ಮತ, ಪಂಥ, ಪಂಗಡಗಳಿಗೆ ಸೇರದೆ ಎಲ್ಲಾ ಧರ್ಮಗಳಲ್ಲಿ ನಿರೂಪಿತವಾದ ಬ್ರಹ್ಮತತ್ವದ ಸಾರವನ್ನು ಅವರು ಸ್ವೀಕರಿಸಿ ಅದನ್ನು ಪ್ರೇಮಸಾಧನೆಗೆ ಹೊಂದಿಸಿಕೊಂಡು ಭಕ್ತಿ ಸಾಧನೆಯ ಪಥದಲ್ಲಿ ಮುಂದುವರಿದು ಪರಮಾರ್ಥವನ್ನು ಸಾಧಿಸಿದರು.

ಶರೀಫ್ ಕಾವ್ಯಕ್ಕಾಗಿ ಕಾವ್ಯ ರಚಿಸಿದವರಲ್ಲ. ಕಾವ್ಯ ರಚನೆಯೊಂದು ಭಕ್ತಿ ಸಾಧನೆಯ ಮಾಧ್ಯಮವೆಂದು ಮಾತ್ರ ಅವರು ಬಗೆದಿದ್ದರು. ಅವರು ಸತ್ಯಾನ್ವೇಕರಾಗಿದ್ದರು. ಅಂತೆಯೆ, ಅವರ ಮಾತಿನಲ್ಲಿ, ಭಾವಾಭಿವ್ಯಕ್ತಿಯಲ್ಲಿ ಸಹಜ ಕಾವ್ಯ ಚಮತ್ಕಾರ ಸಾಂದರ್ಯಗಳನ್ನು ಕಾಣಬಹುದಾಗಿದೆ. ಅಲಂಕಾರಗಳು, ಪ್ರತಿಮೆ ಪ್ರತೀಕಗಳು ಆಕೃತ್ರಿಮ ರೀತಿಯಲ್ಲಿ ಅವರ ಕೃತಿಗಳಲ್ಲಿ ಅಡಕವಾಗಿವೆ.

ಶರೀಫ್ ಮುಖ್ಯವಾಗಿ ವ್ಯಷ್ಟಿಸಾಧಕರಾಗಿದ್ದರು. ಆದರೆ ಸಮಾಜವನ್ನು ತೂರೆದು ಕಾಡು ಸೇರಿ ತಪಸ್ಸು ಮಾಡಲೆಳಸುವ ಸನ್ಯಾಸಿಗಳಾಗಿದ್ದಿಲ್ಲ . ತಮ್ಮ ಸುತ್ತಮುತ್ತಲಿರುವವರ ಜೀವನದ ಅಂಕು-ಡೊಂಕುಗಳನ್ನು ಕಂಡು ವ್ಯಥೆಪಟ್ಟರು. ಅನೀತಿ ಮೋಸ,ವಂಚನೆ, ಅಂಧಶ್ರದ್ದೆ ಬಾಹ್ಯಾಡಂಬರ ಇತ್ಯಾದಿಗಳನ್ನು ಕಂಡು ಕಟುವಾಗಿ ಪ್ರತಿಭಟಿಸಿದರು. ಅಸತ್ಯ ಆನ್ಯಾಯಗಳನ್ನು ಯಾವ ದಯೆ ದಾಕ್ಷಿಣ್ಯವಿಲ್ಲದೆ ಖಂಡಿಸಿದರೂ ಅವರದು ಕರುಣಾಮಯ ಹೃದಯ ಚಿನ್ಮಯ ಸ್ವರೂಪನಾದ ಪರಮಾತ್ಮನನ್ನು ಹೃದಯದೊಳಗೆ ಕಂಡು

ಅನುಭವಿಸುವ ಆನಂದವನ್ನು ತಾವು ಅನುಭವಿಸಿ ಇತರರಿಗೆ ಅದನ್ನು ನೀಡುವುದಕ್ಕೆ ಸತತವಾಗಿ ಪ್ರಯತ್ನಿಸಿದರು. ಇದಕ್ಕೆ ಮಾನಸಿಕ ನಿರ್ಮಲತೆ,ನಿರ್ಮಲ ಆಚಾರ, ಆದರ್ಶಪ್ರಾಯವಾದ ಸರಳ ಮತ್ತು ಪವಿತ್ರ ಜೀವನ ನಡೆಸುವ ಅವಶ್ಯಕತೆಯಿದೆ ಎಂದರು . ಉಚ್ಚ-ನೀಚ, ಜಾತಿ-ಮತ-ಪಂಥ-ಕುಲ-ಗೋತ್ರ, ಇತ್ಯಾದಿ ಎಲ್ಲಾ ಬೇಧ-ಭಾವಗಳನ್ನು ತ್ಯಜಿಸಿ ಸಮಾಜವಾದದ ಶ್ರೇಷ್ಠತತ್ವಗಳನ್ನು ಅನುಷ್ಠಾನಕ್ಕೆ ತಂದರು. ಮಾನವ ಜೀವನದ ಹಿರಿಮೆಯನ್ನು ಹಾಡಿ ಉತ್ಸಾಹ ಸ್ಫೂರ್ತಿಯ ಜ್ಯೋತಿಯನ್ನು ಬೆಳಗಿ ಸರ್ವರಿಗೆ ಮಂಗಳ ಬಯಸಿದರು.

ಶರೀಫ್ ಮಾರ್ಗದರ್ಶನದಿಂದ ಮಾನವ ಜನಾಂಗ ಅವರಿಗೆ ಋಣಿಯಾಗಿದೆ. ಇದಕ್ಕೆ ಅವರ ತತ್ವಗಳೇ ಕಾರಣ. ಅವು ಅಂದಿಗಿಂತ ಇಂದು ಹೆಚ್ಚು ಅರ್ಥಪೂರ್ಣವಾಗಿವೆ. ಮಾನವರೆಲ್ಲ ಒಂದು, ಮಾನವ ಸಮಾಜಕ್ಕೆ ಭೋದ ಒಂದೇ, ಬ್ರಹ್ಮನಾದ ಒಂದೇ ಶಿಶುನಾಳಧೀಶ (ಸೃಷ್ಟಿಕರ್ತ)ನ ಭಾಷೆಯೊಂದೇ; ದೇವಲೋಕ-ಜೀವಲೋಕಗಳೆರಡು ಆದರೆ ಸಾಧನಕ್ಕೆ ಜೀವಲೋಕ ಪ್ರಥಮ ಸೋಪಾನ ಹಾಗೂ ಆ ದಿಸೆಯಲ್ಲಿ ಭಕ್ತಿಯ ಅವಶ್ಯಕತೆ; ದೇವನೊಬ್ಬ ನಾಮ ಹಲವು, ಹರಿಹರ-ಹಜರತ್ ಮಾರ್ಗಗಳೆಲ್ಲವೂ ಮಾನವನನ್ನು ದೇವನೆಡೆಗೆ ಒಯ್ಯುವ ಸಾಧನಗಳೆಂದು ನುಡಿದು ಅದರಂತೆ ನಡೆದು ತೋರಿಸಿದ ತತ್ವಗಳು ಅಂದಿಗಿಂತ ಇಂದು, ಅದರಲ್ಲಿಯೂ, ಮಾನವ ಇಂದು ಮತೀಯ ಘರ್ಷಣೆಗಳಿಂದ ಧರ್ಮದ ನಿಜವಾದ ತಿರುಳನ್ನೇ ಮರೆತಾಗ ಶರೀಫ್ ತತ್ವಗಳು ಮತ್ತಷ್ಟು ಅರ್ಥಪೂರ್ಣವಾಗಿವೆ. ಅವರ ಶಬ್ದಗಳಲ್ಲಿ ಸತ್ವವಿದೆ,ಪರಾಕ್ರಮವಿದೆ,ದೇವೋನ್ಮಾದದ ಸ್ಫೂರ್ತಿ ಇದೆ. ಪ್ರಪಂಚದಿಂದ ಪಾರಮಾರ್ಥ ಸಾಧಿಸಿದ ಪ್ರವಾದಿಯಾಗಿ ಅವರು 'ಕರ್ನಾಟಕದ ಕಬೀರ' ರೆಂದು ಖ್ಯಾತಿಗಳಿಸಿದ್ದಾರೆ.

ಸುಮಾರು ೧೫ನೆಯ ಶತಮಾನದಲ್ಲಿ ಉತ್ತ
ಹಿಂದೂಸ್ಥಾನದಲ್ಲಿ ಆಗಿ ಹೋದ ಕಬೀರ ಹಾಗೂ ೧೯ ನೆಯ
ಶತಮಾನದಲ್ಲಿ ಉತ್ತರ ಕರ್ನಾಟಕದಲ್ಲಿ ಆಗಿ ಹೋದ ಶರೀಫ್‌ನಡು
ಅನೇಕ ಸಾಮ್ಯಗಳು ಕಂಡುಬರುತ್ತವೆ. ಇಬ್ಬರೂ ಮಹಮ್ಮದೀಯ
ಮೂಲದಿಂದ ಬಂದವರು. ಇಬ್ಬರೂ ಗೃಹಸ್ಥಾಶ್ರಮದಲ್ಲಿದ್ದುಕೊಂಡೆ
ಭಕ್ತಿಯನ್ನು ಸಾಧಿಸಬಹುದೆಂದು ಹೇಳಿ ಸಾಧಿಸಿ ತೋರಿಸಿದವರು
ಇಬ್ಬರಿಗೂ ಬ್ರಾಹ್ಮಣ ಜಾತಿಗೆ ಸೇರಿದ ಗುರುಗಳು-ಶರೀಫರಿಗೆ ಕಳಸ
ಗೋವಿಂದಭಟ್ಟರು ದೊರೆತರೆ, ಕಬೀರರಿಗೆ ಕಾಶಿಯ ರಮಾನಂದರ
ದೊರೆತರು. ಇಬ್ಬರೂ ಸಮಾಜದಲ್ಲಿ ಪ್ರಚಲಿತವಿದ್ದ ಧಾರ್ಮಿಕ ದೋಷ
ಅಂಧಶ್ರದ್ಧೆ, ಗೊಡ್ಡು ಸಂಪ್ರದಾಯ, ಪೂಜಾರಿ ಪ್ರವೃತ್ತಿಯನು
ಎಷ್ಟೊಂದು ವಿರೋಧ ಬಂದರೂ ತಮ್ಮ ಧೀರೋಕ್ತಿಗಳಿಂದ ಖಂಡಿ
ಭಕ್ತಿಮಾರ್ಗವನ್ನು ಬೋಧಿಸಿದರು. ಭಕ್ತಿಯಿಂದಲೇ ಮುಕ್ತಿ ಎಂಬುದ
ಈರ್ವರ ಸಂದೇಶವಾಗಿತ್ತು. ಆ ದಿಶೆಯಲ್ಲಿ ಈರ್ವರು ನೂರಾರ
ಹಾಡುಗಳನ್ನು ರಚಿಸಿದರು. ಆದರೆ ಅವುಗಳನ್ನು ಬರೆದಿಡುವ ಗೊಡವೆ
ಹೋಗಲಿಲ್ಲ. ಸುದೈವದಿಂದ ಶರೀಫ್ ಒಡನಾಡಿ ಗುಡಗೇರಿಯ ಕುಂಬಾ
ಮುದಕಪ್ಪ ಶರೀಫ್ ಹಾಡುಗಳನ್ನು ಹಾಗೂ ಕಬೀರ ಶಿ
ಭಾಗವಾನದಾಸ ಕಬೀರ ಹಾಡುಗಳನ್ನು ಬರೆದಿಟ್ಟು ಭವಿಷ್ಯ
ಜನಾಂಗದ ಕೃತಜ್ಞತೆಗೆ ಪಾತ್ರರಾದರು. ಈರ್ವರೂ ಏಕೇಶ್ವರ ತತ್ವದ
ನಂಬಿಕೆಯಿಟ್ಟ ಕಾರಣ ದೇವನೊಬ್ಬ. ನಾಮ ಹಲವು ಎಂ
ಪ್ರತಿಪಾದಿಸಿದರು. ಹರಿ-ಹರ-ಹಜರತ್ ಮಾರ್ಗಗಳೆಲ್ಲವೂ ದೇವರನ
ಕೂಡುವ ಬಗೆಯೆಂದು ತಿಳಿಸಿ ತನ್ಮೂಲಕ ಹಿಂದ-ಮುಸ್ಲಿಂ ಸಂಸ್ಕೃತಿ
ಐಕಮತ್ಯಕ್ಕೆ ಕಾರಣಕರ್ತರಾದರು. ಆದಾಗ್ಯೂ ಅವರು ತಮ್ಮದೇ ಅ
ಯಾವುದೊಂದು 'ಪಂಥ' ನಿರ್ಮಿಸದಿದ್ದುದು ಗಮನಾರ್ಹ. ಜಾ
ಮತ, ಪಂಥ, ಉಚ್ಚ-ನೀಚ ಇವೇ ಮೊದಲಾದ ಪ್ರಶ್ನೆಗಳ

ಹುರುಳಿಲ್ಲವೆಂದು ಉಪದೇಶಿಸಿದ ಕಾರಣ ಅವರ ತತ್ವಗಳು ಸರ್ವಮತದವರಿಗೂ, ಸರ್ವಕಾಲೀನ ಜನಾಂಗಕ್ಕೂ ಗ್ರಾಹ್ಯವಾಗಿ ಅವರನ್ನು ನಿತ್ಯ ಅಮರರನ್ನಾಗಿ ಮಾಡಿವೆ.

ಈರ್ವರಲ್ಲಿ ಇಷ್ಟೊಂದು ಸಾಮ್ಯಗಳಿದ್ದರೂ, ಸೂಕ್ಷ್ಮವಾಗಿ ಗಮನಿಸಿದರೆ, ಅವರಲ್ಲಿ ಕೆಲವೊಂದು ಮತಬೇಧಗಳಿದ್ದುದು ಕಂಡುಬರುತ್ತದೆ. ಶರೀಫ್ ಕಾಲ(೧೮೮೯:೧೮೮೯)ವನ್ನು ನಿಖರವಾಗಿ ಹೇಳಬಹುದಾದರೆ, ಕಬೀರರ ಕಾಲ ನಿಖರವಾಗಿ ಹೇಳಲು ಬರುವಂತಿಲ್ಲ. ಚರಿತ್ರೆಕಾರರು ಕಬೀರ ಕಾಲವನ್ನು ಹದಿನಾಲ್ಕನೆಯ ಶತಮಾನದ ಉತ್ತರಾರ್ಧದಿಂದ ಹದಿಮೂರನೆಯ ಶತಮಾನದ ಪೂರ್ವಾರ್ಧದವರಿಗೆ ಹರಡಿದ್ದಾರೆ. ಶರೀಫ್ ಕನ್ನಡ, ಉರ್ದು, ತೆಲಗು, ಮರಾಠಿ, ಭಾಷೆಗಳಲ್ಲಿ ವೈವಿಧ್ಯಮಯ ಕಾವ್ಯ ರಚಿಸಿದರೆ ಕಬೀರ ಕೇವಲ ಹಿಂದಿಯೊಂದರಲ್ಲಿಯೇ ವೈವಿಧ್ಯಮಯ ಕಾವ್ಯ ರಚಿಸಿದರು. ಪಂಚಾಕ್ಷರಿ-ಷಡಕ್ಷರಿ ಮಂತ್ರದ ಸಹಾಯದಿಂದ ಭವಸಾಗರ ದಾಟಬಹುದೆಂದು ಶರೀಫ್ ಉಪದೇಶಿಸಿದರೆ, ರಾಮನಾಮದಿಂದ ಭವಸಾಗರ ದಾಟಬಹುದೆಂದು ಕಬೀರ ಪ್ರತಿಪಾದಿಸಿದರು. ಆದಾಗ್ಯೂ, ಹರಿ-ಹರ-ಹಜರತ್ ಮಾರ್ಗಗಳೆಲ್ಲವೂ ದೇವನನ್ನು ಕೂಡುವ ಸಾಧನಗಳೆಂಬುದರಲ್ಲಿ ಈರ್ವರು ಸಹಮತ ವ್ಯಕ್ತಪಡಿಸಿದರು.

ವರಕವಿ ಶರೀಫರನ್ನು ಅವರಿಗಿಂತ ಮೂರು-ನಾಲ್ಕು ಶತಮಾನಗಳ ಪೂರ್ವದಲ್ಲಿ ಕರ್ನಾಟಕದಲ್ಲಿ ಆಗಿ ಹೋದ ಇನ್ನೋರ್ವ ವರಕವಿ ಸರ್ವಜ್ಞನಿಗೆ ಹೋಲಿಸಬಹುದು. ಇಬ್ಬರೂ ಪೂರ್ವಾರ್ಧದಲ್ಲಿ ಗೃಹಸ್ಥರಾಗಿದ್ದುಕೊಂಡು ಉತ್ತರಾರ್ಧದಲ್ಲಿ ವಿರತಿ ಹೊಂದಿ ಯೋಗಿಗಳಾಗಿ ಮಾರ್ಪಟ್ಟರು. ಇಬ್ಬರೂ ಸಮಾಜದಲ್ಲಿ ಪ್ರಚಲಿತವಿದ್ದ ಧಾರ್ಮಿಕ ದೋಷಗಳಾದ ಅಂಧಶ್ರದ್ಧೆ. ಗೊಡ್ಡು ಸಂಪ್ರದಾಯ,

ಪೂಜಾರಿ ಪ್ರವೃತ್ತಿ ಹಾಗೂ ಜಾತಿ-ಮತ-ಪಂಗಡಗಳನ್ನು ಅಣಕವಾಡಿದರು. ಇಬ್ಬರೂ ಜನ ಸಾಮಾನ್ಯರಿಗಾಗಿ ಸಂದರ್ಭೋಚಿತವಾಗಿ ಅನೇಕ ಹಾಡು ರಚಿಸಿದರೂ ಅವುಗಳನ್ನು ಬರೆದಿಡುವ ಗೊಡವೆಗೆ ಹೋಗಲಿಲ್ಲ. ಇಬ್ಬರೂ ಜನತೆಯ ಕವಿಗಳು ಜನಪದ ಕವಿಗಳು. ಅವರು ತಮ್ಮ ಕಾವ್ಯದಲ್ಲಿ ಬಳಸಿದ ಭಾಷೆ-ಜನಪದ ಭಾಷೆಯೇ. ಎಷ್ಟೇ ಕ್ಲಿಷ್ಟವಾದ ವಿಷಯವನ್ನು ಅವರು ಸುಲಲಿತವಾದ ಭಾಷೆಯಲ್ಲಿ ಚಿತ್ರಿಸಿದ್ದಾರೆ. ಅವರ ಪದಪ್ರಯೋಗ, ಹೋಲಿಕೆ, ದೃಷ್ಟಾಂತ-ಸರ್ವರಿಗೂ ಚಿರಪರಿಚಿತವಾದವುಗಳೇ. ಇಬ್ಬರೂ ಕರ್ಮ ಹಾಗೂ ವಿಧಿಗಳಲ್ಲಿ ವಿಶ್ವಾಸವಿಟ್ಟವರು. ಇಬ್ಬರೂ ರಾಮಾಯಣ-ಮಹಾಭಾರತಗಳಿಂದ ದೃಷ್ಟಾಂತಗಳನ್ನಿತ್ತು ನೀತಿ ಬೋಧಿಸಿದರು.

ಶರೀಫ್ ಸರ್ವಜ್ಞರಲ್ಲಿ ಇಷ್ಟೊಂದು ಸಾಮ್ಯಗಳಿದ್ದರೂ ಅವರಲ್ಲಿ ಕೆಲವೊಂದು ಮತಬೇಧಗಳಿರುವುದನ್ನು ಗುರುತಿಸಬಹುದು. ಶರೀಫ್ ಜೀವಿತಕಾಲ, ತಂದೆ ತಾಯಿಗಳ ವಿಚಾರ ನಿಖರವಾಗಿ ಹೇಳಬಹುದಾದರೆ, ಸರ್ವಜ್ಞನ ವಿಷಯವಾಗಿ ನಿಖರವಾದ ಅಭಿಪ್ರಾಯ ವ್ಯಕ್ತಪಡಿಸುವುದು ಪ್ರಯಾಸದ ಕೆಲಸ. ಶರೀಫ್ ತಮ್ಮ ತಂದೆ-ತಾಯಿಗಳನ್ನು ಮಕ್ಕಾ-ಮದೀನ ಸ್ವರೂಪರೆಂದು ಭಾವಿಸಿ ಆದರಭಾವ ಪ್ರಕಟಿಸಿದರೆ, ಸರ್ವಜ್ಞ ಇದಕ್ಕೆ ತದ್ವಿರುದ್ಧ. ಸರ್ವಜ್ಞನಂತೆ ಶರೀಫ್ ನೂರಾರು ಕೃತಿ ರಚಿಸಿದರೂ ಆತನಂತೆ ಕೇವಲ ಕನ್ನಡ ಹಾಗೂ ತ್ರಿಪದಿಯಲ್ಲಿ ಕಾವ್ಯ ರಚಿಸದೆ ಕನ್ನಡ, ಉರ್ದು, ಮರಾಠಿ ಹಾಗೂ ತೆಲಗು ಭಾಷೆಗಳಲ್ಲಿ ಕಾವ್ಯ ರಚಿಸಿ ಅವುಗಳಲ್ಲಿ ವೈವಿಧ್ಯಮಯ ಛಂದಸ್ಸು ಬಳಸಿದರು.

ಶರೀಫ್ ವಿಚಾರಗಳು ಹೊರನೋಟಕ್ಕೆ ಕಬೀರ ಹಾಗೂ ಸರ್ವಜ್ಞರೊಡನೆ ಹೋಲಿಸಿದಾಗಲೂ ಅವರು ತಮ್ಮದೇ ಆದ ಸ್ವತಂತ್ರ ವಿಚಾರಧಾರೆ ಹಾಗೂ ವ್ಯಕ್ತಿತ್ವದಿಂದ ಮೆರೆದರೆಂಬುದು ಗಮನಾರ್ಹ. ಇದಕ್ಕೆ ಮೊದಲಿನಿಂದಲೂ ಅವರು ಪ್ರಭುದೇವರ ಪ್ರಭಾವಕ್ಕೆ ಒಳಗಾಗಿರುವುದೇ ಕಾರಣ. ಈ ಮೊದಲೇ ಹೇಳಿದಂತೆ ಪ್ರಭುದೇವರ ಆತ್ಮಾನುಸಂಧಾನಕ್ಕೆ ಮಾರುಹೋದ ಶರೀಫ್ ಅವರ ಜೀವನಲೀಲೆ ಕುರಿತ ಚಾಮರಸ ಕೃತ 'ಪ್ರಭುಲಿಂಗಲೀಲೆ' ಯನ್ನು ಕೈಪ್ರತಿ ಮಾಡಿಕೊಂಡು ಸದಾ ಅದನ್ನು ತಮ್ಮ ಬಳಿ ಇಟ್ಟುಕೊಂಡಿರುತ್ತಿದ್ದರು. ಪ್ರಭುದೇವರ ಪ್ರಭಾವಕ್ಕೊಳಗಾದ ಶರೀಫ್ ಒಂದೆಡೆ ಸ್ಥಾಯಿಯಾಗಿ ನಿಲ್ಲದೆ ಅಜ್ಞರನ್ನು ಸುಜ್ಞರನ್ನಾಗಿ ಮಾಡುತ್ತ ನಾಡಿನುದ್ದಗಲಕ್ಕೂ ಸಂಚರಿಸಿದರು.

ಶರೀಫ್ ಬದುಕಿದ ಪರಿಸರದಿಂದಾಗಿ ಒಂದು ಬಗೆಯ ಕೆಚ್ಚು., ಸ್ವಾಭಿಮಾನ, ಒರಟು, ಸಾಚಾತನವನ್ನು ಬೆಳಸಿಕೊಂಡರು. ಅದಕ್ಕನುಗುಣವಾಗಿ ತಾವು ಕಂಡದ್ದನ್ನು ಮುಚ್ಚುಮರೆಯಿಲ್ಲದೆ ನೇರವಾಗಿ ನುಡಿದರು. ತಮಗೆ ಒಪ್ಪಿಗೆಯಾಗದ ಸಂಗತಿ ಜೊತೆ ಎಂತಹ ಸನ್ನಿವೇಶದಲ್ಲೇ ಆಗಲಿ, ಯಾರೊಡನೇ ಆಗಲಿ ರಾಜಿಗೆ ಒಪ್ಪದ ಮನೋಭಾವ ಬೆಳೆಸಿಕೊಂಡರು. ಯಾವ ವ್ಯಕ್ತಿ ಹೀಗೆ ಕೆಲವು ಸಂದರ್ಭಗಳಲ್ಲಾದರೂ ರಾಜಿಗೆ ಸಿದ್ಧವಾಗದೆ ಸದಾ ನಿಷ್ಠುರನಾಗಿರುತ್ತಾನೆಯೋ ಅವನು ತಾನೇ ಒಂದು ಸಂಸ್ಥೆಯಾಗಿ ಬೆಳೆಯಬಹುದಾದರೂ ಸಂಸ್ಥೆ ಕಟ್ಟಲಾರ. ಏಕೆಂದರೆ, ಸಂಸ್ಥೆಯ ನಿರ್ಮಾಣಕ್ಕೆ ಜನಗಳ ಜೊತೆ ಹೊಂದಿಕೊಂಡು ಹೋಗುವ ಗುಣ ಅಗತ್ಯವಾಗಿರುತ್ತದೆ. ಬಸವಣ್ಣನವರಲ್ಲಿ ಈ ಹೊಂದಾಣಿಕೆ ಗುಣ ಇದ್ದುದರಿಂದಲೇ ಅವರು ಕಾರ್ಯಕರ್ತರ ಒಂದು ಸಮೂಹವನ್ನು ತಮ್ಮ ಸುತ್ತ ನಿರ್ಮಿಸಿಕೊಳ್ಳಲು ಸಾಧ್ಯವಾಯಿತು. ತಮ್ಮ ಹತ್ತಿರವಿದ್ದ

ಶಿವಶರಣರ ಅಂಕುಡೊಂಕುಗಳೆಲ್ಲ ಅವರಿಗೆ ತಿಳಿದಾಗಲೂ ಅವುಗಳನ್ನು ತಿದ್ದುವುದಕ್ಕೆ ತಾನ್ಯಾರು ಎಂದು ಪ್ರಶ್ನಿಸಿಕೊಂಡು ತಮ್ಮ ವಿನಯ ಪ್ರಕಟಿಸಿದರು. ತಾವು ಜನರ ನಾಯಕರಲ್ಲವೆಂದರೂ ಅವರಿಂದ ನಾಯಕನೆಂದು ಪರಿಗಣಿಸಲ್ಪಟ್ಟರು. ಆದರೆ ಇತರರೊಡನೆ ಹೊಂದಿಕೊಂಡು ಹೋಗುವ ಸ್ವಭಾವ ಶರೀಫ್‌ರಿಂದ ನಿರೀಕ್ಷಿಸುವಂತಿಲ್ಲ. ಆದಾಗ್ಯೂ, ಅವರು ಜನಜೀವನದಿಂದ ದೂರವಾಗಿ, ವಿರಕ್ತರಾಗಿ ಬದುಕಿದರೆಂದು ಹೇಳುವುದು ತಪ್ಪಾದೀತು. ಜೀವನವೆಂದರೆ ಅವರ ಪಾಲಿಗೆ ತಮ್ಮ ಸಹಜೀವಿಗಳ ಸೇವೆಯಲ್ಲದೆ ಮತ್ತೇನೂ ಆಗಿರಲಿಲ್ಲ. ಅದಕ್ಕಾಗಿ ಯಾವುದೊಂದು ಸ್ಥಳದಲ್ಲಿ ನೆಲೆಯಾಗಿ ನಿಲ್ಲದೆ ಸದಾ ಸಂಚಾರಿಯಾಗಿ ಸಂಚರಿಸಿದರು. ತಮ್ಮ ಜ್ಞಾನದ ಬಾನದಿಂದ ಸರ್ವರನ್ನು ತಣಿಸಿದರು, ಮುಕ್ತಿಯ ಹಾದಿ ತೋರಿಸಿದರು.


ಸಾಮಾಜಿಕ ಚಿಂತನ ಮಾಲೆ